ಸಂಸ್ಕಾರ ತರಂಗಿಣೀ

ಪುಷ್ಪ - 9

ಮೊದಲ ಬಾರಿಗೆ ಕನ್ನಡದಲ್ಲಿ

ಆಪಸ್ತಂಬೋಕ್ತ ಗೃಹನಿರ್ಮಾಣ-
ಗೃಹಪ್ರವೇಶದ ಸೂತ್ರ ,
ಪ್ರಯೋಗಕ್ರಮ ಮತ್ತೂ ಸ್ನಾನ-
ಸಂಧ್ಯಾವಂದನೆ-ವೈಶ್ವದೇವ-ಪಂಚ
ಮಹಾಯಜ್ಞಗಳ ಮಂತ್ರಗಳಿಗೆ
ಶ್ರೀ ಸಾಯಣಾಚಾರ್ಯರ ಮತ್ತು
ಶ್ರೀ ಹರದತ್ತರ ಭಾಷ್ಯಾರ್ಥ ಹಾಗೂ
ಆಚಾರ-ಧರ್ಮಶಾಸ್ತ್ರಗಳ ವಿಶೇಷ
ವಿಚಾರಗಳು

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು

ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ

ಎ.ಸಿ. ಶಕ್ತಿಧರ ಶರ್ಮಾ

ಸಂಚಾಲಕರು

ವಿದ್ವಾನ್ ವೇ॥ಬ್ರ॥ ಶ್ರೀ

ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಕಿರಣ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವೇದವೇದಾಂಗ ಮಹಾ ಮಹೋಪಾಧ್ಯಾಯರು

ವಿದ್ವಾನ್ ವೇ॥ಬ್ರ॥ ಶ್ರೀ **ಅಶ್ವತ್ಥನಾರಾಯಣ ಅವಧಾನಿಗಳು**

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ **ವೇಂಕಟೇಶ ಅವಧಾನಿಗಳು**

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ **ಮೀನಾಕ್ಷೀಸುಂದರ ಘನಪಾಠಿಗಳು**

ಸಂಸ್ಕಾರ ತರಂಗಿಣೀ

ಪುಷ್ಪ – 9

ಮೊದಲ ಬಾರಿಗೆ ಕನ್ನಡದಲ್ಲಿ

ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹಪ್ರವೇಶದ ಸೂತ್ರ, ಪ್ರಯೋಗಕ್ರಮ

ಮತ್ತೂ ಸ್ನಾನ – ಸಂಧ್ಯಾವಂದನೆ – ವೈಶ್ವದೇವ – ಬಲಿಹರಣ – ಪಂಚ ಮಹಾಯಜ್ಞಗಳ ಮಂತ್ರಗಳಿಗೆ ಪೂಜ್ಯ ಶ್ರೀ ಸಾಯಣಾಚಾರ್ಯರ ಮತ್ತು ಶ್ರೀ ಹರದತ್ತರ ಭಾಷ್ಯಾರ್ಥ ಹಾಗೂ

ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು

ವಿಷಯಾನುಕ್ರಮಣಿಕೆ

1. ಗ್ರಂಥನಾಮ 1

2. ವಿಷಯಸೂಚಿ 2

3. ಗುರುವಂದನೆ 3

4. ಕೃತಜ್ಞತೆಗಳು 4

5. ಸಂಪಾದಕೀಯ 5

6. ನಮ್ಮ ಪ್ರಕಟಣೆಗಳು 6–7

7. ಪುಸ್ತಕಗಳು ದೊರೆಯುವ ಸ್ಥಳಗಳು 8

8. ಹಿರಿಯರ ನುಡಿ 9–11

9. ಪ್ರಾಸ್ತಾವಿಕ ನುಡಿ 12–16

10. ಚಿಂತನ 17–19

11. ಗೃಹನಿರ್ಮಾಣ – ಪ್ರವೇಶಃ

ಅ) ಆಪಸ್ತಂಬ ಗೃಹ್ಯಸೂತ್ರಂ 20–23

12. ಗೃಹನಿರ್ಮಾಣ – ಪ್ರವೇಶಃ

ಅ) ಪ್ರಯೋಗಃ 24–39

13. ಸ್ನಾನ ಮಂತ್ರಾರ್ಥಃ

ಅ) ಶ್ರೀ ಸಾಯಣ ಭಾಷ್ಯಂ 40–47

14. ಸಂಧ್ಯಾವಂದನ ಮಂತ್ರಾರ್ಥಃ

ಅ) ಶ್ರೀ ಸಾಯಣ ಭಾಷ್ಯಂ 48–59

15. ವೈಶ್ವದೇವ – ಬಲಿಹರಣ ಮಂತ್ರಾರ್ಥಃ

ಅ) ಶ್ರೀ ಹರದತ್ತ ಭಾಷ್ಯಂ 60–65

16. ಪಂಚಮಹಾಯಜ್ಞ ಮಂತ್ರಾರ್ಥಃ

ಅ) ಶ್ರೀ ಹರದತ್ತ ಭಾಷ್ಯಂ 66–71

17. ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು 72–92

॥ ಓಂ ಶ್ರೀ ॥

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ।
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ:
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯ ಚಾರ್ಥಾನ್ ಬಹೂನ್
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ।
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ
ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯ ನಿಧಿ ಅವಧೂತ ಶ್ರೀ ವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಕೃತಜ್ಞತೆಗಳು

ಪವಿತ್ರವಾದ ಈ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ . ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್**, ಶೃಂಗೇರಿ.
2. **ಡಿವೈನ್ ಲೈಫ್ ಸೊಸೈಟಿ,** ಶಿವಾನಂದ ಆಶ್ರಮ, ಹೃಷೀಕೇಶ .
3. **ಬಾಡಿ ಟೆಂಪಲ್ ಯೋಗಾಸೆಂಟರ್,** ಶಿವಮೊಗ್ಗ .
4. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು.
5. **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್** , ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.
6. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು** , ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ .
7. **ಶ್ರೀಯುತ ರಾಮಪ್ರಸಾದ್, ಸಹೋದರರು,** ಅಶ್ವಿನಿ ಡಿಜಿಟಲ್ ಆಡಿಯೋಸ್, ಬೆಂಗಳೂರು .
8. **ಶ್ರೀಯುತ ಪ್ರವೀಣ್‌ರವರು,** ಬೆಂಗಳೂರು .
9. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ .
10. **ಶ್ರೀಯುತ ಶರಚ್ಚಂದ್ರರವರು,** ಡಿ.ಐ.ಜಿ. (ಗುಪ್ತದಳ), ಬೆಂಗಳೂರು .
11. **ಶ್ರೀಯುತ ಡಾ॥ ಮಧುಕೇಶ್ವರ್‌ರವರು,** ತಹಶೀಲ್ದಾರ್, ಭಟ್ಕಳ.
12. **ಶ್ರೀಯುತ ವಿದ್ವಾನ್ ಕಣ್ಣನ್‌ರವರು,** ಹಿರೇಮಗಳೂರು .
13. **ಶ್ರೀಯುತ ಗಣೇಶ್‌ರವರು,** ಎಲ್.ಐ.ಸಿ. ಡೆವಲಪ್ ಮೆಂಟ್ ಆಫೀಸರ್, ಬೆಂಗಳೂರು.
14. **ಶ್ರೀಯುತ ಪ್ರಭಾಕರ್‌ರವರು,** ಇನ್‌ಫರ್‌ಮೇಷನ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರು, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜ್, ಹಾಸನ.

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ದೂ : 9686497982, 08175225445

ಅಕ್ಷರಜೋಡಣೆ : ವೇ॥ಬ್ರ॥ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮಾ

ವರ್ಷ : ಆಗಸ್ಟ್ 2013 (ವಿಜಯ ಸಂವತ್ಸರ, ಶ್ರಾವಣ ಮಾಸ)

ಪ್ರತಿಗಳು : 1,000

ಪುಟಗಳು : 92 + 4 = 96

ಹಕ್ಕುಗಳು : ಸಂಪೂರ್ಣ ಲೇಖಕರದ್ದು©

ಮೌಲ್ಯ : **ಅಮೂಲ್ಯ**

ಪ್ರೋತ್ಸಾಹಯುತ ಕಾಣಿಕೆ :

ಮುದ್ರಕರು : ಚಿತ್ರಕೂಟ ಪ್ರಿಂಟರ್ಸ್, ಶಿವಮೊಗ್ಗ
ಮೊ : 9448449664

ಪ್ರಧಾನ ಮಾರ್ಗದರ್ಶಕರು : **ವೇದವೇದಾಂಗ ಮಹಾಮಹೋಪಾಧ್ಯಾಯರು ವಿದ್ವಾನ್ ವೇ॥ ಬ್ರ॥ ಶ್ರೀ॥ ಅಶ್ವತ್ಥನಾರಾಯಣ ಅವಧಾನಿಗಳು,** ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ

ವೇ॥ ಬ್ರ॥ ಶ್ರೀ॥ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಸಂಚಾಲಕರು : ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಸಲಹೆಗಾರರು : ವೇ॥ಬ್ರ॥ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಈ ಪುಸ್ತಕ ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 **ಅನುಷ್ಠಾನ ತರಂಗಿಣೀ**

(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. **ಸಂಸ್ಕಾರ ತರಂಗಿಣೀ ಪುಷ್ಪ–1** (ಪುಂಸವನ ಮತ್ತು ಸೀಮಂತೋನ್ನಯನ)

3. **ಸಂಸ್ಕಾರ ತರಂಗಿಣೀ ಪುಷ್ಪ–2** (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. **ಸಂಸ್ಕಾರ ತರಂಗಿಣೀ ಪುಷ್ಪ–3** (ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. **ಸಂಸ್ಕಾರ ತರಂಗಿಣೀ ಪುಷ್ಪ–4** (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. **ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5**
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ

(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. **ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ (DVD) ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.**

8. **ಸಂಸ್ಕಾರ ತರಂಗಿಣೀ ಪುಷ್ಪ–6**

(ಅನುಜ್ಞೆ ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. **ಸಂಸ್ಕಾರ ತರಂಗಿಣೀ ಪುಷ್ಪ–7**

(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ**

(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. **ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ**

(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12.ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

13.ವೇದನಾದ ಸಂಗಮ DVD 2 (ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

14.ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ ಹಾಗೂ ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು)

ಮುಂದಿನ ಪ್ರಕಟಣೆಗಳು

1. **ಸಂಸ್ಕಾರ ತರಂಗಿಣೀ ಪುಷ್ಪ – 10** (ಹದಿನಾರು ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಭಾಷ್ಯಾರ್ಥ ಕನ್ನಡದಲ್ಲಿ)
2. **ಸಂಸ್ಕಾರ ತರಂಗಿಣೀ ಪುಷ್ಪ – 11** (ಶ್ರಾದ್ಧ)
3. **ಸಂಸ್ಕಾರ ತರಂಗಿಣೀ ಪುಷ್ಪ – 12** (ಭಾರದ್ವಾಜ ಅಪರ (ಪಿತೃಮೇಧ) ಸೂತ್ರ ಮತ್ತು ಪ್ರಯೋಗ – ಕನ್ನಡದಲ್ಲಿ)
4. **ಸಂಸ್ಕಾರ ತರಂಗಿಣೀ ಪುಷ್ಪ – 13**
   (ಆಪಸ್ತಂಬ ಅಪರ (ಪಿತೃಮೇಧ) ಸೂತ್ರ ಮತ್ತು ಪ್ರಯೋಗ – ಕನ್ನಡದಲ್ಲಿ)
5. **ಸಂಸ್ಕಾರ ತರಂಗಿಣೀ ಪುಷ್ಪ – 14**
   (ಶ್ರೀರುದ್ರ – ಚಮಕ ಮಂತ್ರಗಳಿಗೆ ಘನಪಾಠ)
6. **ಸಂಸ್ಕಾರ ತರಂಗಿಣೀ ಪುಷ್ಪ – 15** (ಮಾರ್ಕಂಡೇಯ ಪುರಾಣದಲ್ಲಿ ಬರುವ ದುರ್ಗಾ ಸಪ್ತಶತಿಯ ಶ್ಲೋಕಗಳು ಮತ್ತು ಅರ್ಥ (ಕನ್ನಡದಲ್ಲಿ)
7. **ಸಂಸ್ಕಾರ ತರಂಗಿಣೀ ಪುಷ್ಪ – 16** (ಮಹಾವಿದ್ಯಾ ಮಂತ್ರ ಮಹಾರಾಜ್ಞೀಯಮ್)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. **ಶಕ್ತಿಧರ ಶರ್ಮಾ**, ಶಿವಮೊಗ್ಗ ಮೊ. : 9686497982
2. **ಶ್ರೀಮಠ ಪುಸ್ತಕಾಲಯ**, ಶಾರದಾಪೀಠಮ್, ಶೃಂಗೇರಿ
3. **ಶೃಂಗೇರಿ ಸ್ಟೋರ್ಸ್**, ಮಾರಿಕಾಂಬ ಗದ್ದುಗೆ ಎದುರು, ಕೋಟೆ ರಸ್ತೆ, ಶಿವಮೊಗ್ಗ
4. **ಉಡುಪಿ ಸ್ಟೋರ್ಸ್**, ಗಾಂಧಿ ನಗರ, ಶಿವಮೊಗ್ಗ
5. **ರಾಜಾರಾಮ್ ಬುಕ್ ಹೌಸ್**, ಶಿವಮೊಗ್ಗ
6. **ಸಪ್ನಾ ಬುಕ್ ಹೌಸ್**, ಮೈಸೂರು
7. **ಬುಕ್ ಸ್ಟೋರ್ಸ್**, ಒಂಟಿಕೊಪ್ಪಲ್ ದೇವಸ್ಥಾನ, ಮೈಸೂರು
8. **ಮ್ಯಾನೇಜರ್, ಶೃಂಗೇರಿ ಶಂಕರಮಠ**, ಅರಮನೆ ಎದುರು, ಮೈಸೂರು
9. **ಕರ್ನಾಟಕ ಪುಸ್ತಕ ಪ್ರದರ್ಶನ**, ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ
10. **ಪ್ರಚೇತಾ ಬುಕ್ ಹೌಸ್**, ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
11. **ವೇದಾಂತ ಬುಕ್ ಹೌಸ್**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
12. **ಸಾಹಿತ್ಯ ಗಂಗಾ**, ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪ, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
13. **ಸಪ್ನಾ ಬುಕ್ ಹೌಸ್**, ಗಾಂಧಿನಗರ, ಬೆಂಗಳೂರು
14. **ಶೃಂಗೇರಿ ಶಂಕರ ಮಠ**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
15. **ನ್ಯೂ ವೇದಾಂತ ಬುಕ್‌ಹೌಸ್**, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
16. **ಬುಕ್ ಹೌಸ್**, ಸರ್ಕಾರಿ ಬಸ್‌ನಿಲ್ದಾಣ, ಚಿತ್ರದುರ್ಗ
17. **ಸಪ್ನ ಬುಕ್ ಹೌಸ್**, ಮಂಗಳೂರು

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸ್ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು ? – ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ . ಸೂತ್ರಕಾರರ ವಾಕ್ಯ ಬೇಕೇ , ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ..., ಪ್ರಯೋಗ – ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪ್ರನಸ್ಥಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಎಂಟು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ನಾಲ್ಕು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – ೭ ಕಾಂಡಗಳಿಂದ ೧೦೨ ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – ೧೦೦ ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ - ಶರ್ಮರ ಮದದಿಯಾದ ಬಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ ೭೦ ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ ೨೦೦೪ರಲ್ಲಿ ಶ್ರೀಯುತ ಶರ್ಮರು **'ವೇದಭೂಷಣ'** ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ ೨೦೦೨ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ-ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ . ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

-ಇತಿ ಶಮ್-

ತಾ-೫-೧-೨೦೧೩

ಸುಪ್ರೀತ ,

ಕ. ನಾ. ಮಾರ್ಕಂಡೇಯ ಅವಧಾನಿ.

ಮತ್ತೂರು ಸಂಸ್ಕೃತ ಗ್ರಾಮ, ಶಿವಮೊಗ್ಗ .

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋಽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ

ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(೨೩ ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು(೨೫,೨೬,೨೭) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(೨೭ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. ೨೮,೨೯ ನೇ ಪ್ರಶ್ನೆಗಳು ಧರ್ಮಸೂತ್ರಗಳು. ೩೦ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ ೩೦ ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ. ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ,

ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಚಿಂತನ .....

ಈ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರಾಗಿರುತ್ತಾರೆಯೇ ವಿನ: ಅವರೆಂದಿಗೂ ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವಿಲ್ಲ, ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನ ಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ! ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೇ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ,

ಶಾಸ್ತ್ರಗಳಲ್ಲಿಲ್ಲದಿರುವ, ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!. ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು – ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ । ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: । ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ(ವಿರೋಧವಲ್ಲದ) ಶಿಷ್ಟಾಚಾರಕ್ಕೆ ೩ನೇ ಆದ್ಯತೆ ॥ ಮತ್ತೂ, ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ । ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. ೨ ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು

ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ

ಅವಶ್ಯಂ ಪಿತರಾಚಾರಂ!, ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಸಂಚಿಕೆಯನ್ನೂ ಹಿಂದಿನ ಸಂಚಿಕೆಗಳಂತೆಯೇ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮಾ.

1. ಗೃಹ ನಿರ್ಮಾಣ – ಪ್ರವೇಶಃ ಆಪಸ್ತಂಬ ಗೃಹ್ಯಸೂತ್ರಂ

ಇಲ್ಲಿಯವರೆಗೆ ಯಜ್ಞಕ್ಕೆ ಅಧಿಕಾರಿಯಾದಂತಹ ಪುರುಷನ ದೇಹಸಂಸ್ಕಾರಗಳನ್ನು ಹೇಳಿದೆವು. ಆ ಎಲ್ಲಾ ಸಂಸ್ಕಾರಗಳನ್ನೂ ಮನೆಯಲ್ಲಿಯೇ ತಾನು ವಾಸಿಸುವ ಸೂರಿನಲ್ಲಿಯೇ ಅವಶ್ಯವಾಗಿ ಮಾಡಬೇಕು, ಆದ್ದರಿಂದ ಆ ಮನೆಯ ನಿರ್ಮಾಣವು ಶಾಸ್ತ್ರೋಕ್ತವಿಧಿಯಿಂದ ಆಗಬೇಕು ಮತ್ತು ಆ ಗೃಹಪ್ರವೇಶವು ಶಾಸ್ತ್ರರೀತಿಯಿಂದ ಆದರೆ ಮನುಷ್ಯನಿಗೆ ಆಯಸ್ಸು–ಧನ–ಯಜ್ಞಫಲ ಮುಂತಾದವು ಸಿದ್ಧಿಸುತ್ತವೆ, ಆದ್ದರಿಂದ ಕ್ರಮಪ್ರಾಪ್ತವಾದ ಗೃಹನಿರ್ಮಾಣ–ಪ್ರವೇಶ ವಿಧಿಗಳನ್ನು ಈಗ ವ್ಯಾಖ್ಯಾನಿಸುತ್ತೇವೆ ॥

ನಿರ್ಮಾಣಂ – ಸೂತ್ರಂ

೧ ದಕ್ಷಿಣಾಪ್ರತ್ಯಕ್ಪ್ರವಣಮಗಾರಾವಕಾಶಮುದ್ಧತ್ಯ ಪಾಲಾಶೇನ ಶಮೀಮಯೇನ ವೋದೂಹೇನ್ಯೈತಾಮೇವ ದಿಶಮುತ್ತರಯೋದೂಹತಿ ॥

ಮನೆಕಟ್ಟುವ ಸಂಪೂರ್ಣ ಜಾಗವನ್ನು ಪಲಾಶ (ಮುತ್ತುಗ) ಅಥವಾ ಶಮೀ (ಬನ್ನಿ) ಮರದ ಕೊಂಬೆಗಳಿಂದ ಅಥವಾ ಈ ಮರಗಳಿಂದ ಮಾಡಲ್ಪಟ್ಟ ಸಾಧನಗಳಿಂದ (ಗುದ್ದಲಿ, ಹಾರೆ.....), ಯದ್ಭೂಮೇ: ಕ್ರೂರಂ ಮಂತ್ರದಿಂದ ಅಗೆದು, ನಂತರ ಅಗೆದು ತೆಗೆದಂತಹ ಎಲ್ಲಾ ಮಣ್ಣನ್ನು ನೈಋತ್ಯ ಭಾಗಕ್ಕೆ (ದಕ್ಷಿಣ – ಪಶ್ಚಿಮ) ಹಾಕಿ, ನೈಋತ್ಯ ಭಾಗವು ಎತ್ತರವಾಗುವಂತೆ ಮಾಡಬೇಕು ॥

೨ ಏವಂ ತ್ರಿ: ॥

ಈ ರೀತಿಯಾಗಿ ಮಂತ್ರಾವೃತ್ತಿಯ ಮೂಲಕ ೩ ಸಲ ಅಗೆಯಬೇಕು ॥

೩ ಕ್ಲೃಪ್ತಮುತ್ತರಯಾಭಿಮೃಶ್ಯ ಪ್ರದಕ್ಷಿಣಂ ಸ್ಥೂಣಾಗರ್ತಾನ್ ಸ್ವಾನಯಿತ್ವಾಭ್ಯಂತರಂ ಪಾಂಸೂನುದುಪ್ಯೋತ್ತರಾಭ್ಯಾಂ ದಕ್ಷಿಣಾಂ ದ್ವಾರಸ್ಥೂಣಾಮವದಧಾತಿ ॥

ನಂತರ ಮುಂದಿನ ಸ್ಯೋನಾಪೃಥಿವಿ ಮಂತ್ರದಿಂದ, ಮನೆ ಕಟ್ಟುವ ಆ ಭೂಭಾಗವನ್ನು ಸ್ಪರ್ಶಿಸಿ, ಕೋಣೆ ಮುಂತಾದವುಗಳನ್ನು ವಿಭಾಗ ಮಾಡುವ ಸ್ಥೂಣಾಗರ್ತ (ಅಳತೆಗೋಲು)ಗಳನ್ನು ಕೆಲಸಗಾರರಿಂದ ಪ್ರದಕ್ಷಿಣೆಯಾಗಿ ನೆಡೆಸಿ (ಮನೆ ಬರುವಂತಹ ಭಾಗದ ಒಳಗಡೆ) ಆ ಭಾಗಗಳಲ್ಲಿ ಪಾಯವನ್ನು ತೆಗೆದು ಮುಂದಿನ ಇಹೈವ ತಿಷ್ಠ ಎಂಬ ೨ ಮಂತ್ರಗಳಿಂದ ದಕ್ಷಿಣಕ್ಕೆ ಆ ಮನೆಯ ಪ್ರದೇಶದಿಂದ ಪ್ರದಕ್ಷಿಣೆಯಾಗಿ ಹೊರಬಂದು ಮಹಾದ್ವಾರದ ಬಾಗಿಲಿನ ಬಲಭಾಗದ ಗೂಟವನ್ನು ನೆಡುತ್ತಾನೆ. ಹೀಗೆ ಪ್ರದಕ್ಷಿಣೆ ಮತ್ತು ಮನೆಯ ಒಳಭಾಗದಲ್ಲಿ ಗಡಿಯ ಗೂಟಗಳನ್ನು ನೆಡುವ ವಿಧಾನವನ್ನು ಹೇಳಿದೆ ॥

೪ ಏವಮಿತರಾಮ್ ॥

ಹೀಗೆಯೇ ಮಹಾದ್ವಾರದ ಬಾಗಿಲಿನ ಎಡಭಾಗದ ಗೂಟವನ್ನೂ ಇಹೈವತಿಷ್ಠ ಮಂತ್ರದಿಂದ ನೆಡುತ್ತಾನೆ ॥

೫ ಯಥಾಖಾತಮಿತರಾ ಅನ್ವವಧಾಯ ವಂಶಮಾಧೀಯಮಾನಮುತ್ತರೇಣ ಯಜುಷಾಭಿಮಂತ್ರಯತೇ ॥

ಹೇಗೆ ಅಗೆದಿರುತ್ತಾನೋ ಆ ಕ್ರಮದಿಂದ ಬೇರೇ ಗೂಟಗಳನ್ನು ಮಂತ್ರವಿಲ್ಲದೇ ಸುಮ್ಮನೇ ನೆಟ್ಟು, ಆ ವಂಶವನ್ನೂ (ಛಾವಣಿ), ಗೂಟಗಳನ್ನೂ ಮುಂದಿನ ಋತೇನ ಸ್ಥೂಣಾ ಮಂತ್ರದಿಂದ ಮುಟ್ಟಬೇಕು ॥

೬ ಸಮ್ಮಿತಮುತ್ತರೈರ್ಯಥಾಲಿಂಗಮ್ ॥

ಗೃಹ ನಿರ್ಮಾಣವಾದ ನಂತರ ಬ್ರಹ್ಮಚ ತೇ ಕ್ಷತ್ರಂ ಚ ಎಂಬ ೫ ಮಂತ್ರಗಳಿಂದ, ಮಂತ್ರದಲ್ಲಿ ಹೇಳಿದ ರೀತಿಯಿಂದ ಆಯಾಯಾ ದಿಕ್ಕುಗಳಲ್ಲಿ

ಮನೆಯ ಭಾಗವನ್ನು ಅಭಿಮಂತ್ರಣ ಮಾಡಬೇಕು(ಮುಟ್ಟಬೇಕು), ಅಲ್ಲಿ ಶಿ ನೇ ಮಂತ್ರವನ್ನು ಮನೆಯ ಮಧ್ಯದಲ್ಲಿ ಅಭಿಮುಖವಾಗಿ ನಿಂತು ಹೇಳಬೇಕು ॥

ಪ್ರವೇಶಃ – ಸೂತ್ರಂ

೭ ಪಾಲಾಶಂ ಶಮೀಮಯಂ ವೇಧ್ಮಮಾದೀಪ್ಯೋತ್ತರಯಾऽಗ್ನಿ ಮುದ್ಧೃತ್ಯೋತ್ತರೇಣ ಯಜುಷಾಗಾರಂ ಪ್ರಪಾದ್ಯ ಉತ್ತರಪೂರ್ವ ದೇಶೇऽಗಾರಸ್ಯ ಉತ್ತರಯಾಗ್ನಿಂ ಪ್ರತಿಷ್ಠಾಪಯತಿ ॥

ಪಾಲಾಶ(ಮುತ್ತುಗ) ಅಥವಾ ಶಮೀ(ಬನ್ನಿ) ಮರದ ಇಧ್ಮವನ್ನು ಮತ್ತು ಸೌದೆ ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಅದರಿಂದ ಔಪಾಸನಾಗ್ನಿಯನ್ನು ಜ್ವಲನೆಮಾಡಿ, ಉದ್ಧ್ರಿಯಮಾಣ: ಮಂತ್ರದಿಂದ ಅಗ್ನಿಯನ್ನು ಉದ್ಧರಣ (ಎತ್ತಿಕೊಂಡು) ಮಾಡಿ(ಅಗ್ನಿಹೋತ್ರದಂತೆ), ಯಾವ ಹಗಲಿನಲ್ಲಿ ಪ್ರವೇಶವೋ ಆ ಹಗಲಿನಲ್ಲಿ ಅಥವಾ ರಾತ್ರಿ ಪ್ರವೇಶವಾದರೆ ಆ ರಾತ್ರಿಯಲ್ಲಿ (ರಾತ್ರಿ ಪ್ರವೇಶವು ಉತ್ತಮವೆಂದು ಶಿಷ್ಟರ ಅಭಿಪ್ರಾಯ) ಮುಂದಿನ ಇಂದ್ರಸ್ಯ ಗೃಹಾ ಮಂತ್ರದಿಂದ ಅಗ್ನಿಯೊಡನೆ ಮನೆಯ ಒಳಹೋಗಿ ಆ ಮನೆಯ ಈಶಾನ್ಯದಲ್ಲಿ(ವಿಧಿಯಂತೆ ಸಂಸ್ಕೃತವಾದ ಪ್ರದೇಶದಲ್ಲಿ) ಅಮೃತಾಹುತಿಂ ಮಂತ್ರದಿಂದ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಬೇಕು । ಶ್ರೌತಾಗ್ನಿಯನ್ನೂ ಹೀಗೆಂಯೇ ವಿಧಿಯಂತೆ ತರಲ್ಪಟ್ಟು ಈ ಕಾಲದಲ್ಲಿಯೇ ಮನೆಯ ಪ್ರವೇಶ ಮಾಡಿ ವಿಧಿಯಂತೆ ಪ್ರತಿಷ್ಠಾಪಿಸುವುದು ॥

೮ ತಸ್ಮಾದ್ದಕ್ಷಿಣಮುದಧಾನಾಯತನಂ ಭವತಿ ॥

ಅದರ (ಔಪಾಸನ ಅಥವಾ ಶ್ರೌತಾಗ್ನಿಯ) ದಕ್ಷಿಣಕ್ಕೆ(ಬಲಕ್ಕೆ) ನೀರು ತುಂಬುವ ಪಾತ್ರೆಯನ್ನು ಇಡುವ ಮಂಟಪದ ಸ್ಥಾನವನ್ನಾಗಿ ಮಾಡಬೇಕು ॥

೯ ತಸ್ಮಿನ್ವಿಷೂಚೀನಾಗ್ರಾನ್ ದರ್ಭಾನ್ ಸಂಸ್ತೀರ್ಯ ತೇಷೂತ್ತರಯಾ ವ್ರೀಹಿಯವಾನ್ನ್ಯಪ್ಯ ತತ್ರೋದಧಾನಂ ಪ್ರತಿಷ್ಠಾಪಯತಿ ॥

ಆ ನೀರು ತುಂಬಿದ ಪಾತ್ರೆಯನ್ನಿಡುವ ಸ್ಥಾನದಲ್ಲಿ ಎಲ್ಲಾ ದಿಕ್ಕುಗಳಿಗೂ ಅಗ್ರ ಬರುವಂತೆ ದರ್ಭೆಗಳನ್ನು ಹರಡಿ ಅದರ ಮೇಲೆ ಅನ್ನಪತೇನ್ನಸ್ಯ ಮಂತ್ರದಿಂದ

ಭತ್ತ ಗೋಧಿಗಳ ಮಿಶ್ರಣವನ್ನು ಹಾಕಿ, ಅದರ ಮೇಲೆ ನೀರುತುಂಬುವ ಪಾತ್ರೆಯನ್ನು ಇಡುವ ಮಂಟಪವನ್ನು ರಚಿಸಬೇಕು ॥

೧೦ ತಸ್ಮಿನ್ನುತ್ತರೇಣ ಯಜುಷಾ ಚತುರ ಉದಕುಂಭಾನಾನಯತಿ ॥

ಆ ಮಂಟಪದ ಮೇಲೆ ಅರಿಷ್ಟಾ ಅಸ್ಮಾಕಂ ಮಂತ್ರದಿಂದ ನೀರುತುಂಬಿದ ನಾಲ್ಕು ಕಲಶಗಳನ್ನು ಇಡಬೇಕು, ಪ್ರತೀಕಲಶಕ್ಕೂ ಮಂತ್ರಾವೃತ್ತಿಯುಂಟು ॥

೧೧ ದೀರ್ಣಮುತ್ತರಯಾನುಮಂತ್ರಯತೇ ॥

ಒಂದು ವೇಳೆ ಆ ಮಂಟಪವು ಶಿಥಿಲವಾದರೆ ಭೂಮಿರ್ಭೂಮಿಮಗಾತ್ ಎಂಬ ಮಂತ್ರದಿಂದ ಅನುಮಂತ್ರಣ (ಮುರಿದು, ಬಿದ್ದು ಹೋಗಿರುವ ವಸ್ತುಗಳನ್ನು ಮುಟ್ಟಬೇಕು) ಮಾಡಬೇಕು ॥

೧೨ ಅಗ್ನೇರುಪಸಮಾಧಾನಾದಿ ಆಜ್ಯಭಾಗಾಂತೇ ಉತ್ತರಾ ಆಹುತೀರ್ಹುತ್ವಾ ಜಯಾದಿಪ್ರತಿಪದ್ಯತೇ॥

ನಂತರ ಔಪಾಸನಾಗ್ನಿಯಲ್ಲಿ, ಅಗ್ನಿಮುಖದಂತೆ ಅಗ್ನಿ ಉಪಸಮಾಧಾನವೇ ಮುಂತಾದ ಆಜ್ಯಭಾಗಾಂತದವರೆಗಿನ ಪ್ರಯೋಗವನ್ನುಮಾಡಿ ವಾಸ್ತೋಷ್ಪತೇ ಎಂಬ ೪ ಮಂತ್ರಗಳಿಂದ ಪ್ರಧಾನಾಹುತಿಗಳನ್ನು ಕೊಟ್ಟು ಜಯಾದಿಗಳನ್ನು ಮಾಡಬೇಕು ॥

೧೩ ಪರಿಷೇಚನಾಂತಂ ಕೃತ್ವಾ ಉತ್ತರೇಣ ಯಜುಷಾ ಕುಂಭೇನ ತ್ರಿ:ಪ್ರದಕ್ಷಿಣಂ ಅಂತರತೋsಗಾರಂ ನಿವೇಶನಂ ವಾ ಪರಿಷಿಚ್ಯ ಬ್ರಾಹ್ಮಣಾನ್ ಭೋಜಯೇತ್ ಅಪೂಪೈಸ್ಸಕ್ತುಭಿ: ಓದನೇನೇತಿ ॥

ಹೀಗೆ ಪರಿಷೇಚನಾಂತದವರೆಗೆ ಮಾಡಿ ನಂತರ ಶಿವಗ್ಂಶಿವಂ ಮಂತ್ರದಿಂದ, ಒಂದೇ ಸಲ ತೆಗೆದುಕೊಂಡಂತಹ ನೀರಿರುವ ಕಲಶದಿಂದ ಮನೆಯ ಒಳಗೆ ಅಥವಾ ಹೊರಗೆ ಮನೆಯನ್ನು ೩ ಸಲ ಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ ನಂತರ ಬ್ರಾಹ್ಮಣರನ್ನು ಅಪೂಪ, ಇಡ್ಲಿ, ಸಕ್ತು (ಭಕ್ಷ್ಯ), ಅನ್ನಗಳಿಂದ ಭೂರಿಭೋಜನ ಮಾಡಿಸಬೇಕು ॥

~~~~~~~~~~~~~~~~~~
~~~~~~~~~~~~~~~~~~

ಗೃಹನಿರ್ಮಾಣ ಪ್ರಯೋಗಃ

೧ ಆದೌ ಗೃಹ ನಿರ್ಮಾಣ ಪ್ರದೇಶಂ ಗತ್ವಾ। ಗೃಹ ನಿರ್ಮಾಣ ಕರ್ತಾ ಆಚಮನಂ – ಆಸನವಿಧಿಂ – ಪವಿತ್ರ ಧಾರಣಂ – ಘಂಟಾನಾದಂ – ಪ್ರಾಣಾಯಾಮಂ – ದೀಪಪೂಜಾಂ ಚ ಕೃತ್ವಾ। ಪ್ರಾರಿಪ್ಸಿತಸ್ಯ ಗೃಹ ನಿರ್ಮಾಣ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಕಲಶ ಪೂಜಾಂ, ಗಣಪತಿ ಪೂಜಾಂ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ, ಸಂಪ್ರಾರ್ಥ್ಯ ॥

ಮೊದಲು ಮನೆ ನಿರ್ಮಾಣ ಮಾಡುವ ಪ್ರದೇಶಕ್ಕೆ ಹೋಗಿ । ಯಜಮಾನನು ಆಚಮನ – ಆಸನವಿಧಿ – ಪವಿತ್ರ ಹಾಕಿಕೊಳ್ಳುವಿಕೆ – ಘಂಟಾನಾದ – ಪ್ರಾಣಾಯಾಮ – ದೀಪಪೂಜೆಗಳನ್ನು ಸಹಾ ಮಾಡಿ । ಮುಂದೆ ಮಾಡಲಿರುವ ಪ್ರಧಾನ ಕರ್ಮದ ನಿರ್ವಿಘ್ನತೆಗಾಗಿ ಕಲಶಪೂಜೆಯನ್ನೂ ಮತ್ತು ಗಣಪತಿಪೂಜೆಯನ್ನೂ ಮಾಡುತ್ತೇನೆ ಎಂದು ಸಂಕಲ್ಪಿಸುವುದು ಮತ್ತು ಮಾಡುವುದು ॥

೨ ಗೃಹ ನಿರ್ಮಾಣಂ ಕರ್ತುಂ ಪುಣ್ಯಾಹಂ ಕರಿಷ್ಯೇ ಇತಿ ಸಂಕಲ್ಪ್ಯ । ಗೃಹ ನಿರ್ಮಾಣ ಕರ್ಮಣಃ ಪುಣ್ಯಾಹಂ ಭವಂತೋಬ್ರುವಂತು । ಗೃಹ ನಿರ್ಮಾಣ ಕರ್ಮಣೇ ಸ್ವಸ್ತಿ ಭವಂತೋಬ್ರುವಂತು। ಗೃಹ ನಿರ್ಮಾಣ ಕರ್ಮಣಃ ಋದ್ಧಿಂ ಭವಂತೋಬ್ರುವಂತು। ಇತಿ ಪುಣ್ಯಾಹವಾಚನಂ ಕೃತ್ವಾ। ಚತುರೋ ಬ್ರಾಹ್ಮಣಾನ್ ಅನ್ನೇನ ಪರಿವಿಶ್ಯ (ನಾಂದೀ) ॥

ಮನೆ ಕಟ್ಟುವ ಕರ್ಮದ ಅಂಗವಾಗಿ, ಶುದ್ಧಿಗಾಗಿ ಪುಣ್ಯಾಹ ವಾಚನ ಮಾಡುತ್ತೇನೆ ಎಂದು ಸಂಕಲ್ಪಿಸಿ । ಅವರಿಂದ, ಮೇಲೆ ಹೇಳಿರುವಂತೆ ಕರ್ಮಣಃ ಪುಣ್ಯಾಹಂ – ಸ್ವಸ್ತಿ – ಋದ್ಧಿಂ ಎಂದು ಹೇಳಿಸಿ ಪುಣ್ಯಾಹ ವಾಚನ ಮಾಡಿಸಬೇಕು । ನಾಲ್ಕಾರು ಜನ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು (ನಾಂದೀ) ॥

೩ ನೈಋತ್ಯಾಂ ದಿಶಿ ನಿಮ್ನಂ ಗೃಹಪ್ರದೇಶಂ ಖನಿತ್ರಾದಿನಾ ಖನಿತ್ವಾ ಪಾಲಾಶಾದಿನಾ ದಾರುಣಾ ಯದ್ಭೂಮೇ: ಇತಿ ಏತಾಮೇವ ಕೋಣದಿಶಂ ಮೃದ ಪ್ರಾಪಯೇತ್ ಏವಂ ತ್ರಿ:, ಗೃಹ ಪ್ರದೇಶಂ ದ್ವಿತೀಯವಾರಂ ತೃತೀಯವಾರಂ ಚ ಉದೂಹ್ಯ ಪ್ರಾಗುದಕ್ ಪ್ರವಣಂ ಕುರ್ಯಾತ್ ॥

ಮನೆಕಟ್ಟುವ ಸಂಪೂರ್ಣ ಜಾಗವನ್ನು ಪಲಾಶ (ಮುತ್ತುಗ) ಅಥವಾ ಶಮೀ (ಬನ್ನಿ) ಮರದ ಕೊಂಬೆಗಳಿಂದ ಅಥವಾ ಈ ಮರಗಳಿಂದ ಮಾಡಲ್ಪಟ್ಟ ಸಾಧನಗಳಿಂದ (ಗುದ್ದಲಿ, ಹಾರೆ.....), ಯದ್ಭೂಮೇ: ಕ್ರೂರಂ ಮಂತ್ರದಿಂದ ಅಗೆದು, ನಂತರ ಅಗೆದು ತೆಗೆದಂತಹ ಎಲ್ಲಾ ಮಣ್ಣನ್ನು ನೈಋತ್ಯ ಭಾಗಕ್ಕೆ (ದಕ್ಷಿಣ – ಪಶ್ಚಿಮ) ಹಾಕಿ, ನೈಋತ್ಯ ಭಾಗವು ಎತ್ತರವಾಗುವಂತೆ ಮಾಡಬೇಕು । ಹೀಗೆ ಮೂರುಸಲ ಅಗೆದು ನಿರ್ಋತಿ ಭಾಗವು ಎತ್ತರವಾಗುವಂತೆ ಮಾಡಿ, ಪೂರ್ವ – ಉತ್ತರ ಭಾಗವು ತಗ್ಗಾಗುವಂತೆ ಮಾಡಬೇಕು ॥

ಮಂತ್ರ: – ಓಂ ಯದ್ಭೂಮೇ: ಕ್ರೂರಂ ತದಿತೋ ಹರಾಮಿ ಪರಾಚೀಂ ನಿರ್ಋತಿಂ ನಿರ್ವಾಹಯಾಮಿ । ಇದಗ್ಂ ಶ್ರೇಯೋsವಸಾನಮಾಗನ್ಮ ದೇವಾ ಗೋಮದಶ್ವಾವದಿದಮಸ್ತು ಪ್ರ ಭೂಮ ॥

೪ ಸ್ಯೋನಾಪೃಥಿವೀ – ಇತಿ ಕೃಪ್ತಂ ಅಭಿಮೃಶ್ಯ ॥

ಹೀಗೆ ಮಾಡಿದಂತಹ ಪ್ರದೇಶವನ್ನು ಕೆಳಗಿನ ಮಂತ್ರದಿಂದ ಮುಟ್ಟಬೇಕು (ಅಭಿಮಂತ್ರಣೆ ಮಾಡಿ) ॥

ಮಂತ್ರ: – ಓಂ ಸ್ಯೋನಾ ಪೃಥಿವಿ ಭವಾನೃಕ್ಷರಾ ನಿವೇಶನೀ । ಯಚ್ಛಾ ನಶ್ಶರ್ಮ ಸಪ್ರಥಾ: ॥

ಓಂ ಪ್ರಾಗುದಕ್ ಪ್ರವಣಂ ಕೃತಂ ಭೂತಲಂ ಅಭಿಮೃಶ್ಯ ಗೃಹಾಸ್ಥೂಣಾನಾಂ ಗರ್ತಾನ್ ಪ್ರಾಗಾದಿಷು ಪ್ರದಕ್ಷಿಣಂ ಕರ್ಮಕರೈ: ಖಾನಯಿತ್ವಾ ಅಗಾರ ಅಭ್ಯಂತರಂ ಪಾಂಸೂನ್ ಪ್ರಾಪಯಿತ್ವಾ ಇಹೈವ ತಿಷ್ಠ ಇತಿ ದ್ವಾಭ್ಯಾಂ ಗೃಹಾನ್ ನಿಷ್ಕ್ರಮತ ಏವ ಪುರುಷಸ್ಯ ದಕ್ಷಿಣಾಂ ದ್ವಾರಸ್ಥೂಣಾಂ ದ್ವಾರಸ್ಯ ದಕ್ಷಿಣ ಗರ್ತೇ ಪ್ರತಿಷ್ಠಾಪಯತಿ ಏವಂ ಇತರಾಂ ದ್ವಾರಸ್ಯೋತ್ತರ ಗರ್ತೇ ಇಹೈವ ತಿಷ್ಠೇತಿ ದ್ವಾಭ್ಯಾಮೇವ ಉತ್ತರಾಗ್ ಸ್ಥೂಣಾಂ ನಿದಧಾತಿ ॥

ಮನೆ ನಿರ್ಮಾಣದ ಕಂಬಗಳ ಗುಂಡಿಗಳನ್ನು ಪೂರ್ವದಿಕ್ಕಿನಿಂದ ಪ್ರದಕ್ಷಿಣೆಯಾಗಿ ಕರ್ಮಕರರಿಂದ (ಅಗೆಯುವವರಿಂದ) ಅಗೆಸಿ, ಅದರಿಂದ ತೆಗೆದ ಮಣ್ಣನ್ನು ಮನೆ ನಿರ್ಮಾಣವಾಗುವ ಜಾಗದ ಒಳಗೆ ಹಾಕಿ, ಕೆಳಗಿನ ೨ ಮಂತ್ರಗಳಿಂದ ಮನೆಯಿಂದ ಹೊರಗೆ ಹೋಗಬೇಕಾದರೆ ಯಜಮಾನನ ದಕ್ಷಿಣ ಭಾಗದ ದ್ವಾರದ ಗೂಟವನ್ನು (ಕಂಬ) ದ್ವಾರದ ದಕ್ಷಿಣದ ಗುಂಡಿಯಲ್ಲಿ ಇಡಬೇಕು, ಹೀಗೆಯೇ ಕೆಳಗಿನ ಆ ೨ ಮಂತ್ರಗಳಿಂದಲೇ ಉತ್ತರದ್ವಾರದ ದ್ವಾರಕಂಬವನ್ನು ದ್ವಾರದ ಉತ್ತರದ ಗುಂಡಿಯಲ್ಲಿ ಹಾಕಬೇಕು ॥

ಮಂತ್ರೌ – ಓಂ ಇಹೈವ ತಿಷ್ಠ ನಿಮಿತಾ ತಿಲ್ವಲಾ ಸ್ಯಾದಿರಾವತೀ । ಮಧ್ಯೇ ತಾಲ್ಪ್ಯಸ್ಯ ತಿಷ್ಠಾನ್ಮಾತ್ವಾ ಪ್ರಾಪನ್ನಘಾಯವ: ॥

ಆ ತ್ವಾ ಕುಮಾರಸ್ತರುಣ ಆ ವಥ್ಸೋ ಜಗತಾ ಸಹ । ಆ ತ್ವಾ ಪರಿಸ್ರುತ: ಕುಂಭಾ ಆ ದಧ್ನ: ಕಲಶೀರಯನ್ನ್ ॥

೬ ಇತರಾ: ಗೃಹಸ್ಥೂಣಾ: ಖನನ ಕ್ರಮೇಣ ತೂಷ್ಣೀಂ ಗತೇಷು ಅವಸ್ಥಾಪ್ಯ ಋತೇನ ಸ್ಥೂಣೌ ಇತಿ ಸ್ಥೂಣಾಸು ಆಧೀಯಮಾಣಂ ವಂಶಂ ಅಭಿಮಂತ್ರ್ಯ ॥

ಹೀಗೆ ಮನೆಯ ಬೇರೆ ಕಂಬಗಳನ್ನೂ ಅವುಗಳನ್ನು ಅಗೆದ ಕ್ರಮದಂತೆಯೇ ಮಂತ್ರವಿಲ್ಲದೆ ಆಯಾಯಾ ಗುಂಡಿಗಳಲ್ಲಿ ಕಂಬಗಳನ್ನು ನೆಟ್ಟು, ಆ ಕಂಬಗಳ ಮೇಲೆ ಬಿದರಿನ ಅಡ್ಡಪಟ್ಟಿ(ಛಾವಣಿ) ಗಳನ್ನು ಈ ಕೆಳಗಿನ ಮಂತ್ರದಿಂದ ಹಾಕಿ ಅಭಿಮಂತ್ರಣ ಮಾಡಬೇಕು(ಮುಟ್ಟಬೇಕು) ॥

ಮಂತ್ರ: – ಓಂ ಋತೇನ ಸ್ಥೂಣಾವಧಿರೋಹ ವಗ್ಂಶೋಗ್ರೋ ವಿರಾಜನ್ನಪಸೇಧ ಶತ್ರೂನ್ ॥

೭ ಸಂಮಿತಂ ಬ್ರಹ್ಮ ಚ ತೇ ಇತಿ ಮಂತ್ರೈ: ಯಥಾ ಲಿಂಗಂ ಅಭಿಮಂತ್ರಯೇತ್ ॥

ಹೀಗೆಯೇ ನಿರ್ಮಾಣ ಮಾಡಿದಂತಹ ಮನೆಯನ್ನು, ಈ ಕೆಳಗಿನ ಮಂತ್ರಗಳಿಂದ ಯಥಾ ಲಿಂಗವಾಗಿ (ಮಂತ್ರದಲ್ಲಿ ಬರುವಂತಹ ದಿಕ್ಕುಗಳ ಭಾಗದಲ್ಲಿಯೇ ನಿಂತು ಹೇಳಬೇಕು, ಕೊನೆಯ ವಾಕ್ಯವನ್ನು ಹೇಳುವಾಗ ಮನೆಯ ಮಧ್ಯದಲ್ಲಿ ನಿಂತು ಹೇಳಬೇಕು) ಅಭಿಮಂತ್ರಣ ಮಾಡಬೇಕು (ಮುಟ್ಟಬೇಕು) ॥

ಓಂ ಬ್ರಹ್ಮ ಚ ತೇ ಕ್ಷತ್ರಂ ಚ ಪೂರ್ವೇ ಸ್ಥೂಣೇ ಅಭಿರಕ್ಷತು । ಯಜ್ಞಶ್ಚ ದಕ್ಷಿಣಾಶ್ಚ ದಕ್ಷಿಣೇ । ಇಷಶ್ಚೋರ್ಜಶ್ಚಾಪರೇ । ಮಿತ್ರಶ್ಚ ವರುಣಶ್ಚೋತ್ತರೇ । ಧರ್ಮಸ್ತೇ ಸ್ಥೂಣಾರಾಜಶ್ರೀಸ್ತೇ ಸ್ತೂಪ: ॥

ಆಪಸ್ತಂಬೋಕ್ತ ಗೃಹಪ್ರವೇಶ ಪ್ರಯೋಗಃ

ಗಮನಿಸಿ –

(ಆಪಸ್ತಂಬ ಮಹರ್ಷಿಗಳ ಅಭಿಪ್ರಾಯದಂತೆ, ಗೃಹಪ್ರವೇಶ ಕರ್ಮಕ್ಕೇ ಅಂಟಿಕೊಂಡಂತೆ ಅಂದರೆ ಈ ಕರ್ಮದ ಅಂಗವಾಗಿ(ವಿಧಿಯಾಗಿ) ರಾಕ್ಷೋಘ್ನಹೋಮವನ್ನಾಗಲೀ, ಅಘೋರರುದ್ರಹೋಮವನ್ನಾಗಲೀ, ಬಲಿಗಳನ್ನಾಗಲೀ, ಇತರ ಯಾವುದೇ ದೇವತಾಶಾಂತಿಗಳನ್ನು ಅವರು ಹೇಳಿಲ್ಲ । ಅವರ ಅಭಿಪ್ರಾಯದಲ್ಲಿ ಈ ಗೃಹಪ್ರವೇಶ ಕರ್ಮದಲ್ಲಿ– ಹಿಂದಿನ ದಿನ ಅಥವಾ ಅಂದೇ ಯಜಮಾನನು ಆ ಸಮಯದಲ್ಲಿ ಎಲ್ಲಿ ಯಾವ ಮನೆಯಲ್ಲಿ ವಾಸಿಸುತ್ತಿರುತ್ತಾನೋ ಅಲ್ಲೇ ಮಂಗಳಸ್ನಾನ – ಸಂಕಲ್ಪ – ಪುಣ್ಯಾಹ – ನಾಂದೀಸಮಾರಾಧನೆಗಳನ್ನು(ಈಗ ನಾವುಗಳು ಮಾಡುತ್ತಿರುವಂತೆ ಪ್ರವೇಶವಾದ ನಂತರ ನಾಂದಿಯನ್ನು ಮಾಡುವುದು ಶಾಸ್ತ್ರೀಯದೃಷ್ಟಿಯಿಂದ ಸೂಕ್ತವಲ್ಲ, ಏಕೆಂದರೆ – ಗೃಹಪ್ರವೇಶ ಎಂಬ ಪ್ರಧಾನಕರ್ಮದ ಅಂಗವಾಗಿರುವುದು ನಾಂದೀಶ್ರಾದ್ಧ, ಅಂದರೆ ಪ್ರಧಾನಕರ್ಮಕ್ಕೆ ಮೊದಲು ನಾಂದಿಯನ್ನು ಮಾಡಬೇಕಾಗಿರುವುದು ಶಾಸ್ತ್ರೀಯತೆ, ಹೀಗಿರುವಾಗ ಪ್ರಧಾನಕರ್ಮವಾದ 'ಗೃಹಪ್ರವೇಶ'ವೇ ಆದಮೇಲೆ ಅಂಗಕರ್ಮವಾದ ಮತ್ತು ಮೊದಲು ಮಾಡಬೇಕಾದ ನಾಂದಿಯನ್ನು ನಂತರ ಮಾಡುವುದರಲ್ಲಿ ಯಾವ ಯುಕ್ತಿಯಿದೆಯೋ, ಶಾಸ್ತ್ರೀಯತೆ ಇದೆಯೋ ತಿಳಿಯದಾಗಿದೆ!!) ಮಾಡಿಕೊಂಡು, ನಂತರ

ಸಂಜೆ ಅಗ್ನಿಪುನಸ್ಸಂಧಾನವನ್ನು ಮಾಡಿ(ಅಗ್ನಿಪುನಸ್ಸಂಧಾನವು ಸಂಜೆಯೇ ಆಗಬೇಕೆಂಬುದು ಶಾಸ್ತ್ರವಾಕ್ಯ), ಸಾಯಮೌಪಾಸನವನ್ನು ಮಾಡುವುದು(ಅಗ್ನಿ ರಕ್ಷಣೆಯು ಕಷ್ಟವಾಗಿದ್ದಲ್ಲಿ, ಸಮಿತ್ ಸಮಾರೋಪಣ ಅಥವಾ ಆತ್ಮಸಮಾರೋಪಣ ಮಾಡಿಕೊಳ್ಳುವುದು) । (ಒಂದುವೇಳೆ ಸಂಜೆಯ ಮುಹೂರ್ತದಲ್ಲಿ ಪ್ರವೇಶವಿದ್ದಲ್ಲಿ ಪುನಸ್ಸಂಧಾನವಾದಂತಹ ಅಗ್ನಿಯನ್ನು ಮಂತ್ರೋಕ್ತವಾಗಿ ತೆಗೆದು ಹಿಡಿದುಕೊಂಡು ಮಂತ್ರೋಕ್ತತೀರ್ಥದೊಂದಿಗೂ ಹೊಸಮನೆಯೊಳಕ್ಕೆ ಪ್ರವೇಶಿಸಿ, ಅಗ್ನಿಯನ್ನು ಈಶಾನ್ಯದಲ್ಲಿ ಇಟ್ಟು ಸಾಯಂಔಪಾಸನವನ್ನು ಮಾಡಿ, ಆ ಅಗ್ನಿಯಲ್ಲೇ ಯಜಮಾನನೊಬ್ಬನೇ ವಾಸ್ತುಹೋಮ ಮಾಡಿ, ಆ ತೀರ್ಥವನ್ನು ಧಾರೆಯಾಗಿ ಮನೆಯ ಒಳಗೆ ಅಥವ ಹೊರಗೆ ಪ್ರದಕ್ಷಿಣೆಯಾಗಿ ಹಾಕುವುದು) ಬೆಳಿಗ್ಗೆ ಪ್ರವೇಶವಿದ್ದಲ್ಲಿ, ಸಮಯಕ್ಕೆ ಸರಿಯಾಗಿ ಮಂತ್ರೋಕ್ತ ತೀರ್ಥವನ್ನು ಮತ್ತು ಔಪಾಸನಾಗ್ನಿಯನ್ನು(ಒಂದೊಮ್ಮೆ ಔಪಾಸನಾಗ್ನಿಯು ಆತ್ಮಸಮಾರೋಪವೋ, ಸಮಿತ್ಸಮಾರೋಪವೋ ಆಗಿದ್ದಲ್ಲಿ, ಪುನಃ ಅಗ್ನಿಸ್ವರೂಪವಾಗಿ ಮಂತ್ರದಿಂದ ಮಾಡಿಕೊಂಡು) ಹಿಡಿದುಕೊಂಡು ಸುಮುಹೂರ್ತದಲ್ಲಿ ಮನೆಯ ಒಳಕ್ಕೆ ಯಜಮಾನನು ಹೋಗುವುದೇ ಪ್ರವೇಶ ಹಾಗೂ ಆ ಔಪಾಸನಾಗ್ನಿಯಲ್ಲಿಯೇ ಆ ಯಜಮಾನನೊಬ್ಬನೇ ಷಟ್ಪಾತ್ರ ಪ್ರಯೋಗದಿಂದ ಯಥಾಸಂಖ್ಯೆಯಲ್ಲಿ ವಾಸ್ತುದೇವತಾ ಮಂತ್ರಗಳಿಂದ ಹೋಮಿಸುವುದೇ ವಾಸ್ತುಶಾಂತಿ । ನಂತರ ಆ ತೀರ್ಥವನ್ನು ಮನೆಯ ಒಳಗೆ ಅಥವಾ ಹೊರಗೆ ಪ್ರದಕ್ಷಿಣೆಯಾಗಿ ಧಾರೆಯಾಗಿ ಚೆಲ್ಲುವುದು, ಶಕ್ತ್ಯನುಸಾರ ಅನ್ನದಾನ ಮಾಡುವುದು ಇದುವೇ ಆಪಸ್ತಂಬಮಹರ್ಷಿಗಳು ತಮ್ಮ ಸೂತ್ರದಲ್ಲಿ ಉಪದೇಶಿಸಿರುವ ಶಾಸ್ತ್ರೀಯ ಕ್ರಮ । ಹಾಗಾಗಿ ಆಪಸ್ತಂಬ ಮಹರ್ಷಿಗಳ ಸೂತ್ರವನ್ನು ಅನುಸರಿಸುವವರು ತಮ್ಮ ಸೂತ್ರಕಾರರು ಹೇಳಿರುವಂತೆಯೇ ಗೃಹನಿರ್ಮಾಣ ಮತ್ತು ಗೃಹಪ್ರವೇಶ ಕರ್ಮವನ್ನು ಮಾಡುವುದೇ ಶ್ರೇಯಸ್ಕರವು ।

ಇನ್ನೊಂದು ವಿಷಯವೆಂದರೆ – ಮುಹೂರ್ತ ಲಗ್ನಕ್ಕೆ ಗ್ರಹಗಳ ಸ್ಥಿತಿಯು ಅನುಕೂಲವಾಗಿರಲೆಂದು ಅಥವಾ ಗ್ರಹಗಳ ಸ್ಥಿತಿಯಲ್ಲಿರಬಹುದಾದ ದೋಷಗಳ ನಿವಾರಣೆಗೆ ಮಾಡುವಂತಹ ಗ್ರಹಶಾಂತಿಯನ್ನು ಗೃಹಪ್ರವೇಶ ಕರ್ಮಕ್ಕೆ ಮೊದಲು ಮಾಡಬೇಕೇ ವಿನಃ, ಪ್ರವೇಶ ಆದ ನಂತರ ಮಾಡುವುದು ಮುಹೂರ್ತಲಗ್ನದಲ್ಲಿರಬಹುದಾದ ದೋಷಗಳ ನಿವಾರಣೆಗೆ ಮಾಡುವಂತಹದ್ದಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು!! । ಮತ್ತೇ, ಪ್ರವೇಶವಾದ ನಂತರ ಮಾಡುವ (ಇಷ್ಟವಿದ್ದಲ್ಲಿ) ಗ್ರಹಶಾಂತಿಗಳು ಆ ಹೊಸಮನೆಯಲ್ಲಿ ಇನ್ನುಮುಂದೆ ಎಲ್ಲಾ ರೀತಿಯ ಅನುಕೂಲವಾಗಲಿ ಎಂಬ ಉದ್ದೇಶವಾಗಿರುತ್ತದಷ್ಟೇ, ಹೊರತು ಪ್ರವೇಶಲಗ್ನದ ಮುಹೂರ್ತದಲ್ಲಿರಬಹುದಾದ ದೋಷಗಳ ನಿವಾರಣೆಗೆ ಯಾವುದೇ ರೀತಿಯಲ್ಲಿ ಸಹಕಾರಿಯಾಗುವುದಿಲ್ಲ । ವಿಶೇಷವೆಂದರೆ, ಮಹಾತ್ಮರಾದ ಆಪಸ್ತಂಬ ಮಹರ್ಷಿಗಳ ಗೃಹಪ್ರವೇಶ ಕರ್ಮದ ಈ ವಿಧಾನವು ಇಂದಿನ ಸಾಮಾಜಿಕಸ್ಥಿತಿಯಲ್ಲಿ, ಜೀವನಶೈಲಿಯಲ್ಲಿ, ಸಮಯದ ದೃಷ್ಟಿಯಿಂದ–ಸಾಮಗ್ರಿಗಳ ದೃಷ್ಟಿಯಿಂದ–ಹಣದ ದೃಷ್ಟಿಯಿಂದಲೂ ಅತ್ಯಂತ ಅನುಕೂಲಕರವಾಗಿಯೂ ಇರುವಂತಹದ್ದಾಗಿದೆ)

ಪೂರ್ವೇದ್ಯುಃ (ಮೊದಲಧಿನ ಬೆಳಿಗ್ಗೆ)

ಸ್ವನಿವಾಸ ಗೃಹೇ, ಮಂಗಳಸ್ನಾನಂ, ನಿತ್ಯಾಹ್ನಿಕಂ ಚ ಕೃತ್ವಾ । ಸ ಭಾರ್ಯಃ, ಅನುಜ್ಞಾಂ ಗೃಹೀತ್ವಾ, ದ್ವಿರಾಚಮನಂ, ಆಸನವಿಧಿಂ, ಘಂಟಾನಾದಂ, ದೀಪಪೂಜಾಂ, ಪವಿತ್ರಧಾರಣಂ, ಪ್ರಾಣಾಯಾಮಂ ಚ ಕೃತ್ವಾ ॥

ತಾನು ಎಲ್ಲಿ ವಾಸವಿರುತ್ತಾನೋ ಆ ಮನೆಯಲ್ಲಿ ಮಂಗಳ ಸ್ನಾನ, ನಿತ್ಯಕರ್ಮಗಳನ್ನು ಮಾಡಿ । ತನ್ನ ಪತ್ನಿಯೊಡನೆ, ಬ್ರಾಹ್ಮಣರಲ್ಲಿ ಅನುಜ್ಞೆಯನ್ನು(ಒಪ್ಪಿಗೆ) ಪಡೆದು, ಕುಳಿತು, ೨ ಆಚಮನ – ಆಸನವಿಧಿ – ಘಂಟಾನಾದ – ದೀಪಪೂಜೆ – ಪವಿತ್ರ ಧಾರಣೆ ಮತ್ತು ಪ್ರಾಣಾಯಾಮಗಳನ್ನೂ ಸಹ ಮಾಡಿ – ಸಂಕಲ್ಪಿಸುವುದು ॥

ಶುಭೇ ಶೋಭನೇ ... ಮಮ ಉಪಾತ್ತ ಸಮಸ್ತ ... ಪ್ರೀತ್ಯರ್ಥಂ, ಶ್ವಃ / (ಅದ್ಯದಿನೇ ಸಾಯಂಕಾಲೇ) ನೂತನ ಗೃಹಪ್ರವೇಶಾಖ್ಯ ಕರ್ಮ ಕರಿಷ್ಯೇ, ತಥಾ ಕರಿಷ್ಯಮಾಣ ಗೃಹಪ್ರವೇಶಾಂಗಂ ನಾಂದೀಶೋಭನ ದೇವತಾ ಪ್ರೀತ್ಯರ್ಥಂ, ನಾಂದೀಶೋಭನ ದೇವತಾ ಪ್ರಸಾದ ಸಿದ್ಧ್ಯರ್ಥಂ, ಅದ್ಯ ನಾಂದೀಸಮಾರಾಧನಂ(ಅಶಕ್ತತ್ವಾತ್, ಹಿರಣ್ಯೇನ ನಾಂದೀಸಮಾರಾಧನಂ), ತಥಾ ಪ್ರವೇಶಲಗ್ನಕಾಲೇ ಸುಮುಹೂರ್ತತಾ ಸಿದ್ಧ್ಯರ್ಥಂ, ಗ್ರಹಾಣಾಂ ಅನುಕೂಲ್ಯತಾ ಸಿದ್ಧ್ಯರ್ಥಂ, ನವಗ್ರಹ ಪೂಜಾ–ಜಪ–ಹೋಮಾಖ್ಯಾದಿ ಕರ್ಮ ಕರಿಷ್ಯೇ । ತದಾದೌ, ಕಲಶಪೂಜಾಂ – ಗಣಪತಿಪೂಜಾಂ – ಪುಣ್ಯಾಹವಾಚನಂ ಚ ಕರಿಷ್ಯೇ – ಇತಿ ಸಂಕಲ್ಪ್ಯ– ಕೃತ್ವಾ ॥

ಸಂಕಲ್ಪದಲ್ಲಿ, ಪರಮೇಶ್ವರನ ಪ್ರೀತಿಗಾಗಿ, ನಾಳೆದಿನ ಅಥವಾ (ಇಂದು ಸಂಜೆ) ಗೃಹಪ್ರವೇಶಕರ್ಮವನ್ನು ಮಾಡುತ್ತೇನೆ, ಹಾಗೆಯೇ ಮಾಡಲ್ಪಡುವ ಗೃಹಪ್ರವೇಶ ಕರ್ಮದ ಅಂಗವಾಗಿ, ನಾಂದೀದೇವತೆಗಳ ಪ್ರೀತಿ ಮತ್ತು ಅನುಗ್ರಹಕ್ಕಾಗಿ ನಾಂದೀಸಮಾರಾಧನೆಯನ್ನು(ಅಶಕ್ತರಾಗಿದ್ದಲ್ಲಿ ಮಾತ್ರ, ಹಿರಣ್ಯದಿಂದಲೇ ನಾಂದಿಯನ್ನು) ಮಾಡುತ್ತೇನೆ ಹಾಗೆಯೇ ಪ್ರವೇಶಲಗ್ನದಲ್ಲಿ ಸುಮುಹೂರ್ತವು ಸಿಗಲಿ ಮತ್ತು ಗ್ರಹಗಳ ಒಳ್ಳೆಯ ದೃಷ್ಟಿಯು, ಅನುಗ್ರಹವು ನಮಗೆ ಸಿಗುವುದಕ್ಕಾಗಿ ನವಗ್ರಹಗಳ ಪೂಜೆ–ಜಪ–ಹೋಮಗಳನ್ನೂ ಸಹ ಮಾಡುತ್ತೇನೆ, ಅದಕ್ಕೂ ಮೊದಲು ಕಲಶಪೂಜೆ – ಗಣೇಶಪೂಜೆ ಮತ್ತು ಪುಣ್ಯಾಹಗಳನ್ನೂ ಸಹ ಮಾಡುತ್ತೇನೆ ಎಂದು ಹೇಳುವುದು – ಹಾಗೆಯೇ ಮಾಡುವುದು ॥

ಸಾಯಂ (ಸಂಜೆ)

ಸ್ನಾನಂ –ನಿತ್ಯಾಹ್ನಿಕಂ ಕೃತ್ವಾ, ಮಮ ಉಪಾತ್ತ ... ಪ್ರೀತ್ಯರ್ಥಂ, ಅಗ್ನಿಪುನಸ್ಸಂಧಾನಪೂರ್ವಕ ಸಾಯಮೌಪಾಸನಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ವಿಧಿನಾ, ಅಗ್ನಿ ಪುನಸ್ಸಂಧಾನಂ, ಸಾಯಂ ಔಪಾಸನಂ ಚ ಕೃತ್ವಾ ॥

ಸ್ನಾನ, ಸಂಧ್ಯಾವಂದನೆಗಳನ್ನು ಮಾಡಿ, ಶಾಸ್ತ್ರವಿಧಿಯಂತೆ, ಅಗ್ನಿಪುನಸ್ಸಂಧಾನ ಮತ್ತು ಸಾಯಮೌಪಾಸನವನ್ನೂ ಸಹ ಮಾಡುತ್ತೇನೆ ಎಂದು ಸಂಕಲ್ಪಿಸುವುದು – ಮಾಡುವುದು ॥ (ಸಂಜೆಯೇ ಪ್ರವೇಶವಿದ್ದಲ್ಲಿ ಈ ಮುಂದೆ ತಿಳಿಸಿರುವಂತೆಯೇ ಪ್ರವೇಶ ಕಾರ್ಯಗಳನ್ನು ಮಾಡುವುದು । ಒಂದುವೇಳೆ ಮರುದಿನ ಪ್ರವೇಶವಿದ್ದಲ್ಲಿ ಅಗ್ನಿಯನ್ನು ರಕ್ಷಣೆ ಮಾಡಬೇಕು, ಆದರೆ ಅಗ್ನಿ ರಕ್ಷಣೆಯು ಕಷ್ಟವಾಗಿದ್ದಲ್ಲಿ, ಆತ್ಮ ಅಥವಾ ಸಮಿತ್ ಸಮಾರೋಪಣವನ್ನು ವಿಧಿಯಂತೆ ಮಾಡುವುದು । ಅದರ ವಿಧಾನ 'ಸಂಸ್ಕಾರ ತರಂಗಿಣೀ ಪುಷ್ಪ – ೭' ರಲ್ಲಿ ಇದೆ ॥

ಪರೇದ್ಯುಃ (ಮರುದಿನ)

ಸ್ನಾನಂ, ನಿತ್ಯಾಹ್ನಿಕಂ ಕೃತ್ವಾ । ಸ ಭಾರ್ಯಃ, ಅನುಜ್ಞಾಂ ಗೃಹೀತ್ವಾ, ದ್ವಿರಾಚಮನಂ, ಆಸನವಿಧಿಂ, ಘಂಟಾನಾದಂ, ದೀಪಪೂಜಾಂ, ಪವಿತ್ರ ಧಾರಣಂ, ಪ್ರಾಣಾಯಾಮಂ ಚ ಕೃತ್ವಾ ॥

ಸ್ನಾನ, ಸಂಧ್ಯಾವಂದನೆಗಳನ್ನು ಮಾಡಿ । ತನ್ನ ಪತ್ನಿಯೊಡನೆ, ಬ್ರಾಹ್ಮಣರಲ್ಲಿ ಅನುಜ್ಞೆಯನ್ನು (ಒಪ್ಪಿಗೆ) ಪಡೆದು, ಮುಖ್ಯ ಬಾಗಿಲಿನ ಹೊರಗೆ ಹೊಸಲಿನ ಬಳಿ ಕುಳಿತು, ೨ ಆಚಮನ, ಆಸನವಿಧಿ, ಘಂಟಾನಾದ, ದೀಪಪೂಜೆ, – ಪವಿತ್ರಧಾರಣೆ, ಪ್ರಾಣಾಯಾಮಗಳನ್ನೂ ಸಹ ಮಾಡಿ – ಸಂಕಲ್ಪಿಸುವುದು ॥

ಸಂಕಲ್ಪ್ಯ

ಶುಭತಿಥೌ, ಶೋಭನೇಮುಹೂರ್ತೇ, ಅದ್ಯಬ್ರಹ್ಮಣಃ, ದ್ವಿತೀಯಪರಾರ್ಧೇ, ಶ್ವೇತವರಾಹಕಲ್ಪೇ, ವೈವಸ್ವತಮನ್ವಂತರೇ, ಅಷ್ಟಾವಿಂಶತಿ ತಮೇ ಕಲಿಯುಗೇ, ಪ್ರಥಮೇಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡಕಾರಣ್ಯೇ, ಗೋದಾವರ್ಯಾಃ, ದಕ್ಷಿಣೇತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೇ, ಮೇರೋರ್ದಕ್ಷಿಣೇಪಾರ್ಶ್ವೇ, ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೇ, ಚಾಂದ್ರಮಾನೇನ, ಅಸ್ಯ ಪ್ರಭವಾದಿ ಷಷ್ಟ್ಯಾಃ ಸಂವತ್ಸರಾಣಾಂ ಮಧ್ಯೇ, ಶ್ರೀಮತ್ ... ನಾಮಸಂವತ್ಸರೇ ... ಅಯನೇ ... ಋತೌ ... ಮಾಸೇ ... ಪಕ್ಷೇ ... ಶುಭತಿಥೌ, ... ವಾಸರ ಯುಕ್ತಾಯಾಂ, ... ನಕ್ಷತ್ರಯುಕ್ತಾಯಾಂ, ಶುಭಯೋಗ, ಶುಭಕರಣ, ಏವಂಗುಣ ವಿಶೇಷಣ ವಿಶಿಷ್ಟಾಯಾಂ, ಅಸ್ಯಾಂ, ಶುಭತಿಥೌ, ಮಮ ಉಪಾತ್ತ–ಸಮಸ್ತ–ದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ...ಗೋತ್ರೋದ್ಭವಸ್ಯ (ಗೋತ್ರೋದ್ಭವಾಯಾಃ), ...ನಕ್ಷತ್ರೇ ...ರಾಶೌ ಜಾತಸ್ಯ (ಜಾತಾಯಾಃ), ನಾಮಧೇಯಸ್ಯ (ನಾಮ್ನ್ಯಾಃ) ಮಮ (ಧರ್ಮಕಾಂತಾಯಾಃ/ಕುಮಾರ್ಯಾಃ/ಕುಮಾರಸ್ಯ/ಜನನ್ಯಾಃ/ಜನಕಸ್ಯ) ಅಸ್ಮಾಕಂ ಸಹ ಕುಟುಂಬಾನಾಂ ಸಮಸ್ತ ಸನ್ಮಂಗಳಾವಾಪ್ತ್ಯರ್ಥಂ, ಇಹಜನ್ಮನಿ ಪೂರ್ವಜನ್ಮನಿ ಜನ್ಮಾಂತರೇಷು ಚ ಬಾಲ್ಯ ಕೌಮಾರ ಯೌವನ ವಾರ್ಧಕೇಷು ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥಾಸು ಜ್ಞಾನತಃ ಅಜ್ಞಾನತಶ್ಚ ಸ್ವತಃ ಪರ ಪ್ರೇರಣಯಾ ಚ ಸಂಭಾವಿತಾನಾಂ ಸರ್ವೇಷಾಂ ಪಾಪಾನಾಂ ಅಪನೋದನಾರ್ಥಂ, ಮಮ ನೂತನಗೃಹೇ ಅಲಕ್ಷ್ಮೀ ನಿವಾರಣಾರ್ಥಂ, ಮಹಾಲಕ್ಷ್ಮ್ಯಾಃ ಕೃಪಾಕಟಾಕ್ಷ ಸಿದ್ಧ್ಯರ್ಥಂ, ಮಮ ಧನ ಕನಕ ವಸ್ತು ವಾಹನ ಪುತ್ರ ಪೌತ್ರಾದಿ ಅಷ್ಟೈಶ್ವರ್ಯಾಣಾಂ ಅಭಿವೃದ್ಧ್ಯರ್ಥಂ, ಸಕಲಾಪಚ್ಛಾಂತಿ ಪೂರ್ವಕ ದೀರ್ಘಾಯುಃ ವಿಪುಲತರ

ಧನಧಾನ್ಯಾನವಚ್ಛಿನ್ನ ಸತ್ಸಂತತಿವೃದ್ಧಿ ಸ್ಥಿರಲಕ್ಷ್ಮೀ ಕೀರ್ತಿಲಾಭ ಶತ್ರುಪರಾಜಯಾದಿ ಸಕಲಾಭೀಷ್ಟಸಿದ್ಧ್ಯರ್ಥಂ, ಸದ್ವಿದ್ಯಾ ಸದ್ಬುದ್ಧಿ ಸತ್ಸಂಸ್ಕಾರ ಪ್ರಾಪ್ತ್ಯರ್ಥಂ, ಮಮ ಚಿತ್ತ ಶುದ್ಧ್ಯರ್ಥಂ, ಯಾವಜ್ಜೀವ ಪರ್ಯಂತಂ ಗುರುಕೃಪಾದೃಷ್ಟಿ ಪ್ರಾಪ್ತ್ಯರ್ಥಂ, ಅಸ್ಮಿನ್ ನೂತನಗೃಹೇ ಚಿರಕಾಲ ವಾಸ್ತು ಸಾನ್ನಿಧ್ಯ ಸಿದ್ಧ್ಯರ್ಥಂ, ಮನಶ್ಶಾಂತಿ ಪ್ರಾಪ್ತ್ಯರ್ಥಂ, ಉತ್ತರೋತ್ತರ ಅಭಿವೃದ್ಧ್ಯರ್ಥಂ, ಆಪಸ್ತಂಬೋಕ್ತ ಪ್ರಕಾರೇಣ ಮಮ ನೂತನಗೃಹ ಪ್ರವೇಶಾಖ್ಯ ಕರ್ಮ ಕರಿಷ್ಯೇ / ತದಾದೌ, ತದಂಗ ಕಲಶಪೂಜಾಂ, ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ, ಗಣಪತಿಪೂಜಾಂ (ಸ್ಮರಣಂ), ಸ್ಥಳಶುದ್ಧ್ಯರ್ಥಂ, ದ್ರವ್ಯಶುದ್ಧ್ಯರ್ಥಂ ಪುಣ್ಯಾಹಂ ತಥಾ (ದೇಹಳೀ) ದ್ವಾರಲಕ್ಷ್ಮೀ ಪೂಜಾಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

(ಕಲಶಪೂಜೆ, ಗಣಪತಿಪೂಜೆ, ಪುಣ್ಯಾಹ ಮತ್ತು ದ್ವಾರಲಕ್ಷ್ಮೀಪೂಜೆಗಳನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ, ದೇವತಾ ಆಚಮ್ಯ ಪಾತ್ರೆಯಿಂದ ಒಂದು ಉದ್ಧರಣೆ ನೀರನ್ನು ದೇವತಾ ಅರ್ಘ್ಯ ಪಾತ್ರೆಗೆ ಬಿಡುವುದು ಮತ್ತೂ ಅವುಗಳನ್ನು ಮಾಡುವುದು)

ಪ್ರವೇಶಃ

೧ ಪಾಲಾಶಂ ಶಮೀಮಯಂ ಇಧ್ಮಮಾದೀಪ್ಯ ಉತ್ತರಯಾऽಗ್ನಿಮುದ್ಧೃತ್ಯ ಉತ್ತರೇಣ ಯಜುಷಾಗಾರಂ ಪ್ರಪಾದ್ಯ ಉತ್ತರಪೂರ್ವದೇಶೇ ಅಗಾರಸ್ಯ ಉತ್ತರಯಾಗ್ನಿಂ ಪ್ರತಿಷ್ಠಾಪಯತಿ ॥

ಪಾಲಾಶ(ಮುತ್ತುಗ) ಅಥವಾ ಶಮೀ(ಬನ್ನಿ) ಮರದ ಇಧ್ಮವನ್ನು ಮತ್ತು ಸೌದೆ ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಅದರಿಂದ ಔಪಾಸನಾಗ್ನಿಯನ್ನು ಜ್ವಲನೆಮಾಡಿ, ಉದ್ಧ್ರಿಯಮಾಣ: ಮಂತ್ರದಿಂದ ಅಗ್ನಿಯನ್ನು ಉದ್ಧರಣ(ಎತ್ತಿಕೊಂಡು) ಮಾಡಿ (ಅಗ್ನಿಹೋತ್ರದಂತೆ, ಆ ಔಪಾಸನಾಗ್ನಿಯನ್ನು ತೆಗೆದುಕೊಂಡು) ಯಾವ ಹಗಲಿನಲ್ಲಿ ಪ್ರವೇಶವೋ ಆ ಹಗಲಿನಲ್ಲಿ ಅಥವಾ ರಾತ್ರಿ ಪ್ರವೇಶವಾದರೆ ಆ

ರಾತ್ರಿಯಲ್ಲಿ (ರಾತ್ರಿ ಪ್ರವೇಶವು ಉತ್ತಮವೆಂದು ಶಿಷ್ಟರ ಅಭಿಪ್ರಾಯ) – ಮುಂದಿನ ಇಂದ್ರಸ್ಯ ಗೃಹಾ – ಮಂತ್ರದಿಂದ ಅಗ್ನಿಯೊಡನೆ ಮನೆಯ ಒಳಹೋಗಿ ಆ ಮನೆಯ ಈಶಾನ್ಯದಲ್ಲಿ(ವಿಧಿಯಂತೆ ಸಂಸ್ಕೃತವಾದ ಪ್ರದೇಶದಲ್ಲಿ) – ಅಮೃತಾಹುತಿಂ – ಮಂತ್ರದಿಂದ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಬೇಕು(ಶ್ರೌತಾಗ್ನಿಯನ್ನೂ ಹೀಗೆಯೇ ವಿಧಿಯಂತೆ ತರಲ್ಪಟ್ಟು ಈ ಕಾಲದಲ್ಲಿಯೇ ಮನೆಯ ಪ್ರವೇಶ ಮಾಡಿ ವಿಧಿಯಂತೆ ಪ್ರತಿಷ್ಠಾಪಿಸುವುದು। (ಹಗಲಿನಲ್ಲಿ ಪ್ರವೇಶವಾದರೆ, ಉದ್ಧ್ರಿಯಮಾಣಃ ಮಂತ್ರದಲ್ಲಿ ಬರುವ 'ರಾತ್ರ್ಯಾ ಯದೇನಃಕೃತಮಸ್ತಿ ಪಾಪಗ್ಂ' ಇಷ್ಟು ಪದಗಳನ್ನು ಬಿಟ್ಟು ಆ ಮಂತ್ರವನ್ನು ಹೇಳಬೇಕು । ಅದೇರೀತಿ ರಾತ್ರಿಯಲ್ಲಿ ಪ್ರವೇಶವಾದರೆ, ಇದೇ ಮಂತ್ರದಲ್ಲಿ ಬರುವ 'ಅಹ್ನಾಯದೇನಃಕೃತಮಸ್ತಿ ಪಾಪಗ್ಂ' ಇಷ್ಟು ಪದಗಳನ್ನು ಬಿಟ್ಟು ಆ ಮಂತ್ರವನ್ನು ಹೇಳಬೇಕು ॥)

ಮಂತ್ರಾ: –

ಓಂ ಉದ್ಧ್ರಿಯಮಾಣ ಉದ್ಧರ ಪಾಪ್ಮನೋ ಮಾ ಯದವಿದ್ವಾನ್, ಯಚ್ಚ ವಿದ್ವಾಗ್ಶ್ಚಕಾರ। ಅಹ್ನಾ ಯದೇನ: ಕೃತಮಸ್ತಿ ಪಾಪಗ್ಂ (ರಾತ್ರ್ಯಾ ಯದೇನ: ಕೃತಮಸ್ತಿ ಪಾಪಗ್ಂ) ಸರ್ವಸ್ಮಾನ್ಮೋದ್ಧೃತೋ ಮುಂಚ ತಸ್ಮಾತ್ ॥

ಓಂ ಇಂದ್ರಸ್ಯ ಗೃಹಾ ವಸುಮಂತೋ ವರೂಥಿನಸ್ತಾನಹಗ್ಂ ಸುಮನಸ: ಪ್ರಪದ್ಯೇ ॥

ಓಂ ಅಮೃತಾಹುತಿಮಮೃತಾಯಾಂ ಜುಹೋಮ್ಯಗ್ನಿಂ ಪೃಥಿವ್ಯಾಮಮೃತಸ್ಯ ಜಿತ್ಯೈ ತಯಾऽನಂತಂ ಕಾಮಮಹಂ ಜಯಾನಿ ಪ್ರಜಾಪತಿರ್ಯಂ ಪ್ರಥಮೋ ಜಿಗಾಯಾಗ್ನಿಮಗ್ನೌ ಸ್ವಾಹಾ ॥

೨ ತಸ್ಮಾದ್ದಕ್ಷಿಣಮುದಧಾನಾಯತನಂ ಭವತಿ ॥

ಅದರ (ಔಪಾಸನ ಅಥವಾ ಶ್ರೌತಾಗ್ನಿಯ) ದಕ್ಷಿಣಕ್ಕೆ(ಬಲಕ್ಕೆ) ನೀರು ತುಂಬುವ ಪಾತ್ರೆಯನ್ನು ಇಡುವ ಮಂಟಪದ ಸ್ಥಾನವನ್ನಾಗಿ ಮಾಡಬೇಕು ॥

೩ ತಸ್ಮಿನ್ವಿಷೂಚೀನಾಗ್ರಾನ್ ದರ್ಭಾನ್ ಸಂಸ್ತೀರ್ಯ ತೇಷೂತ್ತರಯಾ ವ್ರೀಹಿಯವಾನ್ನ್ಯಪ್ಯ ತತ್ರೋದಧಾನಂ ಪ್ರತಿಷ್ಠಾಪಯತಿ ॥

ಆ ನೀರು ತುಂಬಿದ ಪಾತ್ರೆಯನ್ನಿಡುವ ಸ್ಥಾನದಲ್ಲಿ ಎಲ್ಲಾ ದಿಕ್ಕುಗಳಿಗೂ ಅಗ್ರ ಬರುವಂತೆ ದರ್ಭೆಯನ್ನು ಹರಡಿ ಅದರ ಮೇಲೆ ಅನ್ನಪತೇನ್ನಸ್ಯ – ಮಂತ್ರದಿಂದ ಭತ್ತ ಗೋಧಿಗಳ ಮಿಶ್ರಣವನ್ನು ಹಾಕಿ, ಅದರ ಮೇಲೆ ನೀರುತುಂಬುವ ಪಾತ್ರೆಯನ್ನು ಇಡುವ ಮಂಟಪವನ್ನು ರಚಿಸಬೇಕು ॥

ಮಂತ್ರಃ –

ಓಂ ಅನ್ನಪತೇನ್ನಸ್ಯ ನೋ ದೇಹ್ಯನಮೀವಸ್ಯ ಶುಷ್ಮಿಣಃ । ಪ್ರಪ್ರದಾತಾರಂ ತಾರಿಷ ಊರ್ಜಂನೋ ದೇಹಿ ದ್ವಿಪದೇ ಚತುಷ್ಪದೇ ॥

೪ ತಸ್ಮಿನ್ನುತ್ತರೇಣ ಯಜುಷಾ ಚತುರ ಉದಕುಂಭಾನಾನಯತಿ ॥

ಆ ಮಂಟಪದ ಮೇಲೆ ಅರಿಷ್ಟಾ ಅಸ್ಮಾಕಂ – ಮಂತ್ರದಿಂದ ೪ ನೀರುತುಂಬಿದ ಕಲಶಗಳನ್ನು ಇಡಬೇಕು, ಪ್ರತೀಕಲಶಕ್ಕೂ ಮಂತ್ರಾವೃತ್ತಿಯುಂಟು ॥

ಮಂತ್ರಃ –

ಓಂ ಅರಿಷ್ಟಾ ಅಸ್ಮಾಕಂ ವೀರಾಸ್ಸಂತು ಮಾ ಪರಾಸೇಚಿ ಮೇ ಧನಮ್ ॥

೫ ದೀರ್ಣಮುತ್ತರಯಾನುಮಂತ್ರಯತೇ ॥

ಒಂದು ವೇಳೆ ಆ ಮಂಟಪವು ಶಿಥಿಲವಾದರೆ ಭೂಮಿರ್ಭೂಮಿಮಗಾತ್ – ಎಂಬ ಮಂತ್ರದಿಂದ ಅನುಮಂತ್ರಣ (ಆ ಮುರಿದು, ಬಿದ್ದು ಹೋಗಿರುವ ವಸ್ತುಗಳನ್ನು ಮುಟ್ಟಬೇಕು) ಮಾಡಬೇಕು ॥

ಮಂತ್ರಃ –

ಓಂ ಭೂಮಿರ್ಭೂಮಿಮಗಾನ್ಮಾತಾ ಮಾತರಮಪ್ಯಗಾತ್ ॥

ವಾಸ್ತು ಹೋಮಃ

೬ 'ವರದ' ನಾಮಾನಮಗ್ನಿಂ ಪ್ರತಿಷ್ಠಾಪ್ಯ । ಷಟ್ಪಾತ್ರ ಪ್ರಯೋಗೇಣ ಅಗ್ನೇರುಪಸಮಾಧಾನಾದಿ ಆಜ್ಯಭಾಗಾಂತೇ ಉತ್ತರಾ ಆಹುತೀರ್ಹುತ್ವಾ ಜಯಾದಿಪ್ರತಿಪದ್ಯತೇ॥

ನಂತರ ಯಜಮಾನನು ಮಾತ್ರ ತನ್ನ ಆ ಔಪಾಸನಾಗ್ನಿಯಲ್ಲಿ, 'ವರದ' ಎಂಬ ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಿ । ಷಟ್ಪಾತ್ರ ವಿಧಾನದಿಂದ ಅಗ್ನಿ ಉಪಸಮಾಧಾನವೇ ಮುಂತಾದ ಆಜ್ಯಭಾಗಾಂತದವರೆಗಿನ ಪ್ರಯೋಗವನ್ನುಮಾಡಿ, (ಮುಖಾಹುತಿ ಇಲ್ಲ) ವಾಸ್ತೋಷ್ಪತೇ – ಎಂಬ ೪ ಮಂತ್ರಗಳಿಂದ ಕೇವಲ ತುಪ್ಪದಿಂದ ಪ್ರಧಾನಾಹುತಿಗಳನ್ನು ಕೊಟ್ಟು, (ಸ್ವಿಷ್ಟಕೃತ್ ಇಲ್ಲ । ಅನೂಯಾಜ ಸಮಿತ್ ಮತ್ತು ಇಧ್ಮಸನ್ನಹನ ಹೋಮಮಾಡಿ) ಜಯಾದಿಗಳನ್ನು ಮಾಡಬೇಕು । ನಂತರ ಅನಾಜ್ಞಾತ ಪ್ರಾಯಶ್ಚಿತ್ತ ಹೋಮಾಂತದವರೆಗೆ ಪ್ರಯೋಗ ಮಾಡಿಬೇಕು । ಪೂರ್ಣಾಹುತಿಯು ಇಲ್ಲ ॥

ಮಂತ್ರಾಃ –

ಓಂ ವಾಸ್ತೋಷ್ಪತೇ ಪ್ರತಿಜಾನೀಹ್ಯಸ್ಮಾನ್ಸ್ವಾವೇಶೋ ಅನಮೀವೋ ಭವಾನಃ । ಯತ್ವೇಮಹೇ ಪ್ರತಿ ತನ್ನೋ ಜುಷಸ್ವ ಶನ್ನ ಏಧಿ ದ್ವಿಪದೇ ಶಂ ಚತುಷ್ಪದೇ ॥

ಓಂ ವಾಸ್ತೋಷ್ಪತೇ ಶಗ್ಮಯಾ ಸಗ್ಂ ಸದಾ ತೇ ಸಕ್ಷೀಮಹಿರಣ್ವಯಾ
ಗಾತುಮಿತ್ಯಾ । ಆವಃ ಕ್ಷೇಮ ಉತಯೋಗೇ ವರನ್ನೋ
ಯೂಯಂಪಾತಸ್ವಸ್ತಿಭಿಸ್ಸದಾನಃ ॥

ಓಂ ವಾಸ್ತೋಷ್ಪತೇ ಪ್ರತರಣೋ ನ ಏಧಿ ಗೋಭಿರಶ್ವೇಭಿರಿಂದೋ ।
ಅಜರಾಸಸ್ತೇ ಸಖ್ಯೇಸ್ಯಾಮ ಪಿತೇವ ಪುತ್ರಾನ್ಪ್ರತಿನೋ ಜುಷಸ್ವ ॥

ಓಂ ಅಮೀವಹಾ ವಾಸ್ತೋಷ್ಪತೇ ವಿಶ್ವಾರೂಪಾಣ್ಯಾ ವಿಶನ್ । ಸಖಾ
ಸುಶೇವ ಏಧಿನಃ ॥

೭ ಪರಿಷೇಚನಾಂತಂ ಕೃತ್ವಾ ಉತ್ತರೇಣ ಯಜುಷಾ ಕುಂಭೇನ ತ್ರಿ:ಪ್ರದಕ್ಷಿಣಂ ಅಂತರತೋಽಗಾರಂ ನಿವೇಶನಂ ವಾ ಪರಿಷಿಚ್ಯ ಬ್ರಾಹ್ಮಣಾನ್ ಭೋಜಯೇತ್ ಅಪೂಪೈಸ್ಸಕ್ತುಭಿ: ಓದನೇನೇತಿ ॥

ಹೀಗೆ ಪರಿಷೇಚನವೇ ಮೊದಲಾಗಿ ಕರ್ಮಸಮಾಪನೆಯನ್ನು ಮಾಡಿ, ನಂತರ ಶಿವಗ್ಂಶಿವಂ ಮಂತ್ರದಿಂದ ಒಂದೇ ಸಲ ತೆಗೆದುಕೊಂಡಂತಹ ನೀರಿರುವ ಕಲಶದಿಂದ ಮನೆಯ ಒಳಗೆ ಅಥವಾ ಹೊರಗೆ ಮನೆಯನ್ನು ೩ ಸಲ ಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ ನಂತರ ಬ್ರಾಹ್ಮಣರನ್ನು ಅಪೂಪ, ಇಡ್ಲಿ, ಸಕ್ತು(ಭಕ್ಷ್ಯ), ಅನ್ನಗಳಿಂದ ಭೂರಿಭೋಜನ ಮಾಡಿಸಬೇಕು ॥

ಮಂತ್ರಃ –

ಓಂ ಶಿವಗ್ಂ ಶಿವಮ್ ॥

ಅವಶ್ಯಂ ಚೇತ್ (ಅವಶ್ಯಕತೆಯಿದ್ದಲ್ಲಿ)

ಅಸ್ಮಿನ್ ಗೃಹೇ ಉತ್ತರೋತ್ತರಾಭಿವೃಧ್ಯರ್ಥಂ, ಸಮಸ್ತಮಂಗಳಾವಾಪ್ತ್ಯರ್ಥಂ, ಆದಿತ್ಯಾದೀನಾಂ ನವಾನಾಂ ಗ್ರಹಾಣಾಂ ಶುಭ ಏಕಾದಶಸ್ಥಾನ ಫಲಾವಾಪ್ತ್ಯರ್ಥಂ ಆದಿತ್ಯಾದಿ ನವಗ್ರಹ ಪೂಜಾ–ಜಪ–ಹೋಮಾಖ್ಯಂ ತಥಾ ವಾಸ್ತು, ರಾಕ್ಷೋಘ್ನ ಇತ್ಯಾದಿ ಶಾಂತ್ಯುಕ್ತ ತತ್ತದ್ದೇವತಾ ಪೂಜಾ–ಜಪ–ಹೋಮಾಖ್ಯಾದಿ ಕರ್ಮ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಈ ಮನೆಯಲ್ಲಿ ಉತ್ತರೋತ್ತರ ಅಭಿವೃದ್ಧಿಯೂ, ಎಲ್ಲರೀತಿಯ ಮಂಗಳಗಳೂ ಆಗುವುದಕ್ಕಾಗಿ ಮತ್ತು ನವಗ್ರಹಗಳಾದಿಯಾಗಿ ಎಲ್ಲಾ ದೇವತೆಗಳ ಕೃಪಾದೃಷ್ಟಿ-ಪೂರ್ಣ ಅನುಗ್ರಹ ದೊರೆಯಲಿ ಎಂಬ ಆಸೆಯಿಂದ (ಕಾಮನೆಯಿಂದ) ನವಗ್ರಹ, ವಾಸ್ತು, ರಾಕ್ಷೋಘ್ನ ಅಥವಾ ಶಾಂತಿಗೆ ಸಂಬಂಧಿಸಿದ ಆಯಾಯಾ ದೇವತೆಗಳ ವಿಶೇಷ ಪೂಜೆ – ಜಪ – ಹೋಮಗಳನ್ನು (ಲೌಕಿಕಾಗ್ನಿಯಲ್ಲಿ) ಮಾಡಬಹುದು । ನಂತರ 'ಶಿವಂ ವಾಸ್ತು' ಎಂಬ ಶಬ್ದವನ್ನು ಬ್ರಾಹ್ಮಣರಿಂದ ಮೂರುಸಲ ಹೇಳಿಸುವುದು । ನಂತರ ಮೇಲೆ ತಿಳಿಸಿರುವ ರೀತಿ ಅನ್ನದಾನವನ್ನು ಮಾಡುವುದು ॥

~~~~~~~~~~~~~~~

2. ಸ್ನಾನ ಮಂತ್ರಾರ್ಥಃ

ಶ್ರೀ ಸಾಯಣ ಭಾಷ್ಯಂ

ತೈತ್ತಿರೀಯ ಕೃಷ್ಣಯಜುರ್ವೇದ ಆರಣ್ಯಕದ ಹತ್ತನೇ ಪ್ರಶ್ನೆಯಾದ ಮಹಾನಾರಾಯಣ ಉಪನಿಷತ್ತಿನಲ್ಲಿರುವ ಅನುವಾಕ

೧ ಓಂ ಹಿರಣ್ಯಶೃಂಗಂ ವರುಣಂ ಪ್ರಪದ್ಯೇ ತೀರ್ಥಂ ಮೇ ದೇಹಿ ಯಾಚಿತಃ ।

ಯನ್ಮಯಾ ಭುಕ್ತಮಸಾಧೂನಾಂ ಪಾಪೇಭ್ಯಶ್ಚ ಪ್ರತಿಗ್ರಹಃ ॥

ಯನ್ಮೇ ಮನಸಾ ವಾಚಾ ಕರ್ಮಣಾ ವಾ ದುಷ್ಕೃತಂ ಕೃತಮ್ ।

ತನ್ನ ಇಂದ್ರೋ ವರುಣೋ ಬೃಹಸ್ಪತಿಸ್ಸವಿತಾ ಚ ಪುನಂತು ಪುನಃ ಪುನಃ ॥

ಸುವರ್ಣದಂತೆ ಮುಕುಟವನ್ನು ಧರಿಸಿರುವ, ಜಲಾಧಿದೇವನಾದ ವರುಣನನ್ನು ಅವನ ಅನುಗ್ರಹವನ್ನು ಪಡೆಯಲು ಅವನಲ್ಲಿಗೆ ಹೋಗುತ್ತೇನೆ। ಅಂತಹ ವರುಣನು ನಾವು ಪ್ರಾರ್ಥಿಸುವಂತಹ ಒಳ್ಳೆಯ ಸ್ಥಾನವನ್ನೂ, ಫಲವನ್ನೂ ಕೊಡಲಿ । ಮತ್ತೂ ಪಾಪಿಗಳ(ಅಧರ್ಮಿಷ್ಠರ) ಮನೆಯಲ್ಲಿ ನಾನು ಊಟಮಾಡಿದ್ದರಿಂದ(ಅವರ ಊಟವನ್ನು ಸ್ವೀಕರಿಸಿದ್ದರಿಂದ) ಬಂದ ಪಾಪಗಳನ್ನು ಮತ್ತು ಅವರಿಂದ ಪ್ರತಿಗ್ರಹ ಮಾಡಲ್ಪಟ್ಟಿದ್ದರಿಂದ ಬಂದ ಪಾಪಗಳನ್ನೂ ಮತ್ತೂ ನಾನು ಮನಸಾ, ವಾಚಾ,
~~~~~~~~~~~~~~~

ಕಾಯಾ ಮಾಡಿದಂತಹ ಪಾಪಗಳನ್ನೂ ಇಂದ್ರಾದಿ ದೇವತೆಗಳು ಪರಿಹರಿಸಿ ನನ್ನನ್ನು ಶುದ್ಧಗೊಳಿಸಲಿ ॥

೨ ಓಂ ನಮೋೋऽಗ್ನಯೇೋऽಪ್ಸುಮತೇೋ ನಮ ಇಂದ್ರಾಯ ನಮೋೋ ವರುಣಾಯ ನಮೋೋ ವಾರುಣ್ಯೈ ನಮೋೋऽದ್ಭ್ಯ: ॥

ಜಲಮಧ್ಯದಲ್ಲಿ ಇರುವಂತಹ ಅಗ್ನಿಗೆ ಮತ್ತು ಇಂದ್ರ, ವರುಣ, ವರುಣಪತ್ನೀ, ಇವರಿಗೆ ನನ್ನ ಪ್ರೀತಿಯ ನಮಸ್ಕಾರಗಳು । ಇವರು ನನ್ನನ್ನು ಪವಿತ್ರಗೊಳಿಸಿ ಕಾಪಾಡಲಿ ॥

೩ ಓಂ ಯದಪಾಂ ಕ್ರೂರಂ ಯದಮೇಧ್ಯಂ ಯದಶಾಂತಂ ತದಪಗಚ್ಛತಾತ್ ॥

ನೀರಿಗೆ ಸಂಬಂಧಿಸಿದ, ಯಾವ ಕ್ರೂರ ರೂಪವಿದೆಯೋ(ಸುಳಿ, ಮಡು ಮುಂತಾದ ಮರಣಕಾರಕ ಸ್ಥಳಗಳು) ಮತ್ತು ನೀರಿಗೆ ಸಂಬಂಧಿಸಿದ ಉಗುಳುವುದು ಮುಂತಾದ ಅಮೇಧ್ಯಗಳಿಂದ ಕೂಡಿದ ರೂಪವಿದೆಯೋ ಮತ್ತು ನೀರಿಗೆ ಸಂಬಂಧಿಸಿದ ವಾತ, ಶ್ಲೇಷ್ಮ ಮುಂತಾದ ಅನಾರೋಗ್ಯವನ್ನು ಉಂಟುಮಾಡುವ ಅಶಾಂತ ರೂಪವಿದೆಯೋ ಅವೆಲ್ಲವನ್ನೂ ನಾನು ಸ್ನಾನಮಾಡುವ ಈ ಜಾಗದಿಂದ ಎಲ್ಲೈ ದೇವತೆಗಳೇ ಪರಿಹರಿಸಿರಿ ॥

೪ ಓಂ ಅತ್ಯಾಶನಾದತೀಪಾನಾದ್ಯಚ್ಚ ಉಗ್ರಾತ್ಪ್ರತಿಗ್ರಹಾತ್ ।
ತನ್ನೋ ವರುಣೋ ರಾಜಾ ಪಾಣಿನಾ ಹ್ಯವಮರ್ಶತು ।
ಸೋऽಹಮಪಾಪೋ ವಿರಜೋ ನಿರ್ಮುಕ್ತೋ ಮುಕ್ತ ಕಿಲ್ಬಿಷ: ।
ನಾಕಸ್ಯ ಪೃಷ್ಠಮಾರುಹ್ಯ ಗಚ್ಛೇದ್ಬ್ರಹ್ಮ ಸ ಲೋಕತಾಮ್ ।
ಯಶ್ಚಾಪ್ಸು ವರುಣಸ್ಯ ಪುನಾತ್ವಘಮರ್ಷಣ: ॥

ದೇವ, ಪಿತೃ, ಮನುಷ್ಯಾದಿ ಯಜ್ಞಗಳನ್ನು ಮಾಡದೇ ಊಟ ಮಾಡಿದ ಅನ್ನವು – ಅತ್ಯಾಶನವು । ದೇವ, ಋಷಿ, ಪಿತೃ ತರ್ಪಣಗಳನ್ನು ಮಾಡದೇ ಕುಡಿದ ನೀರು – ಅತೀಪಾನವು । ಮತ್ತು ಅಶಾಸ್ತ್ರ ನಡವಳಿಕೆ ಇಟ್ಟುಕೊಂಡು ಸಂಗ್ರಹಿಸಿದಂತಹ ಧನವು – ಉಗ್ರರೂಪವು । ಈ ಎಲ್ಲಾ ಅತ್ಯಾಶನ, ಅತೀಪಾನ, ದುಷ್ಪ್ರತಿಗ್ರಹಗಳಿಂದ ಬಂದಂತಹ ನನ್ನ ಪಾಪಗಳನ್ನು ಜಲಾಧಿದೇವತೆಯಾದ ವರುಣರಾಜನು ತನ್ನ ಕೈ ಗಳಿಂದ ಪರಿಹರಿಸಲಿ । ಪಾಪ ರಹಿತನಾದಂತಹ ನಾನು, ಸಂಸಾರಕ್ಕೆ ಕಾರಣವಾದ ರಜೋಗುಣ ರೂಪವಾದ, ರಾಗದ್ವೇಷಾದಿಗಳಿಂದ ಮುಕ್ತನಾಗಿ ಸ್ವರ್ಗಕ್ಕೂ ಮಿಗಿಲಾದ ಹಿರಣ್ಯಗರ್ಭ ಸ್ಥಾನವನ್ನು ಪಡೆಯುವಂತಾಗಲಿ ॥

ಓಂ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿಸ್ತೋಮಗ್ಂ ಸಚತಾಪರುಷ್ಣಿಯಾ ।

ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

ಗಂಗಾದಿ ನದಿಗಳೇ, ನೀವು ಪರುಷ್ಣೀ ಮುಂತಾದ ನದಿಗಳ ಜೊತೆ ನನ್ನ ಈ ಸ್ತೋತ್ರವನ್ನು ಕೇಳಿ ಅನುಗ್ರಹಿಸಿರಿ, ಮತ್ತೂ ನೀವೆಲ್ಲರೂ ನಾನು ಸ್ನಾನ ಮಾಡುವ ಪ್ರದೇಶಕ್ಕೆ ಬಂದು, ಸೇರಿಕೊಳ್ಳಿರಿ (ಗಂಗಾದಿ ಸಮಸ್ತ ನದಿಗಳ ಸ್ನಾನದ ಪುಣ್ಯವು ಬರಲಿ) । (ಪರುಷ್ಣೀ, ಅಸಿಕ್ನೀ, ವಿತಸ್ತಾ, ಸುಷೋಮಾ, ಋಜೀಕಾ, ಮರುದ್ವೃಧಾ ಇವೆಲ್ಲಾ ಸ್ತ್ರೀ ನದಿಗಳು) ॥

ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋऽಧ್ಯಜಾಯತ ।

ತತೋ ರಾತ್ರಿರಜಾಯತ ತತಃ ಸಮುದ್ರೋ ಅರ್ಣವಃ ।

ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ ।

ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ ।

ಸೂರ್ಯಾ ಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್ ।

ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸುವಃ ॥

ಋತವೆಂದರೆ, ಮನಸ್ಸಿನಲ್ಲಿ ಸತ್ಯರೂಪವಾದ ಸಂಕಲ್ಪವನ್ನು ಮಾಡುವುದು । ಸತ್ಯವೆಂದರೆ, ಹೇಗೆ ವಸ್ತುಸ್ಥಿತಿ ಇದೆಯೋ ಹಾಗೇ ಮಾತನಾಡುವುದು । ಈ ಎರಡೂ ಕೂಡ ಪರಮಾತ್ಮನಿಂದ ಉತ್ಪನ್ನವಾದದ್ದಾಗಿದೆ । ಹಾಗೆಯೇ ಶಾಸ್ತ್ರೀಯ ಧರ್ಮ ಸಮೂಹವೂ ಕೂಡ ಪರಮಾತ್ಮನಿಂದ ಉತ್ಪನ್ನವಾದದ್ದಾಗಿದೆ । ಆ ಪರಮಾತ್ಮನು ಸೃಷ್ಟಿಮಾಡಬೇಕೆಂದು ಪರ್ಯಾಲೋಚನೆ ಮಾಡುವ ತಪಸ್ಸನ್ನು ಮಾಡಿದ ಮೇಲೆ, ಸ್ವಪ್ರಕಾಶರೂಪನಾದ ಆ ಪರಮೇಶ್ವರನಿಂದ ರಾತ್ರಿಯು ಉಂಟಾಯಿತು । ಹೀಗೆಯೇ ಹಗಲೂ ಉತ್ಪನ್ನವಾಯಿತು । ನಂತರ ಸಮುದ್ರವು ಉಂಟಾಯಿತು, ನಂತರ ಕ್ಷೀರರೂಪವಾದ ಅರ್ಣವವು (ಸಮುದ್ರ) ಉತ್ಪನ್ನವಾಯಿತು । ನಂತರ ಸಂವತ್ಸರ ರೂಪವಾದ ಕಾಲವು ಸೃಷ್ಟಿಯಾಯಿತು । ಆ ಪರಮೇಶ್ವರನು ಅಹೋರಾತ್ರಿ ರೂಪವಾದ ಎಲ್ಲಾ ಕಾಲವಿಶೇಷಗಳನ್ನೂ ಸೃಷ್ಟಿಸುತ್ತಾ, ಜಗತ್ತಿನ ಸಮಸ್ತ ಜೀವರಾಶಿಗೂ ಒಡೆಯನಾಗಿದ್ದಾನೆ (ಕಾರಣಕರ್ತ)। ಅಂತಹ ಪರಮೇಶ್ವರನು ಸೂರ್ಯಾದಿ ದೇವತೆಗಳನ್ನೂ, ಪೃಥಿವ್ಯಾದಿ ಲೋಕಗಳನ್ನೂ ಯಥಾಪೂರ್ವವಾಗಿ ಸಂಕಲ್ಪಮಾತ್ರದಿಂದ ಸೃಷ್ಟಿಸಿದನು । ಈ ಮಂತ್ರದಲ್ಲಿರುವ 'ದಿವ' ಶಬ್ದವು ದ್ಯುಲೋಕಕ್ಕೆ ಇರುವ ಶಬ್ದವು। 'ಸುವಃ' ಶಬ್ದವು ಭೋಗ ವಿಶೇಷವನ್ನು ಸೂಚಿಸುವ ಶಬ್ದವು ಆಗಿದೆ ॥

೭ ಓಂ ಯತ್ಪೃಥಿವ್ಯಾಗ್ಂ ರಜಸ್ವಮಾಂತರಿಕ್ಷೇ ವಿರೋದಸೀ ।

ಇಮಾಗ್ಂ ಸ್ತದಾಪೋ ವರುಣಃ ಪುನಾತ್ವಘಮರ್ಷಣಃ ।

ಪುನಂತು ವಸವಃ ಪುನಾತು ವರುಣಃ ಪುನಾತ್ವಘಮರ್ಷಣಃ ।

ಏಷ ಭೂತಸ್ಯ ಮಧ್ಯೇ ಭುವನಸ್ಯ ಗೋಪ್ತಾ ।

ಏಷ ಪುಣ್ಯಕೃತಾಂ ಲೋಕಾನೇಷ ಮೃತ್ಯೋರ್ಹಿರಣ್ಮಯಮ್ ।

ದ್ಯಾವಾಪೃಥಿವ್ಯೋರ್ ಹಿರಣ್ಮಯಗ್ಂ ಸಗ್ಂಶ್ರಿತಗ್ಂ ಸುವಃ ।

ಸನಸ್ಸುವಸ್ಸಗ್ಂ ಶಿಶಾಧಿ ॥

ಭೂಮಿಯ ಮೇಲೆ ಇರುವಂತಹ ನಮ್ಮ ಪಾಪವೇನಿದೆಯೋ, ಅಂತರಿಕ್ಷ ಮತ್ತು ದ್ಯುಲೋಕದಲ್ಲಿ ನಮ್ಮ ಯಾವ ಪಾಪವಿದೆಯೋ ಮತ್ತು ಭೂಮಿಯು ಕೆಳಲೋಕಗಳಲ್ಲಿ(ಪಾತಾಳಾದಿ) ನಮ್ಮ ಪಾಪವೇನಿದೆಯೋ ಹಾಗೂ ಆಯಾಯಾ ಜನ್ಮಗಳಲ್ಲಿ ಅನುಭವಿಸುವಂತಹ ನಮ್ಮ ಪಾಪಗಳೇನಿವೆಯೋ ಅವೆಲ್ಲವನ್ನೂ ಅಬ್ದೇವತೆಯಾದ ವರುಣನು ಪರಿಹರಿಸಿ, ಶುದ್ಧಗೊಳಿಸಲಿ । ಈ ವರುಣನು ಅಪ್(ನೀರು) ದೇವತೆಗಳ ಒಡೆಯನಾಗಿದ್ದಾನೆ ಮತ್ತು ಪಾಪವನ್ನು ನಾಶಗೊಳಿಸುವವನಾಗಿದ್ದಾನೆ । ವಸುದೇವತೆಗಳು, ವರುಣದೇವತೆಯು ಹಾಗೂ ಅಘಮರ್ಷಣನೆಂಬ ಋಷಿಯು ನಮ್ಮ ಪಾಪಗಳನ್ನು ನಾಶಗೊಳಿಸಿ, ಶುದ್ಧಗೊಳಿಸಲಿ । ಈ ವರುಣದೇವನು, ಹುಟ್ಟಿದಂತಹ ಪ್ರಾಣಿಸಮೂಹಗಳನ್ನು ರಕ್ಷಿಸುವವನಾಗಿದ್ದಾನೆ । ಈ ವರುಣನೇ, ಜ್ಯೋತಿಷ್ಟೋಮಾದಿ ಕರ್ಮಗಳ ಫಲವನ್ನು ಕೊಡುವವನಾಗಿದ್ದಾನೆ । ಹಾಗೆಯೇ ಬ್ರಹ್ಮಾಂಡರೂಪವಾದ, ಸ್ವಶಬ್ದದಿಂದ ಅಳೆಯಲ್ಪಡುವ ಹಿರಣ್ಯಗರ್ಭ ಲೋಕವು ದ್ಯುಲೋಕ ಮತ್ತು ಭೂಲೋಕಗಳ ಉತ್ಕೃಷ್ಟ ಸ್ಥಾನವಾಗಿದೆ । ಈ ಉತ್ಕೃಷ್ಟ ಸ್ಥಾನದಲ್ಲಿರುವ ಎಲೈ ವರುಣನೇ ಅಂತಹ ಸ್ಥಾನವನ್ನು ನಮಗೆ ಅನುಗ್ರಹಿಸು ॥

ಆ ಓಂ ಆರ್ದ್ರಂ ಜ್ವಲತಿ ಜ್ಯೋತಿರಹಮಸ್ಮಿ ।
ಜ್ಯೋತಿರ್ಜ್ವಲತಿ ಬ್ರಹ್ಮಾಹಮಸ್ಮಿ ।
ಯೋಽಹಮಸ್ಮಿ ಬ್ರಹ್ಮಾಹಮಸ್ಮಿ ।
ಅಹಮಸ್ಮಿ ಬ್ರಹ್ಮಾಹಮಸ್ಮಿ ।
ಅಹಮೇವಾಹಂ ಮಾಂ ಜುಹೋಮಿ ಸ್ವಾಹಾ ॥

ಈ ಆರ್ದ್ರರೂಪವಾದ ನೀರು ತನ್ನ ನೆಲೆಯಿಂದ ಕೂಡಿದ್ದಾಗಿ ಪ್ರಕಾಶಮಾನವಾಗಿ ಹೊಳೆಯುತ್ತಿದೆ । ಆ ಚೈತನ್ಯರೂಪವಾದ ಜ್ಯೋತಿರೂಪನು ನಾನಾಗಿದ್ದೇನೆ । ಯಾವ ಚೈತನ್ಯರೂಪವಿದೆಯೋ ಅದು ಬ್ರಹ್ಮ ಸ್ವರೂಪವೇ ಆಗಿದೆ । ಆದ್ದರಿಂದ ನಾನು ಚೈತನ್ಯರೂಪವಾದ ಬ್ರಹ್ಮಸ್ವರೂಪನೇ ಆಗಿದ್ದೇನೆ । ಹಿಂದೆ ನಾನು ಅಜ್ಞಾನದಿಂದ ಮಾತ್ರ ದೇಹಸ್ವರೂಪಿಯಾದ ಜೀವನಾಗಿದ್ದೆ, ಆ ಅಜ್ಞಾನವು ವಿವೇಕದಿಂದ ತೊಲಗಲಾಗಿ ನಾನು ನಿತ್ಯ–ಸತ್ಯವಾದ ಬ್ರಹ್ಮಸ್ವರೂಪನಾಗಿದ್ದೇನೆ । ನನ್ನಲ್ಲಿ ಬ್ರಹ್ಮಸ್ವರೂಪವು ಹೊಸದಾಗಿ ಏನೂ ಬಂದದ್ದಲ್ಲ, ಕೇವಲ ಅಜ್ಞಾನದಿಂದ ಮರೆಯಾದದ್ದಷ್ಟೇ, ವಿವೇಕದಿಂದ ಮತ್ತೇ ತಿಳಿಯಲ್ಪಟ್ಟದ್ದಾಗಿದೆ । ನಾನು ಅಹಂಕಾರ ಸ್ವರೂಪಿಯಲ್ಲ, ಅಹಂಕಾರ ಸ್ವರೂಪವನ್ನು ಸಾಕ್ಷಿಯಾಗಿದ್ದುಕೊಂಡು ನೋಡುವ ಬ್ರಹ್ಮಸ್ವರೂಪನಾಗಿದ್ದೇನೆ । ಈ ಬ್ರಹ್ಮಸ್ವರೂಪವು, ಭಾವನೆಯಿಂದ ಗೌಣರೀತಿಯಿಂದ ಬಂದದ್ದಲ್ಲ, ಪೂರ್ವಸಿದ್ಧವಾದದ್ದೇ ಆಗಿದೆ । ಆದ್ದರಿಂದ ನಾನು ಜಲಸ್ವರೂಪನೂ ಆಗಿದ್ದೇನೆ । ಇಂತಹ ನನ್ನನ್ನು ಅಗ್ನಿಯಲ್ಲಿ ಆಹುತಿರೂಪದಿಂದ ನಾನೇ ಹವನ ಮಾಡಿಕೊಳ್ಳುತ್ತೇನೆ (ಇಲ್ಲಿ, ಹೋಮವನ್ನು ಸ್ವೀಕರಿಸುವ ಅಗ್ನಿಸ್ವರೂಪವೂ, ಹೋಮ ಮಾಡುವ ಯಜಮಾನ ಸ್ವರೂಪವೂ, ಹೋಮಿಸಲ್ಪಡುವ ಹವಿಸ್ವರೂಪವೂ ಎಲ್ಲವೂ ಬ್ರಹ್ಮಸ್ವರೂಪದಿಂದ ನನ್ನ ಸ್ವರೂಪವೇ ಆಗಿದೆ ಎಂಬುದು ತಾತ್ಪರ್ಯಾರ್ಥ) ॥

೯ ಓಂ ಅಕಾರ್ಯಕಾರ್ಯವಕೀರ್ಣೇ ಸ್ತೇನೋ ಭ್ರೂಣಹಾ ಗುರುತಲ್ಪಗ: ।
ವರುಣೋಽಪಾಮಘಮರ್ಷಣಸ್ತಸ್ಮಾತ್ತ್ವಾಪಾತ್ಪ್ರಮುಚ್ಯತೇ ॥

ಶಾಸ್ತ್ರನಿಷಿದ್ಧವಾದ, ಕಲಂಜ(ನುಗ್ಗೆಕಾಯಿ) ಭಕ್ಷಣವೇ ಮುಂತಾದ ಕರ್ಮವನ್ನು ಮಾಡುವ ಸ್ವಭಾವದವನೇ ಅಕಾರ್ಯಕಾರಿ । ಶಾಸ್ತ್ರನಿಷಿದ್ಧವಾದ, ಬೇರೆ ಹೆಂಗಸನ್ನು ಸಂಭೋಗಿಸುವವನು ಅವಕೀರ್ಣೇ । ಬ್ರಾಹ್ಮಣನ ಚಿನ್ನ ಮುಂತಾದವುಗಳನ್ನು ಕದಿಯುವವನು ಸ್ತೇನ । ಶ್ರೋತ್ರಿಯ ಬ್ರಾಹ್ಮಣನನ್ನು ಅಥವಾ ಅವನ ಗರ್ಭವನ್ನು ಕೊಲ್ಲುವವನು(ಬ್ರಹ್ಮಹತ್ಯೆ) ಭ್ರೂಣಹಾ । ಮತ್ತೂ ತನ್ನ ತಾಯಿ ಸಮಾನರಾದ, ಗುರುಪತ್ನೀ–ಚಿಕ್ಕಮ್ಮ–ದೊಡ್ಡಮ್ಮ–ಅತ್ತಿಗೆ ಮುಂತಾದವರೊಂದಿಗೆ ಅನೈತಿಕ ಸಂಬಂಧವನ್ನು ಮಾಡುವವನು ಗುರುತಲ್ಪಗಾಮಿ । ಈ ಎಲ್ಲಾ ಪಾಪಗಳಿಂದಲೂ, ಪಾಪನಿವಾರಕನಾದ ಅಪ್‌ದೇವತೆಗಳ ಸ್ವಾಮಿಯಾದ ವರುಣನು ನನ್ನನ್ನು ಬಿಡುಗಡೆಗೊಳಿಸಲಿ ॥

೧೦ ಓಂ ರಜೋ ಭೂಮಿಸ್ತ್ವಮಾಗ್ಂ ರೋದಯಸ್ವ ಪ್ರವದಂತಿ ಧೀರಾ: ॥

ಎಲ್ಯೈ ಭಗವಂತನೇ, ನಾನು ಪಾಪಸ್ಥಾನದಲ್ಲಿ ಇದ್ದರೂ ಸಹ ನೀನು ನನ್ನನ್ನು, ನನ್ನ ಪಾಪದ ಫಲವನ್ನು ಅನುಭವಿಸಲು ನನಗೆ ಕಷ್ಟಗಳನ್ನು ಕೊಡಬೇಡ । ನನ್ನ ಪಾಪಗಳೆಲ್ಲವನ್ನೂ ನಾಶಗೊಳಿಸು । ಏಕೆಂದರೆ ವಿವೇಕಿಗಳು, ಶಾಸ್ತ್ರಜ್ಞರು ಈ ರೀತಿಯಾಗಿಯೇ ಹೇಳುತ್ತಾರೆ ಅಲ್ಲವೆ ? ॥

೧೧ ಓಂ ಆಕ್ರಾನ್ಸಮುದ್ರ: ಪ್ರಥಮೇ ವಿಧರ್ಮನ್ಜನಯನ್ಪ್ರಜಾ ಭುವನಸ್ಯ ರಾಜಾ ।
ವೃಷಾ ಪವಿತ್ರೇ ಅಧಿ ಸಾನೋ ಅವ್ಯೇ ಬೃಹಥ್ಸೋಮೋ ವಾವೃಧೇ
ಸುವಾನ ಇಂದು: ॥

ಪರಮಾತ್ಮನು, ಪರಮ ಆನಂದಸ್ವಭಾವದವನಾದ್ದರಿಂದ ಮತ್ತು ಸಮುದ್ರದಂತೆ ಯಾವುದಕ್ಕೂ ಅಂಟಿಕೊಳ್ಳದವನಾದ್ದರಿಂದ ಅವನಿಗೆ ಸಮುದ್ರ ಎಂದು ಹೆಸರು । ಆ ಪರಮಾತ್ಮನು ಸೃಷ್ಟಿಕಾಲದಲ್ಲಿ ಪ್ರಜೆಗಳನ್ನು ಸೃಷ್ಟಿಸುತ್ತಾ ಜಗತ್ತೆಲ್ಲವನ್ನೂ ವ್ಯಾಪಿಸಿದನು । ಆ ಪರಮಾತ್ಮನು, ಆಯಾಯಾ ಜೀವಿಗಳು ಹಿಂದೆ ಮಾಡಿದ ಕರ್ಮಕ್ಕೆ ತಕ್ಕ ವಿವಿಧ ರೀತಿಯ ಫಲಗಳನ್ನು ಕೊಡುತ್ತಾನೆ । ಆ ಪರಮಾತ್ಮನು ಜಗತ್ತನ್ನು ಪಾಲಿಸುತ್ತಾನಾದ್ದರಿಂದ, ಅವನಿಗೆ 'ರಾಜ' ಎಂದು ಹೆಸರು । ಮತ್ತು ಆ ಪರಮಾತ್ಮನು ತನ್ನ ಭಕ್ತರ ಕಾಮನೆಗಳನ್ನು ಈಡೇರಿಸುತ್ತಾನಾದ್ದರಿಂದ ಅವನಿಗೆ 'ಪುರುಷ' ಎಂದು ಹೆಸರು । ಬ್ರಹ್ಮಸ್ವರೂಪವನ್ನು ತಿಳಿಯಲು ಯೋಗ್ಯತೆಯನ್ನು ಪಡೆದುಕೊಂಡಂತಹ(ಶಮ, ದಮಾದಿ ಸಾಧನಗಳಿಂದ) ಈ ದೇಹವೇ ಗಿರಿಯು । ಅದರ ತಪ್ಪಲು ಪ್ರದೇಶವೇ ಹೃದಯ ಪುಂಡರೀಕವು । ಆ ಹೃದಯವು ದೇಹದ ಹೊರಗಿನ ಅಂಗಾಂಗಗಳಂತೆ ಅಶುಚಿಯಲ್ಲ, ಅದು ಸಾಧನೆಗಳಿಂದ ಪವಿತ್ರವಾಗಿದೆ । ಆ ಹೃದಯ ಸ್ಥಾನವು, ಪುರುಷಾರ್ಥಕ್ಕೆ(ಮುಕ್ತಿಗೆ) ಕಾರಣವಾಗಿರುವುದರಿಂದ ಬೇರೆ ಅಂಗಾಂಗಗಳಿಗಿಂತ ಶ್ರೇಷ್ಠ, ಆದ್ದರಿಂದ ಭಗವಂತನ ಧ್ಯಾನಮಾಡುವವರಿಗೆ ಅವನ ಸಾನ್ನಿಧ್ಯವನ್ನು ಕೊಡುವುದರ ಮೂಲಕ ರಕ್ಷಣೆ ಮಾಡುತ್ತಾನಾದ್ದರಿಂದ, ಅವನಿಗೆ 'ಅವ್ಯಂ' ಎಂದು ಹೆಸರು । ಹಿಮವಂತನ ಮಗಳಾದ ಗೌರಿಯು, ಬ್ರಹ್ಮವಿದ್ಯೆಯನ್ನು ತಿಳಿದುಕೊಂಡದ್ದರಿಂದ 'ಉಮಾ' ಎಂಬ ಶಬ್ದವು ಬ್ರಹ್ಮವಿದ್ಯೆಗೆ ಉಪಲಕ್ಷಣವಾಗಿದೆ । ಆ ಪರಮಾತ್ಮನ ವಿಷಯವಾದ ಬ್ರಹ್ಮವಿದ್ಯೆಯು ಜೊತೆ ಹೃದಯಪುಂಡರೀಕ ಇರುತ್ತದೆಯಾದ್ದರಿಂದ, ಅದಕ್ಕೆ 'ಸೋಮ' ಎಂದು ಹೆಸರು । ಆ ಬ್ರಹ್ಮವಿದ್ಯೆಯು ಹೃದಯಪುಂಡರೀಕದಲ್ಲಿ ಅತ್ಯಂತ ಪ್ರಕಾಶಮಾನವಾಗಿ ಸ್ಪಷ್ಟರೂಪದಿಂದ ಇದೆ । ಆದ್ದರಿಂದ ಅದು ಬ್ರಹ್ಮವಿದ್ಯೆಯನ್ನು ವೃದ್ಧಿಗೊಳಿಸುವ ಸ್ಥಾನವೆಂದು ಹೆಸರು ಪಡೆದಿದೆ । ಮೊದಲು(ಪ್ರಾರಂಭದಲ್ಲಿ) ಅವಿದ್ಯೆಯಿಂದ ಸಂಕುಚಿತನಾದ ಜೀವನು, ಆ ಅವಿದ್ಯೆಯು ವಿದ್ಯೆಯಿಂದ (ಅಜ್ಞಾನವು ಜ್ಞಾನದಿಂದ) ತೊಲಗಲಾಗಿ, ಬ್ರಹ್ಮಸ್ವರೂಪವು ತಿಳಿದುಬರುತ್ತದೆಯಾದ್ದರಿಂದ, ಆ ಹೃದಯಪುಂಡರೀಕದಲ್ಲಿ ಬ್ರಹ್ಮಸ್ವರೂಪವು ವೃದ್ಧಿಸಿದೆ ಎಂದು ಹೇಳಲ್ಪಡುತ್ತದೆ । ಆ ಸೋಮನು ಪ್ರಾಣಿಗಳ ಧರ್ಮಾಧರ್ಮಗಳನ್ನು ಪ್ರೇರೇಪಿಸುವವನಾಗಿದ್ದಾನೆ । ಮತ್ತು ಆ ಧರ್ಮಾಧರ್ಮಗಳ ಫಲವನ್ನು ಕೊಡುವುದರ ಮೂಲಕ ನಿಗ್ರಹಾನುಗ್ರಹಕ್ಕೆ ಕಾರಣನಾಗಿದ್ದಾನೆ ॥

3. ಸಂಧ್ಯಾವಂದನ ಮಂತ್ರಾರ್ಥ: ಶ್ರೀ ಸಾಯಣ ಭಾಷ್ಯಂ

ಪ್ರಾಣಾಯಾಮ ಮಂತ್ರವು

ಓಂ ಭೂ: । ಓಂ ಭುವ: । ಓಗ್ಂ ಸುವ: । ಓಂ ಮಹ: । ಓಂ ಜನ: । ಓಂ ತಪ: । ಓಗ್ಂ ಸತ್ಯಂ । ಓಂ ತತ್ಸವಿತುರ್ವರೇಣ್ಯಂ ಭಗೋ॑ದೇವಸ್ಯ ಧೀಮಹಿ । ಧಿಯೋ॑ಯೋ॑ನ: ಪ್ರಚೋದಯಾತ್ । ಓಮಾಪೋ ಜ್ಯೋತೀ॑ರಸೋ॑ಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ಓಂ ಎಂಬ ಉಚ್ಚಾರದಿಂದ ಮಂಗಳವೂ, ಪರಬ್ರಹ್ಮ ಸ್ಮರಣೆಯೂ ಮತ್ತು ಮುಂದೆ ಮಾಡುವ ಕರ್ಮಗಳಿಗೆ ಒಪ್ಪಿಗೆಯೂ ಆಗುತ್ತದೆ । ಭೂ: ಭುವ: ... ಸತ್ಯಂ ಇವುಗಳಿಗೆ ೭ ವ್ಯಾಹೃತಿಗಳೆಂದು ಹೆಸರು, ಹಾಗೆಯೇ ೭ ಲೋಕಗಳು– ಲೋಕಾಭಿಮಾನ ದೇವತೆಗಳೂ ಆಗುತ್ತವೆ । ಈ ಲೋಕಗಳಿಗೆಲ್ಲ ಪರಬ್ರಹ್ಮವೇ ದೇವತೆಯು ಆ ದೇವತೆಗೋಸ್ಕರ ನನ್ನ ಕರ್ಮವನ್ನು ಸಮರ್ಪಿಸುತ್ತೇನೆ । ನನ್ನಿಂದ ಮಾಡಲ್ಪಟ್ಟ ಸಂಧ್ಯಾದಿ ಕರ್ಮಗಳನ್ನು ಅಂಗೀಕರಿಸಲು, ಎಲ್ಲವೂ ಬ್ರಹ್ಮಮಯವೆಂಬ ಜ್ಞಾನವು ದೃಢಪಡುವುದಕ್ಕಾಗಿ ಮೊದಲು ಓಂಕಾರವನ್ನು ಹೇಳಿದೆ ಎಂದು ತಿಳಿಯಬೇಕು । ಸಮಸ್ತಲೋಕಕ್ಕೂ ನಿಯಾಮಕನಾದ ಯಾವ ಭಗವಂತನು ನಮ್ಮ ಬುದ್ಧಿ ವೃತ್ತಿಗಳನ್ನು ಪ್ರೇರೇಪಿಸುವನೋ ಅಂತಹ ಸವಿತೃವಿನ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಿಸುತ್ತೇನೆ ॥

ಮೊದಲ ಮಾರ್ಜನ (ಪ್ರೋಕ್ಷಣ) ಮಂತ್ರವು

ಕೆಳಗಿನ ಮಂತ್ರವನ್ನು ಹೇಳುತ್ತಾ, ಕರ್ತೃ ಆಚಮನ ಪಾತ್ರೆಯ ಉದ್ಧರಣೆಯಿಂದ ತೆಗೆದುಕೊಂಡ ನೀರನ್ನು ತನ್ನ ದೇಹಕ್ಕೆ ಪ್ರೋಕ್ಷಣೆ ಮಾಡಿಕೊಂಡು ಉಳಿದ ನೀರನ್ನು ಕೆಳಗೆ ಹಾಕಬೇಕು ।

ಓಂ ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ ।
ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ
ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವೋ ಯಸ್ಯ
ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥

ತಾತ್ಪರ್ಯ– ಎಲೈ ಜಲಾಭಿಮಾನಿ ದೇವತೆಗಳೇ, ನೀವು ನಮಗೆ ಸ್ನಾನ ಪಾನಾದಿಗಳಿಗೆ ಅನುಕೂಲರಾಗಿರಿ, ಸುಖವನ್ನು ಕೊಡುವವರಾಗಿರಿ, ಅನ್ನ ರಸಗಳನ್ನು ಕೊಡಿರಿ, ಪರಮಾತ್ಮನ ದರ್ಶನಕ್ಕೆ ಯೋಗ್ಯವಾದ ಇಂದ್ರಿಯಗಳನ್ನು ಅನುಗ್ರಹಿಸಿರಿ ಮತ್ತು ನಿಮ್ಮಲ್ಲಿರುವ ಸುಖವಾದ ಮಧುರ ರಸವನ್ನು ತಾಯಿಯರಂತೆ ಪ್ರೀತಿಯಿಂದ ಭೂಮಿಯಲ್ಲಿರುವ ನಮಗೆ ಕೊಡುವವರಾಗಿರಿ ॥

ಅಂತಃಶುದ್ಧಿ ಮಂತ್ರಃ

ಈ ವರೆಗೆ ಬಾಹ್ಯ ಶುದ್ಧ್ಯನ್ನು ತಿಳಿಸಿ, ಈಗ ಅಭೋಜ್ಯ , ಅಪೇಯ, ದುಷ್ಟವಸ್ತು ಸಂಸರ್ಗ, ಮತ್ತು ಉದರಾದಿ ಪಾಪಪರಿಹಾರ ರೂಪವಾದ ಅಂತಃಶುದ್ಧಿಗಾಗಿ ಕೆಳಗಿನ ಮಂತ್ರವನ್ನು ಹೇಳಬೇಕು । ನೀರನ್ನು ಕೈಗೆ ಹಾಕಿಕೊಂಡು ಮಂತ್ರವನ್ನು ಹೇಳಿ, ಕುಡಿಯಬೇಕು ॥

ಬೆಳಿಗ್ಗೆ

ಓಂ ಸೂರ್ಯಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ ।
ಪಾಪೇಭ್ಯೋ ರಕ್ಷಂತಾಮ್ । ಯದ್ರಾತ್ರಿಯಾ ಪಾಪಮಕಾರ್ಷಮ್ । ಮನಸಾ
ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿಸ್ತದವಲುಂಪತು ।
ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತ ಯೋನೌ ।
ಸೂರ್ಯೇಜ್ಯೋತಿಷಿ ಜುಹೋಮಿ ಸ್ವಾಹಾ ॥

ಅರ್ಥ – ಅಹಂಕಾರಯುಕ್ತನಾಗಿ, ಕೋಪವಶನಾಗಿ, ಕಾಮದಿಂದ ಹಿಂದಿನ ರಾತ್ರಿಯಲ್ಲಿ ಮಾಡಿದ ಕೆಟ್ಟ ಯೋಚನೆಗಳೇ ಮುಂತಾದ ಮನಸ್ಸಿನ ಪಾಪವನ್ನೂ, ಸುಳ್ಳುಹೇಳುವುದೇ ಮುಂತಾದ ವಾಕ್ಸಂಬಂಧ ಪಾಪವನ್ನೂ, ಪ್ರಾಣಿಗಳನ್ನು ಹೊಡೆಯುವುದೇ ಮುಂತಾದ ಹಸ್ತ ಸಂಬಂಧ ಪಾಪವನ್ನೂ, ಗೋ ಬ್ರಾಹ್ಮಣರನ್ನು ಒದಯುವುದೇ ಮುಂತಾದ ಪಾದ ಸಂಬಂಧ ಪಾಪವನ್ನೂ, ದೂಷಿತ ಪದಾರ್ಥ ಭೋಜನವೇ ಮುಂತಾದ ಹೊಟ್ಟೆ ಸಂಬಂಧ ಪಾಪವನ್ನೂ ಶಾಸ್ತ್ರ ವಿರುದ್ಧದ ಲೈಂಗಿಕ ಕ್ರಿಯೆಯೇ ಮುಂತಾದ ಶಿಶ್ನ ಸಂಬಂಧ ಪಾಪವನ್ನೂ, ಸೂರ್ಯ – ಮನ್ಯು – ಮನ್ಯುಪತಿ ಈ ದೇವತೆಗಳು ಪರಿಹರಿಸಿ ನನ್ನನ್ನು ಕಾಪಾಡಲಿ ಎಲ್ಲ ರೀತಿಯ ಪಾಪಗಳನ್ನೂ ರಾತ್ರಿದೇವತೆಯು ಹೋಗಲಾಡಿಸಲಿ ನನ್ನ ಎಲ್ಲ ಪಾಪಗಳನ್ನೂ ಸ್ವಯಂ ಜ್ಯೋತಿ ಸ್ವರೂಪನಾದ ಪರಬ್ರಹ್ಮನಲ್ಲಿ ಹಾಕುತ್ತೇನೆ ಎಲ್ಲ ದೋಷಗಳೂ ನಾಶವಾಗಲಿ ॥

ಮಧ್ಯಾಹ್ನದಲ್ಲಿ

ಓಂ ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಮ್ ।
ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತುಮಾಮ್ । ಯದುಚ್ಛಿಷ್ಟ

ಮಭೋೀಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ॥

ಆಪೋ ವೈ ಸರ್ವಾ ದೇವತಾಃ । ಆಪಃ ಸ್ವಭಾವತೋ ಮೇಧ್ಯಾಃ । ಎಂಬ ಶ್ರುತಿ ಸ್ಮೃತಿ ವಾಕ್ಯಗಳಿಂದ ನೀರು ಸಕಲ ದೇವತಾ ಸ್ವರೂಪವಾಗಿಯೂ, ಸ್ವಯಂ ಪರಿಶುದ್ಧವಾಗಿಯೂ ಇರುವುದರಿಂದ ಅದು ಭೂಮಿಯನ್ನು ತೊಳೆದು ಶುದ್ಧಮಾಡಲಿ, ಆ ಶುದ್ಧಭೂಮಿಯು ಆನುಷ್ಠಾನ ಮಾಡುವ ನನ್ನನ್ನು ಶುದ್ಧಿಗೊಳಿಸಲಿ, ನಾನು ಮಾಡಿರುವ ಎಂಜಲಾದ ಊಟ, ಅಭೋಜ್ಯ ಭೋಜನ, ದುಷ್ಕಾರ್ಯಗಳು, ದುಷ್ಪರಿಗ್ರಹಗಳು ಇವುಗಳ ಎಲ್ಲ ದೋಷಗಳನ್ನು ಮತ್ತು ನನ್ನನ್ನೂ ಪರಿಶುದ್ಧಗೊಳಿಸಲಿ, ಈ ತೀರ್ಥವನ್ನು ನನ್ನ ಮುಖಾಗ್ನಿಯಲ್ಲಿ ಹೋಮಿಸುತ್ತೇನೆ, ಅದರಿಂದ ಎಲ್ಲ ದೋಷಗಳೂ ಸುಟ್ಟು ಹೋಗಲಿ ॥

ಸಾಯಂಕಾಲದಲ್ಲಿ

ಓಂ ಅಗ್ನಿಶ್ಚಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷಂತಾಮ್ । ಯದಹ್ನಾ ಪಾಪಮಕಾರ್ಷಮ್ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ಅಹಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತ ಯೋನೌ । ಸತ್ಯೇಜ್ಯೋತಿಷಿ ಜುಹೋಮಿ ಸ್ವಾಹಾ ॥

ಅಗ್ನಿಯು, ಕ್ರೋಧ ದೇವತೆಯು, ಕೋಪದಿಂದ ಮಾಡಿದ ಪಾಪಗಳಿಂದ ನನ್ನನ್ನು ರಕ್ಷಿಸಲಿ, ಹಗಲಿನಲ್ಲಿ ಯಾವ ಪಾಪವನ್ನು ಮನಸ್ಸಿನಿಂದಲೂ, ಮಾತಿನಿಂದಲೂ, ಕೈಗಳಿಂದಲೂ, ಕಾಲುಗಳಿಂದಲೂ, ಉದರದಿಂದಲೂ, ಜನನೇಂದ್ರಿಯದಿಂದಲೂ

ಮಾಡಿದ್ದೇನೋ ಅದನ್ನು ಹಗಲಿನ ಅಭಿಮಾನಿ ದೇವತೆಯು ಹೋಗಲಾಡಿಸಿ ಕಾಪಾಡಲಿ, ಇನ್ನೂ ಏನಾದರೂ ಪಾಪವಿದ್ದಲ್ಲಿ ಅದನ್ನು ಪರಿಹರಿಸಲಿ, ಈ ತೀರ್ಥವನ್ನು ಅಮೃತ ಯೋನಿಯಾದ ಆದಿತ್ಯನೆಂಬ ಅಗ್ನಿಯಲ್ಲಿ ಹೋಮ ಮಾಡುತ್ತೇನೆ ॥

ಎರಡನೇ ಮಾರ್ಜನ ಮಂತ್ರ

ಕೆಳಗಿನ ಮಂತ್ರವನ್ನು ಹೇಳುತ್ತಾ, ಕರ್ತೃವಿನ ಆಚಮನ ಪಾತ್ರೆಯ ಉದ್ಧರಣೆಯಿಂದ ತೆಗೆದುಕೊಂಡ ನೀರನ್ನು ತನ್ನ ದೇಹಕ್ಕೆ ಪ್ರೋಕ್ಷಣೆ ಮಾಡಿಕೊಂಡು. ಉಳಿದ ನೀರನ್ನು ಕೆಳಗೆ ಹಾಕಬೇಕು ॥

ಓಂ ದಧಿಕ್ರಾವ್ಣ್ನೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾ ಕರತ್ಪ್ರಣ ಆಯೂಗ್ಂಷಿ ತಾರಿಷತ್ ॥ ಆಪ್ಸೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ । ಆಪ್ಸೋ ಜನಯಥಾ ಚ ನಃ ॥

ಹವ್ಯವಾಹನನಾದ, ಜಯಶೀಲನಾದ, ಸರ್ವವ್ಯಾಪಿಯಾದ, ಅಶ್ವಾಕಾರವುಳ್ಳ, ಅನ್ನ ಸಂಪನ್ನನಾದ, ದೇವತೆಗಳಿಗೆ ಅನ್ನವನ್ನು ಒದಗಿಸಿಕೊಡುವ, ಅಗ್ನಿಪುರುಷನನ್ನು ನಾನು ಸ್ತೋತ್ರ ಮಾಡುತ್ತೇನೆ । ಅವನು ನಮ್ಮ ಮುಖಗಳನ್ನು ಶುದ್ಧ ಮಾಡಲಿ । ಸುವಾಸನೆಯುಳ್ಳದ್ದನ್ನಾಗಿ ಮಾಡಲಿ । ಆಯಸ್ಸನ್ನು ವೃದ್ಧಿಸಲಿ ॥

ಪಾಪ ವಿಸರ್ಜನಾ ಮಂತ್ರ:

ಕೈಯಲ್ಲಿ ನೀರನ್ನು ಹಾಕಿಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ಆ ನೀರನ್ನು ಮೂಸಿ ನಂತರ ಅದನ್ನು ಅರ್ಘ್ಯಪಾತ್ರೆಯ ಹೊರಗೆ ಹಾಕಬೇಕು ॥

ಓಂ ದ್ರುಪದಾ ದಿವೇನ್ಮುಮುಚಾನ: । ಸ್ವಿನ್ನಸ್ನಾತ್ವೀಮಲಾದಿವ । ಪೂತಂ ಪವಿತ್ರೇಣೇವಾಜ್ಯಮ್ । ಆಪಶ್ಯುಂಧಂತು ಮೈನಸ: ॥

ಅರ್ಥ – ಶರೀರವು ಬೆವರಿ, ಕೊಳೆಯಿಂದ ಕೂಡಿದವನು ಸ್ನಾನ ಮಾಡಿ ಕೊಳೆಯನ್ನು ಕಳೆದುಕೊಳ್ಳುವಂತೆ, ಕರ್ಮಕ್ಕೆ ಬೇಕಾದ ತುಪ್ಪವು ಪವಿತ್ರರೂಪವಾದ ದರ್ಭೆಗಳಿಂದ ಸಂಸ್ಕಾರ ಹೊಂದಿ ಶುದ್ಧವಾಗುವಂತೆ, ಸರ್ವಕರ್ಮ ಸಾಕ್ಷಿಯಾದ ಸೂರ್ಯನು ಪಾಪದ ದೆಸೆಯಿಂದ ನನ್ನನ್ನು ತಪ್ಪಿಸಿ ಪರಿಶುದ್ಧನನ್ನಾಗಿ ಮಾಡಲಿ ॥

ಗಾಯತ್ರೀ ಮಂತ್ರಃ

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ । ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

ನಮಗೆ ಚೈತನ್ಯವನ್ನು ಕೊಟ್ಟು ಬುದ್ಧಿ ಅಂತಃಕರಣ ವೃತ್ತಿಗಳನ್ನು(ಕಾರ್ಯಗಳಲ್ಲಿ ತೊಡಗುವಂತೆ) ಪ್ರೇರೇಪಿಸುತ್ತಿರುವ, ಪ್ರಕಾಶಮಾನನಾದ ಸೂರ್ಯನನ್ನು ಮತ್ತು ಚೈತನ್ಯ ರೂಪವಾದ ಪರಬ್ರಹ್ಮನನ್ನು ಧ್ಯಾನಿಸುತ್ತೇನೆ ॥

ಓಂ ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ ।
ಬ್ರಾಹ್ಮಣೇಭ್ಯೋsಭ್ಯನುಜ್ಞಾತಾ ಗಚ್ಛದೇವಿ ಯಥಾಸುಖಮ್ ॥

ಭೂಮಿಯಲ್ಲಿರುವ ಪರ್ವತದ ಮೇಲ್ಭಾಗದ ಉನ್ನತವಾದ ಶಿಖರದಲ್ಲಿರುವ ದೇವಿಯೇ, ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದಿರುವೆ । ದೇವಿ ನೀನು ನಿನ್ನಿಷ್ಟಬಂದೆಡೆಗೆ ಹೋಗು ॥

ಬೆಳಗಿನ ಸಂಧ್ಯಾ ಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

ಓಂ ಮಿತ್ರಸ್ಯ ಚರ್ಷಣೀ ಧೃತ: ಶ್ರವೋ ದೇವಸ್ಯ ಸಾನಸಿಮ್ । ಸತ್ಯಂ ಚಿತ್ರ ಶ್ರವಸ್ತಮಮ್ । ಮಿತೋ ಜನಾನ್ ಯಾತಯತಿ ಪ್ರಜಾನನ್ಮಿತೋ ದಾಧಾರ ಪೃಥಿವೀಮುತದ್ಯಾಮ್ । ಮಿತ್ರ: ಕೃಷ್ಟೀರನಿಮಿಷಾಽಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ । ಪ್ರಸಮಿತ್ರಮತೋ ಅಸ್ತು ಪ್ರಯಸ್ವಾನ್ ಯಸ್ತ ಆದಿತ್ಯ ಶಿಕ್ಷತಿ ವ್ರತೇನ । ನ ಹನ್ಯತೇ ನ ಜೀಯತೇ ತ್ವೋತೋ ನೈನಮಗ್ಂ ಹೋ ಅಶ್ನೋತ್ಯಂತಿತೋ ನ ದೂರಾತ್ ॥

ತನ್ನ ಆಕರ್ಷಣಶಕ್ತಿಯಿಂದ ಪ್ರಜೆಗಳನ್ನು ಧರಿಸಿರುವ, ಸೂರ್ಯನ ಕೀರ್ತಿಯು ಎಲ್ಲರಿಗೂ ಪ್ರಿಯವಾದದ್ದು, ನಾಶವಿಲ್ಲದ್ದು, ಬಗೆಬಗೆಯಾದ ಪ್ರಸಿದ್ಧಿಯನ್ನು ಅತಿಶಯವಾಗಿ ಹೊಂದಿರುವುದೂ ಆಗಿದೆ । ಎಲ್ಲ ಮಾರ್ಗವನ್ನೂ ಬಲ್ಲವನಾದ ರವಿಯು ಜನರೆಲ್ಲರನ್ನೂ ಆ ಮಾರ್ಗದಲ್ಲಿ ನಡೆಸುತ್ತಾನೆ । ಸೂರ್ಯನೇ

ಭೂಮಿಯನ್ನೂ, ಆಕಾಶವನ್ನೂ ಧರಿಸಿದ್ದಾನೆ। ಸತ್ಯನಾದ ಮಿತ್ರನಿಗೆ(ರವಿ) ಸ್ನೇಹವೆಂಬ ಘೃತಯುಕ್ತವಾದ ಮನಸ್ಸೆಂಬ ಹವಿಸ್ಸನ್ನು ಅರ್ಪಿಸುತ್ತೇವೆ। ಎಲ್ಲವನ್ನೂ ಸೆಳೆಯುವ ಆದಿತ್ಯನೇ, ಯಾರು ನಿನ್ನ ಸೇವೆಯಿಂದ ಸಮರ್ಥನಾಗಲು ಇಷ್ಟಪಡುವನೋ, ಆ ಮನುಷ್ಯನು ವಿಶೇಷವಾಗಿ ಅನ್ನವುಳ್ಳವನಾಗಲಿ, ಸೋಲನುಭವಿಸದೇ ಇರಲಿ, ಪಾಪದ ಫಲವು ಇವನನ್ನು ಸೋಕದೇ ಇರಲಿ ॥

ಮಧ್ಯಾಹ್ನ ಸಂಧ್ಯಾ ಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

ಓಂ ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ। ಹಿರಣ್ಯಯೇನ ಸವಿತಾ ರಥೇನಾ ದೇವೋಯಾತಿ ಭುವನಾ ವಿಪಶ್ಯನ್ನ್। ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಮ್। ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್। ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ। ದೃಶೇ ವಿಶ್ವಾಯ ಸೂರ್ಯಮ್। ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ। ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಗ್ಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥

ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್। ಪಶ್ಯೇಮ ಶರದಶ್ಶತಂ ಜೀವೇಮ ಶರದಶ್ಶತಂ ನಂದಾಮ ಶರದಶ್ಶತಂ ಮೋದಾಮ ಶರದಶ್ಶತಂ

ಭವಾಮ ಶರದಶ್ಶತಗ್ಂ ಶೃಣವಾಮ ಶರದಶ್ಶತಂ ಪ್ರಬ್ರವಾಮ
ಶರದಶ್ಶತಮಜೀತಾಸ್ಯಾಮ ಶರದಶ್ಶತಂ ಜ್ಯೋಕ್ಚ ಸೂರ್ಯಂ ದೃಶೇ ॥

ಯ ಉದಗಾನ್ಮಹತೋರ್ಣವಾದ್ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ಸಮಾ
ವೃಷಭೋ ಲೋಹಿತಾಕ್ಷಸ್ಸೂಂರ್ಯೋ ವಿಪಶ್ಚಿನ್ಮನಸಾ ಪುನಾತು ॥

ಸತ್ಯಲೋಕದಿಂದ ಪ್ರಾರಂಭಿಸಿ ರಂಜಿಸುತ್ತಿರುವ ಬೆಳಕಿನಿಂದ ಕೂಡಿಕೊಂಡು ಎಲ್ಲೆಡೆ ಸುತ್ತುತ್ತಿರುವ ಸವಿತೃದೇವನು (ಅವರವರ ಕರ್ಮಕ್ಕನುಗುಣವಾಗಿ) ಅಮೃತವನ್ನೂ, ಮರಣವನ್ನೂ ನೀಡುತ್ತಾ ಸಮಸ್ತ ಲೋಕಗಳನ್ನೂ ವೀಕ್ಷಿಸುತ್ತಾ ಹಿರಣ್ಯದಂತೆ ಪ್ರಕಾಶಮಾನನಾದ ರಥದೊಡನೆ ಬರುತ್ತಿದ್ದಾನೆ । ನಾವು, ಅಜ್ಞಾನ, ತಮಸ್ಸಿಗಿಂತ ಆಚೆಯಿರುವ, ಉತ್ಕೃಷ್ಟವಾದ, (ನಮ್ಮಲ್ಲಿರುವ) ಜ್ಯೋತಿಯನ್ನು ಕಾಣುತ್ತಾ ದೇವತೆಗಳಲ್ಲಿರುವ, ದೇವನಾದ ಪ್ರೇರಕನಾದ ಸೂರ್ಯನೆಂಬ ಉತ್ತಮ ಜ್ಯೋತಿಯನ್ನು ಹೋಗಿ ಪಡೆದೆವು(ಪಡೆಯೋಣ) । ಹುಟ್ಟಿದ್ದನ್ನೆಲ್ಲಾ ಅರಿಯುತ್ತಿರುವ ಜಾತವೇದನಾದ ಆ ರವಿಯನ್ನು ಸಮಸ್ತ ಲೋಕದ ದರ್ಶನಕ್ಕಾಗಿ ಕಿರಣಗಳು ಒಯ್ಯುತ್ತಿವೆ । ಬೆಳಗುತ್ತಿರುವ ರಶ್ಮಿಗಳ ರೂಪನಾದ, ದೇವತೆಗಳಲ್ಲಿ ಆಕರ್ಷಣೀಯನಾದ ಸೂರ್ಯನು ಮಿತ್ರನ, ವರುಣನ, ಅಗ್ನಿಯ, ಕಣ್ಣಾಗಿ ಉದಯಿಸಿದ್ದಾನೆ । ದ್ಯುಲೋಕ, ಭೂಲೋಕ, ಅಂತರಿಕ್ಷಗಳನ್ನು ತನ್ನ ಕಿರಣಗಳಿಂದ ತುಂಬಿದ್ದಾನೆ । ಎಲ್ಲರ ಕಣ್ಣಾದ ಸೂರ್ಯನೇ, ಸ್ಥಾವರ ಜಂಗಮ ಪ್ರಾಣಿಗಳಿಗೆ ಆತ್ಮನಾಗಿರುವನು । ದೇವತೆಗಳಿಗೆ ಹಿತಕಾರಿಯಾದ , ಶುಭ್ರವಾದ ರವಿಯೆಂಬ ಜ್ಯೋತಿಯು ಮೇಲಕ್ಕೆದ್ದಿದೆ। ಆ ರವಿಯ ಅನುಗ್ರಹದಿಂದ ನಾವು ನೂರುವರ್ಷಗಳನ್ನು ನೋಡೋಣ, ಬಾಳೋಣ, ಸಮೃದ್ಧರಾಗೋಣ । ಯಾವಾತನು ಸಂಸಾರವೆಂಬ ಸಮುದ್ರದಿಂದ ಮೇಲೆದ್ದು ಆಕಾಶದ ನಡುವೆ ನಾನಾ ಪ್ರಕಾರವಾಗಿ ಹೊಳೆಯುತ್ತಾ ಇರುವನೋ, ಹೊಂಬಣ್ಣ ಕಿರಣಗಳಿಂದ ಕೂಡಿದ (ನಮ್ಮ ಇಷ್ಟಾರ್ಥಗಳನ್ನು ಸುರಿಸುವ), ಸರ್ವಜ್ಞನಾದ ಆ ಸೂರ್ಯನು ನಮ್ಮನ್ನು ಮನಸಾರೆ ಹರಸಿ ಪವಿತ್ರಗೊಳಿಸಲಿ ॥

ಸಾಯಂ ಸಂಧ್ಯಾ ಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

(ಸಂಜೆ ಉಪಸ್ಥಾನದಲ್ಲಿ ಪಶ್ಚಿಮಾಭಿಮುಖವಾಗಿ ನಿಂತು ಈ ಮಂತ್ರವನ್ನು ಹೇಳಿ ನಂತರ ದಿಕ್ ನಮಸ್ಕಾರವನ್ನು ಪೂರ್ವದಿಕ್ಕಿನಿಂದ ಆರಂಭಿಸಬೇಕು)

ಓಂ ಇಮಂ ಮೇ ವರುಣ ಶ್ರುಧೀಹವಮದ್ಯಾ ಚ ಮೃಡಯ ।
ತ್ವಾಮವಸ್ಯುರಾಚಕೇ । ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ
ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ
ಬೋಧ್ಯುರುಶಗ್ಂಸ ಮಾ ನ ಆಯುಃ ಪ್ರಮೋಷೀಃ ॥

ಯಚ್ಚಿದ್ಧಿ ತೇ ವಿಶೋ ಯಥಾ ಪ್ರದೇವ ವರುಣ ವ್ರತಮ್ । ಮಿನೀಮಸಿ
ದ್ಯವಿದ್ಯವಿ । ಯತ್ಕಿಂಚೇದಂ ವರುಣ ದೈವ್ಯೇ ಜನೇಭಿದ್ರೋಹಂ
ಮನುಷ್ಯಾಶ್ಚರಾಮಸಿ । ಅಚಿತ್ತೀ ಯತ್ತವ ಧರ್ಮಾಯುಯೋಪಿಮ
ಮಾನಸ್ತಸ್ಮಾದೇನಸೋ ದೇವರೀರಿಷಃ । ಕಿತವಾಸೋ ಯದ್ರಿರಿಪುರ್ನದೀವಿ
ಯದ್ವಾ ಘಾ ಸತ್ಯಮುತಯನ್ನ ವಿದ್ಮ । ಸರ್ವಾತಾ ವಿಷ್ಯ ಶಿಥಿರೇವ ದೇವಾಥಾ
ತೇ ಸ್ಯಾಮ ವರುಣ ಪ್ರಿಯಾಸಃ ॥

ಹೇ ವರುಣ, ನನ್ನ ಈ ಕರೆಯನ್ನು ಕೇಳು । ಅಲ್ಲದೇ ಇಂದೇ ನನ್ನನ್ನು ಸುಖಿಯಾಗಿಸು, ರಕ್ಷಣೆಯನ್ನಪೇಕ್ಷಿಸುತ್ತಾ ನಿನ್ನನ್ನು ಬೇಡಿಕೊಳ್ಳುತ್ತೇನೆ । ಆ ರಕ್ಷಣೆಗೋಸ್ಕರವೇ ವೇದಮಂತ್ರಗಳಿಂದ ನಮಸ್ಕರಿಸುತ್ತಾ ನಿನ್ನನ್ನು ಬಳಿಸಾರುತ್ತೇನೆ । ಹವಿಸ್ಸುಗಳಿಂದ ನಿನ್ನನ್ನು ಆರಾಧಿಸುವ ಯಜಮಾನನೂ ಆ ರಕ್ಷಣೆಯನ್ನೇ ಅಪೇಕ್ಷಿಸುತ್ತಾನೆ । ಹೇ ವರುಣ, ಅನಾದರೆಮಾಡದೇ ಇಲ್ಲಿ (ಪ್ರಾರ್ಥನೆಯನ್ನು) ಕೇಳು । ಅಪಾರ

ಮಹಿಮೆಯುಳ್ಳವನೇ, ನಮ್ಮ ಆಯಸ್ಸನ್ನು ಕಳೆಯಬೇಡ । ಹೇ ವರುಣದೇವ, ಲೋಕದ ಜನರು(ತಮ್ಮ ತಮ್ಮ ಕೆಲಸಗಳನ್ನು ಯೋಚಿಸುವಂತೆ) ನಿನ್ನ ಆರಾಧನೆಯ ವ್ರತವನ್ನು ಪ್ರತಿನಿತ್ಯವೂ ಚಿಂತಿಸುವಂತೆ ಅನುಗ್ರಹಿಸು । ವರುಣನೇ, ಮನುಷ್ಯರಾದ ನಾವು ದೈವೀ ಸಂಪತ್ತಿನಿಂದ ಕೂಡಿರುವ ಸಜ್ಜನರ ವಿಷಯದಲ್ಲಿ ಯಾವುದಾದರೂ ರೀತಿಯ ದ್ರೋಹವನ್ನೆಸಗಿದ್ದಿರಬಹುದು । ಅಲ್ಲದೇ ಅಜ್ಞಾನದಿಂದ ನಿನಗೆ ಸಂಬಂಧಿಸಿದ ಧರ್ಮಗಳನ್ನು ಮತ್ತೆ ಮತ್ತೆ ನಾಶಪಡಿಸಿರಬಹುದು । ದೇವನೇ, ಆ ಅರಿಯದೇ ಆದ ಪಾಪಗಳಿಗಾಗಿ ನಮ್ಮನ್ನು ಹಿಂಸಿಸಬೇಡ । ಧೂರ್ತರೇ ಮುಂತಾದವರು ಜೂಜಿನಲ್ಲಿ ಹೇಗೋ ಹಾಗೆ ನಾವು ಬುದ್ಧಿಪೂರ್ವಕವಾಗಿಯಾಗಲೀ, ಅಜ್ಞಾನದಿಂದಾಗಲೀ ನಿನ್ನ ಧರ್ಮವ್ರತಕ್ಕೆ ಏನು ಕಿರುಕುಳವನ್ನು ಕೊಟ್ಟಿರುವೆವೋ । ಆ ಎಲ್ಲಾ ಪಾಪಗಳನ್ನೂ ಸಡಿಲವಾದ ಗಂಟನ್ನು ಬಿಚ್ಚುವಂತೆ ಬಿಡಿಸಿ, ನಮ್ಮನ್ನು ಕ್ಷಮಿಸು । ಹೀಗೆ ನಿನ್ನಿಂದ ಅನುಗೃಹೀತರಾಗುವುದರಿಂದಲೇ ನಾವು ನಿನಗೆ ಅತ್ಯಂತ ಪ್ರಿಯರಾಗುವೆವು ॥

ಕರ್ಮಸಮಾಪನೆ

ಬಲ ಕೈಯಲ್ಲಿ ನೀರನ್ನು ಇಟ್ಟುಕೊಂಡು, ಈ ಕೆಳಗಿನ ವಾಕ್ಯಗಳನ್ನು ಹೇಳಿ, ನೀರನ್ನು ಅರ್ಘ್ಯ ಪಾತ್ರೆಗೆ ಬಿಡಬೇಕು ॥

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಸಂಧ್ಯಾ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಪ್ರಾತಃ/ಮಧ್ಯಾಹ್ನ/ಸಾಯಂ ಸಂಧ್ಯೋಪಾಸನಕರ್ಮಣಾ ಭಗವಾನ್ ಸರ್ವಾತ್ಮಕಃ ಶ್ರೀವಾಸುದೇವಃ ಪ್ರೀಯತಾಂ ॥ (ನೀರನ್ನು ಬಿಡುವುದು)

ಯಾವ ಭಗವಂತನ ಸ್ಮರಣ, ನಾಮೋಚ್ಚಾರಣ, ಇವುಗಳಿಂದ ತಪಸ್ಸು-ಸಂಧ್ಯಾವಂದನೆ ಮೊದಲಾದ ಕರ್ಮಗಳಲ್ಲಿ, ಶರೀರ, ವಾಕ್, ಮನಸ್ಸು, ಬುದ್ಧಿ, ಇವುಗಳಿಂದಲೂ ಅಜ್ಞಾನ ಸ್ವಭಾವದಿಂದಲೂ ಯಾವ ಯಾವ ಕರ್ಮಗಳನ್ನು ಮಾಡುವೆನೋ ಅವೆಲ್ಲವೂ ಶ್ರೀ ನಾರಾಯಣನ ಪ್ರೇರಣೆಯಿಂದಲೇ ನಡೆಯುವವಾದ್ದರಿಂದ ಎಲ್ಲವೂ ಅವನಿಗೇ ಸೇರಿದ್ದು । ಆದಕಾರಣ ಈ ಕರ್ಮವನ್ನೂ ಅವನಿಗೇ ಸಮರ್ಪಿಸುತ್ತೇನೆ ॥

ಪ್ರಾಯಶ್ಚಿತ್ತಂ

ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ಎಲ್ಲಾ ಕರ್ಮಗಳಲ್ಲಿಯೂ ಉಂಟಾಗಬಹುದಾದ ನ್ಯೂನ ಅತಿರೇಕ ದೋಷಗಳೆಲ್ಲವೂ, ಯಾವ ಭಗವಂತನ ನಾಮ ಸ್ಮರಣೆಯಿಂದ ಪರಿಹಾರವಾಗುವವೋ ಅವನ ನಾಮಗಳನ್ನು ಜಪಿಸುತ್ತೇನೆ । ನಾನು ಮಾಡಿದ ಕರ್ಮಗಳು ಮಂತ್ರ, ತಂತ್ರ, ಧ್ಯಾನ, ನಿಯಮ ಇವುಗಳಿಂದ ಏನೇ ಲೋಪವಾಗಿದ್ದರೂ ನಿನ್ನ ನಾಮಜಪದ ಬಲದಿಂದ ಲೋಪವಿಲ್ಲದ್ದಾಗಿ ಅವು ನಿನಗೆ ಅರ್ಪಿತವಾಗಲಿ ॥

~~~~~~~~~~
~~~~~~~~~~

4. ವೈಶ್ವದೇವ – ಬಲಿಹರಣ ಮಂತ್ರಾರ್ಥ:

೧ ಓಂ ಅದಿತೇऽನುಮನ್ಯಸ್ವ ॥

ಎಲ್ಯೆ, ಅದಿತಿದೇವತಾ ಸ್ವರೂಪಳಾದ ಭೂಮಿಯೇ, ನಾನು ಮಾಡುತ್ತಿರುವಂತಹ ಕರ್ಮಕ್ಕೆ ಅನುಮತಿಯನ್ನು ಕೊಡು ॥

೨ ಓಂ ಅನುಮತೇऽನುಮನ್ಯಸ್ವ ॥

ಎಲ್ಯೆ, ಅನುಮತಿ ದೇವಿಯೇ ನೀನು, ನಾನು ಮಾಡುತ್ತಿರುವಂತಹ ಕರ್ಮಕ್ಕೆ ಅನುಮತಿಯನ್ನು ಕೊಡು ॥

೩ ಓಂ ಸರಸ್ವತೇऽನುಮನ್ಯಸ್ವ ॥

ಎಲ್ಯೆ, ವಾಗ್ದೇವತಾ ಸ್ವರೂಪಳಾದ ಸರಸ್ವತಿದೇವಿಯೇ ನಾನು ಮಾಡುತ್ತಿರುವಂತಹ ಕರ್ಮಕ್ಕೆ ಅನುಮತಿಯನ್ನು ಕೊಡು ॥

೪ ಓಂ ದೇವಸವಿತ: ಪ್ರಸುವ ॥

ಎಲ್ಯೆ, ಸವಿತೃದೇವನೇ, ಎಲ್ಲಾ ಕರ್ಮಗಳಿಗೂ ಪ್ರೇರಕಸ್ವರೂಪನೇ ನಾನು ಮಾಡುತ್ತಿರುವಂತಹ ಕರ್ಮಕ್ಕೆ ಅನುಮತಿಯನ್ನು ಕೊಡು ॥

೫ ಓಂ ಅಗ್ನಯೇ ಸ್ವಾಹಾ ॥

ದೇವತೆಗಳ ಮುಖಸ್ವರೂಪನಾದ ಎಲ್ಯೆ ಅಗ್ನಿದೇವನೇ, ನಿನಗೆ ಈ ಹವಿಸ್ಸು ಅರ್ಪಿತವಾಗಲಿ ॥

೬ ಓಂ ಸೋಮಾಯ ಸ್ವಾಹಾ ॥

ಸೋಮದೇವನೇ, ನಿನಗೆ ಈ ಹವಿಸ್ಸು ಅರ್ಪಿತವಾಗಲಿ ॥

೭ ಓಂ ವಿಶ್ವೇಭ್ಯೋ ದೇವೇಭ್ಯ: ಸ್ವಾಹಾ ॥

ವಿಶ್ವೇದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೮ ಓಂ ಧ್ರುವಾಯ ಭೂಮಾಯ ಸ್ವಾಹಾ ॥

ಒಂದೇ ಸ್ವರೂಪನಾದ, ವೃದ್ಧಿ ಕ್ಷಯವಿಲ್ಲದ, ಬ್ರಹ್ಮನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೯ ಓಂ ಧ್ರುವಕ್ಷಿತಯೇ ಸ್ವಾಹಾ ॥

ನಿಶ್ಚಲವಾದ ಗತಿಯುಳ್ಳ, ವ್ಯಾಪ್ತಿಯುಳ್ಳ ಕಾರ್ಯ ಬ್ರಹ್ಮನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೧೦ ಓಂ ಅಚ್ಯುತಕ್ಷಿತಯೇ ಸ್ವಾಹಾ ॥

ಜಾರಿಬೀಳದೇ ಇರುವಂತಹ ವ್ಯಾಪ್ತಿಯುಳ್ಳಂತಹ ಬ್ರಹ್ಮನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೧೧ ಓಂ ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ॥

ಸ್ವಿಷ್ಟಕೃತ್ ಎಂದರೆ, ಅರ್ಪಿಸಲ್ಪಟ್ಟ ಹವಿಸ್ಸನ್ನು ಹುತಗೊಳಿಸಿ, ಕರ್ಮದ ಸಾಫಲ್ಯವನ್ನು ಉಂಟುಮಾಡುತ್ತಾನಾದ್ದರಿಂದ ಅವನಿಗೆ ಸ್ವಿಷ್ಟಕೃತ್ ಎಂದು ಹೆಸರು (ಸ್ವಿಷ್ಟಂ ಸುಹುತಂ ಕರೋತಿ ಇತಿ ಸ್ವಿಷ್ಟಕೃತ್) । ಅಂತಹ ಸ್ವಿಷ್ಟಕೃದ್ದೇವತೆಯಾದ ಅಗ್ನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೧೨ ಅದಿತೇಽನ್ವಮಗ್ಂಸ್ಥಾ: ॥

ಎಲೈ ಅದಿತಿಸ್ವರೂಪಳಾದ ಭೂಮಿಯೇ, ನೀನು ಅನುಮತಿ ಕೊಟ್ಟಿರುವೆ, ಏಕೆಂದರೆ ನಿರ್ವಿಘ್ನವಾಗಿ ಕರ್ಮಸಮಾಪ್ತಿಗೊಳಿಸಿದ್ದರಿಂದ ॥

೧೩ ಅನುಮತೇಽನ್ವಮಗ್ಂಸ್ಥಾ: ॥

ಎಲೈ ಅನುಮತಿದೇವಿಯೇ, ನೀನು ಅನುಮತಿ ಕೊಟ್ಟಿರುವೆ, ಏಕೆಂದರೆ ನಿರ್ವಿಘ್ನವಾಗಿ ಕರ್ಮಸಮಾಪ್ತಿಗೊಳಿಸಿದ್ದರಿಂದ ॥

೧೪ ಸರಸ್ವತೇऽನ್ವಮಗ್ಂಸ್ಥಾ: ॥

ಸರಸ್ವತಿ ದೇವಿಯೇ, ನೀನು ಅನುಮತಿ ಕೊಟ್ಟಿರುವೆ, ಏಕೆಂದರೆ ನಿರ್ವಿಘ್ನವಾಗಿ ಕರ್ಮಸಮಾಪ್ತಿಗೊಳಿಸಿದ್ದರಿಂದ ॥

೧೫ ದೇವಸವಿತ: ಪ್ರಾಸಾವೀ: ॥

ಸವಿತೃದೇವನೇ, ನೀನು ಅನುಮತಿ ಕೊಟ್ಟಿರುವೆ, ಏಕೆಂದರೆ ನಿರ್ವಿಘ್ನವಾಗಿ ಕರ್ಮಸಮಾಪ್ತಿಗೊಳಿಸಿದ್ದರಿಂದ ॥

೧೬ ಓಂ ಧರ್ಮಾಯ ಸ್ವಾಹಾ ॥

ಧರ್ಮಸ್ವರೂಪವಾದಂತಹ ಧರ್ಮದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೧೭ ಓಂ ಅಧರ್ಮಾಯ ಸ್ವಾಹಾ ॥

ಹಾಗೆಯೇ ಅಧರ್ಮಸ್ವರೂಪವಾದಂತಹ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ (ಅಧರ್ಮದೇವತೆಗಳಿಗೂ ಹವಿಸ್ಸುವುಂಟು, ಏಕೆಂದರೆ ಯಾವುದು ಅಧರ್ಮವು ಎಂದು ತಿಳಿದಮೇಲೆ ಅದನ್ನು ನಾವು ಬಿಡಬೇಕಾಗಿರುವುದರಿಂದ) ॥

೧೮ ಓಂ ಅದ್ಭ್ಯಸ್ಸ್ವಾಹಾ ॥

ಅಬ್ದೇವತೆಗಳಿಗೆ(ನೀರು) ಈ ಹವಿಸ್ಸು ಅರ್ಪಿತವಾಗಲಿ ॥

೧೯ ಓಂ ಓಷಧಿವನಸ್ಪತಿಭ್ಯಸ್ಸ್ವಾಹಾ ॥

ಓಷಧಿ ವನಸ್ಪತಿ(ಧಾನ್ಯ ಮತ್ತು ಫಲಗಳನ್ನು ಬಿಡುವಂತಹ ಶಾಖಾ ವೃಕ್ಷಗಳು) ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೦ ಓಂ ರಕ್ಷೋದೇವಜನೇಭ್ಯಸ್ಸ್ವಾಹಾ ॥

ರಾಕ್ಷಸರು ಮತ್ತು ದೇವತೆಗಳ ಸ್ವರೂಪವಾಗಿರುವಂತಹ ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ, ಅಥವಾ ರಾಕ್ಷಸರು ಮತ್ತು ದೇವತೆಗಳ ಪರಿಚಾರಕರಿಗೆ ಅರ್ಪಿತವಾಗಲಿ ॥

೨೧ ಓಂ ಗೃಹ್ಯಾಭ್ಯಸ್ಸ್ವಾಹಾ ॥

ಮನೆಯಲ್ಲಿರುವ ವಾಸ್ತು ಮುಂತಾದ ಪ್ರಸಿದ್ಧ ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೨ ಓಂ ಅವಸಾನೇಭ್ಯಸ್ಸ್ವಾಹಾ ॥

ಮನೆಗೆ ಅಧಿಷ್ಠಾತೃಗಳಾದ ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೩ ಓಂ ಅವಸಾನಪತಿಭ್ಯಸ್ಸ್ವಾಹಾ ॥

ಮನೆಯ ಅಧಿಷ್ಠಾತೃ ದೇವತೆಗಳ ಒಡೆಯರಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೪ ಓಂ ಸರ್ವಭೂತೇಭ್ಯಸ್ಸ್ವಾಹಾ ॥

ಎಲ್ಲಾ ಸ್ಥಾವರ, ಜಂಗಮ ಭೂತಗಳಿಗೂ ಈ ಹವಿಸ್ಸು ಅರ್ಪಿತವಾಗಲಿ ॥

೨೫ ಓಂ ಕಾಮಾಯ ಸ್ವಾಹಾ ॥

ಕಾಮದೇವನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೬ ಓಂ ಅಂತರಿಕ್ಷಾಯ ಸ್ವಾಹಾ ॥

ಅಂತರಿಕ್ಷ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೭ ಓಂ ಯದೇಜತಿ ಜಗತಿ ಯಚ್ಚ ಚೇಷ್ಟತಿ ನಾಮ್ನೋ ಭಾಗೋ ಯನ್ನಾಮ್ನೋ ಸ್ವಾಹಾ ॥

ಯಾವುದರಿಂದ ದ್ವಾರವು ಮುಚ್ಚಲ್ಪಡುತ್ತದೋ ಅಥವಾ ಮುಚ್ಚುವ ಸಮಯದಲ್ಲಿ ಯಾವನು ಕಂಪಿಸುತ್ತಾನೋ ಮತ್ತು ಲೋಕದಲ್ಲಿ ಯಾರು ಚೇಷ್ಟಾರೂಪದಿಂದ ಇದ್ದಾನೋ ಮತ್ತು ನಮಸ್ಕಾರಕ್ಕೆ ಯೋಗ್ಯನಾದ, ನಮನಶೀಲನಾದ ಆ ವಾಯು ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೮ ಓಂ ಪೃಥಿವ್ಯೈ ಸ್ವಾಹಾ ॥

ಪೃಥಿವೀ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೨೯ ಓಂ ಅಂತರಿಕ್ಷಾಯ ಸ್ವಾಹಾ ॥

ಅಂತರಿಕ್ಷ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೦ ಓಂ ದಿವೇ ಸ್ವಾಹಾ ॥

ದ್ಯುಲೋಕ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೧ ಓಂ ಸೂರ್ಯಾಯ ಸ್ವಾಹಾ ॥

ಸೂರ್ಯದೇವನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೨ ಓಂ ಚಂದ್ರಮಸೇ ಸ್ವಾಹಾ ॥

ಸೋಮ ರೂಪನಾದ ಚಂದ್ರನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೩ ಓಂ ನಕ್ಷತ್ರೇಭ್ಯಸ್ಸ್ವಾಹಾ ॥

ನಕ್ಷತ್ರದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೪ ಓಂ ಇಂದ್ರಾಯ ಸ್ವಾಹಾ ॥

ದೇವತೆಗಳ ಅಧಿಪತಿಯಾದ(ಬಲಾಧಿಪತಿಯಾದ) ಇಂದ್ರನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೫ ಓಂ ಬೃಹಸ್ಪತಯೇ ಸ್ವಾಹಾ ॥

ದೇವತೆಗಳ ಪುರೋಹಿತನಾದ ಬೃಹಸ್ಪತಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೬ ಓಂ ಪ್ರಜಾಪತಯೇ ಸ್ವಾಹಾ ॥

ವಿರಾಟ್ ರೂಪನಾದ ಪ್ರಜಾಪತಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೭ ಓಂ ಬ್ರಹ್ಮಣೇ ಸ್ವಾಹಾ ॥

ಹಿರಣ್ಯಗರ್ಭ ಸ್ವರೂಪನಾದ ಬ್ರಹ್ಮನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೮ ಓಂ ಸ್ವಧಾ ಪಿತೃಭ್ಯಸ್ಸ್ವಾಹಾ ॥

ಅಗ್ನಿಷ್ವಾತ್ತಾ ಮುಂತಾದ ಪಿತೃದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೯ ಓಂ ನಮೋ ರುದ್ರಾಯ ಪಶುಪತಯೇ ಸ್ವಾಹಾ ॥

ಪಶುಗಳ(ಜೀವಿಗಳ) ಅಧಿಪತಿಯಾದ ರುದ್ರನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೪೦ ಓಂ ಯೇ ಭೂತಾ: ಪ್ರಚರಂತಿ ದಿವಾ ನಕ್ತಂ ಬಲಿಮಿಚ್ಛಂತೋ ವಿತುದಸ್ಯ ಪ್ರೇಷ್ಯಾ: । ತೇಭ್ಯೋ ಬಲಿಂ ಪುಷ್ಟಿಕಾಮೋ ಹರಾಮಿ ಮಯಿ ಪುಷ್ಟಿಂ ಪುಷ್ಟಿಪತಿರ್ದಧಾತು ಸ್ವಾಹಾ ॥

ಯಾವ ಭೂತಗಳು, ಹಗಲು–ರಾತ್ರಿ ಅತ್ತ ಇತ್ತ ಸಂಚರಿಸುತ್ತವೆಯೋ ಹಾಗೂ ಬಲಿಯನ್ನು ಇಷ್ಟಪಡುವ ಕುಬೇರನ ಮಗನಾದ 'ವಿತುದಿಯ' ಇಷ್ಟಭೂತಗಳಿಗೆ ಈ ಬಲಿಯನ್ನು, ಪುಷ್ಟಿಕಾಮನಾದ ನಾನು ಅರ್ಪಿಸುತ್ತೇನೆ । ಪುಷ್ಟಿಪತಿಯಾದ ಆ ವಿತುದನು ನಾನು ಪುಷ್ಟಿವಂತನಾಗುವಂತೆ ಮಾಡಲಿ ॥

~~~~~~~~~~~~~
~~~~~~~~~~~~~

5. ಪಂಚ ಮಹಾಯಜ್ಞ ಮಂತ್ರಾರ್ಥ:

೧ ದೇವಯಜ್ಞ ಮಂತ್ರಾರ್ಥ:

೧ ಓಂ ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಮಿಂಚಿನಂತೆ ಶುದ್ಧವಾದ ಸ್ವರೂಪವುಳ್ಳವನಾಗಿದ್ದೀಯ, ನನ್ನನ್ನು ಮರ್ತ್ಯ ಮತ್ತು ಪಾಪ್ಮ ಸ್ವರೂಪದಿಂದ ಅಮೃತ ಸ್ವರೂಪಕ್ಕೆ ಕರೆದೊಯ್ಯಿ । ನಾನು ಅಮೃತ ಸ್ವರೂಪವನ್ನು ಈ ಕರ್ಮದಿಂದ ಪಡೆಯುತ್ತೇನೆ (ಮರ್ತ್ಯ ಮತ್ತು ಪಾಪ ಸ್ವರೂಪವನ್ನು ಸುಟ್ಟುಹಾಕು) ॥

೨ ಓಂ ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

ವೃಷ್ಟಿಯಂತೆ ಕಾಮವನ್ನು ಸುರಿಸುವವನೂ ಆಗಿದ್ದೀಯೆ, ನನ್ನನ್ನು ಮರ್ತ್ಯರೂಪವಾದ ಪಾಪ ಸ್ವರೂಪದಿಂದ, ಅಮೃತ ಸ್ವರೂಪಕ್ಕೆ ಕರೆದುಕೊಂಡು ಹೋಗು, ನಾನು ಅಮೃತ ಸ್ವರೂಪವನ್ನು ಪಡೆದವನಾದೆನು (ಮರ್ತ್ಯ ಮತ್ತು ಪಾಪ ಸ್ವರೂಪವನ್ನು ಕಡಿದುಹಾಕು) ॥

೩ ಓಂ ದೇವೇಭ್ಯಸ್ಸ್ವಹಾ ॥

ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೨ ಪಿತೃಯಜ್ಞ ಮಂತ್ರಾರ್ಥ:

೧ ಓಂ ಪಿತೃಭ್ಯಸ್ಸ್ವಧಾऽಸ್ತು ॥

ಈ ಪಿಂಡವು(ಹವಿಸ್ಸು) ಪಿತೃದೇವತೆಗಳಿಗೆ ಅರ್ಪಿತವಾಗಲಿ ॥

೩ ಭೂತಯಜ್ಞ ಮಂತ್ರಾರ್ಥ:

೧ ಓಂ ಭೂತೇಭ್ಯೋ ನಮ: ॥

ಎಲ್ಲಾ ಭೂತಗಳಿಗೂ ನಮಸ್ಕಾರ ಪೂರ್ವಕವಾಗಿ ಈ ಹವಿಸ್ಸು ಅರ್ಪಿತವಾಗಲಿ ॥

೪ ಮನುಷ್ಯಯಜ್ಞ ಮಂತ್ರಾರ್ಥ:

೧ ಓಂ ಮನುಷ್ಯೇಭ್ಯೋ ಹಂತಾ ॥

ಹಂತಕಾರ(ಒಂದು ರೀತಿಯ ಅಳತೆಯ ಮಾನ) । ಈ ಹಂತರೂಪವಾದ ಹವಿಸ್ಸು ಮನುಷ್ಯರಿಗೆ ಅರ್ಪಿತವಾಗಲಿ ॥

೫ ಬ್ರಹ್ಮಯಜ್ಞ ಮಂತ್ರಾರ್ಥ:

೧ ಓಂ ಏಕಾಮಪ್ಯೃಚಂ ಯಜುಸ್ಸಾಮ ವಾ ತದ್ಬ್ರಹ್ಮಯಜ್ಞಸ್ಸಂತಿಷ್ಠತೇ ॥

ವೇದದಲ್ಲಿ, ೧ ಋಕ್ – ೧ ಯಜುಸ್ – ೧ ಸಾಮ ಮತ್ತು ೧ ಅಥರ್ವಾಂಗಿರಸ ಮಂತ್ರಗಳನ್ನು ಅಧ್ಯಯನ (ಜಪಿಸಿದರೆ) ಮಾಡಿದರೆ, ಅದು ಬ್ರಹ್ಮಯಜ್ಞವಾಗುತ್ತದೆ ಎಂದಿರುವುದರಿಂದ ಮಂತ್ರವನ್ನು ಅರ್ಥಸಹಿತವಾಗಿ ಅಧ್ಯಯನಮಾಡಿದರೆ ಅದು ಅತ್ಯಂತ ವೀರ್ಯವತ್ತರವಾಗಿರುತ್ತದೆ ॥

೨ ಓಂ ಋಚೋ ಅಕ್ಷರೇ ಪರಮೇ ವ್ಯೋಮನ್, ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುರ್ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥

ಅಕ್ಷರ ಸ್ವರೂಪನಾದ, ಅತ್ಯಂತ ಉತ್ಕೃಷ್ಟವಾದ ಆಕಾಶಸ್ವರೂಪನಾದ, ಪರಮಾತ್ಮನಲ್ಲಿ ಯಾವ ದೇವಾಧಿದೇವತೆಗಳು ಮತ್ತು ವಿಶ್ವೇದೇವತೆಗಳು

ಆಶ್ರಯಿಸಿಕೊಂಡಿದ್ದಾರೋ ಹಾಗೂ ಯಾವ ಋಕ್ ಆ ಪರಮಾತ್ಮ ಸ್ವರೂಪವನ್ನು ಹೇಳಲು ಅಸಮರ್ಥವಾಗಿದೆಯೋ (ವೇದವು, ಪರಮಾತ್ಮ ಸ್ವರೂಪವನ್ನು, ಅದಲ್ಲದ ಸ್ವರೂಪವನ್ನು ಕಳೆಯುವುದರ ಮೂಲಕ ತಿಳಿಸುತ್ತದೆ । ಏಕೆಂದರೆ, ಪರಮಾತ್ಮನು ಮಾತಿಗೆ, ಮನಸ್ಸಿಗೆ, ಇಂದ್ರಿಯಗಳಿಗೆ ತಿಳಿದುಬರುವವನಲ್ಲವಾದ್ದರಿಂದ ಮತ್ತು ದೇಶ, ಕಾಲ, ಪರಿಚ್ಛೇದ ಹಾಗೂ ರೂಪ ಪರಿಚ್ಛೇದ ಇಲ್ಲದಿರುವುದರಿಂದ) ಅಂತಹ ಆ ಋಕ್ಕಿನ ಕೇವಲ ಕಂಠಪಾಠದಿಂದ ಪ್ರಯೋಜನವಿಲ್ಲವಾದ್ದರಿಂದ, ಯಾವ ಜ್ಞಾನಿಗಳು ಆ ಸ್ವರೂಪವನ್ನು ತಿಳಿದುಕೊಂಡಿದ್ದಾರೋ ಅವರ ಬಳಿಸಾರಿ(ಹತ್ತಿರಹೋಗಿ) ಪರಮಾತ್ಮ ಸ್ವರೂಪವನ್ನು ತಿಳಿದುಕೋ । ಅಂತಹವರ ಸ್ವರೂಪವನ್ನು ಈ ಋಕ್–ಯಜುಸ್–ಸಾಮ–ಅಥರ್ವವೇದಗಳು ತಿಳಿಸುತ್ತಿವೆ ॥

೬ ಗಾಯತ್ರೀ ಮಂತ್ರಾರ್ಥ:

ಓಂ ಭೂರ್ಭುವಸ್ಸುವ: । ತತ್ಸವಿತುರ್ವರೇಣ್ಯಂ । ಭರ್ಗೋದೇವಸ್ಯ ಧೀಮಹಿ । ಧಿಯೋಯೋನ: ಪ್ರಚೋದಯಾತ್ ॥

ಭೂಲೋಕ, ಭುವಲೋಕ, ಸುವಲೋಕ ಸ್ವರೂಪನಾಗಿರುವವನು ಪರಮಾತ್ಮನು । ಆ ಸವಿತೃದೇವನ ಶ್ರೇಷ್ಠವಾದ ತೇಜಸ್ಸನ್ನು (ಸವಿತೃದೇವನ ತೇಜಸ್ಸಿಗೆ ಕಾರಣನಾದ ಆ ಪರಮಾತ್ಮನನ್ನು) ನಾನು ಧ್ಯಾನ ಮಾಡುತ್ತೇನೆ ಅಥವಾ ಮನನ ಮಾಡುತ್ತೇನೆ । ಯಾವ ಆ ಪರಮಾತ್ಮನ ಚೈತನ್ಯವೇ ನಮ್ಮ ಬುದ್ಧಿಗೆ ಪ್ರೇರಕವಾಗಿದೆಯೋ ಅಂತಹ ಆ ಚೈತನ್ಯವನ್ನು ಧ್ಯಾನಿಸುತ್ತೇನೆ ॥

ಅನವಾನಂ

ಓಂ ಸತ್ಯಂ ತಪ: ಶ್ರದ್ಧಾಯಾಂ ಜುಹೋಮಿ । ಅಹಂ ವೃಕ್ಷಸ್ಯ ರೇರಿವಾ । ಕೀರ್ತಿ: ಪೃಷ್ಠಂ ಗಿರೇರಿವ । ಊರ್ಧ್ವಪವಿತ್ರೋ ವಾಜಿನೀವಸ್ವ್ಯಮೃತಮಸ್ಮಿ ।

ದ್ರವಿಣಗ್ಂ ಸ ವರ್ಚಸಂ । ಸುಮೇಧಾ ಅಮೃತೋಕ್ಷಿತ: । ಇತಿ ತ್ರಿಶಂಕೋರ್ವೇದಾನುವಚನಮ್ ॥

ಸತ್ಯ, ತಪಸ್ಸು, ಶ್ರದ್ಧೆಗಳಲ್ಲಿ ಹೋಮಿಸುತ್ತೇನೆ । ನಾನು ಸಂಸಾರವೃಕ್ಷವನ್ನು ಏರಿದವನಾಗಿದ್ದೀನಿ, ಕೀರ್ತಿಯೇ ನನಗೆ ಗಿರಿಯು ತುದಿಯಾಗಿದೆ । ಮೂಲಸ್ವರೂಪದಿಂದ ನಾನು ಪವಿತ್ರನಾಗಿದ್ದೇನೆ (ಪರಮಾತ್ಮ ಸ್ವರೂಪದಿಂದ), ವಾಜಿಯಂತೆ(ಕುದುರೆ) ನಾನು ಪವಿತ್ರಸ್ವರೂಪನಾಗಿದ್ದೀನಿ । ಮತ್ತು, ಅಮೃತಸ್ವರೂಪನಾಗಿದ್ದೀನಿ, ಒಳ್ಳೆಯ ಐಶ್ವರ್ಯ, ಬ್ರಹ್ಮವರ್ಚಸ್ಸು, ಬುದ್ಧಿ, ಇಷ್ಟನ್ನೂ ಉಳ್ಳವನಾಗಿದ್ದೀನಿ । ಅಮೃತಸ್ವರೂಪವಾದಂತಹ ಪರಮಾತ್ಮನ ಲೋಕದಲ್ಲಿ ವಾಸವಾಗಿದ್ದೀನಿ । ಇದು ತ್ರಿಶಂಕುವಿನ ವೇದಾನುವಚನ ॥

ಋಗ್ವೇದಃ

ಓಂ ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ । ಹೋತಾರಂ ರತ್ನಧಾತಮಮ್ ॥ (ಸಂಹಿತಾ, ೧ನೇ ಅಷ್ಟಕದ ಪ್ರಾರಂಭ)

ದೇವತೆಗಳ ಪುರೋಹಿತನಾದ, ಯಜ್ಞದ ದೇವಸ್ವರೂಪನಾದ, ದೇವತೆಗಳ ಋತ್ವಿಜನಾದ, ಅಗ್ನಿಯನ್ನು ಆರಾಧಿಸುತ್ತೇನೆ । ಮತ್ತೂ ಹೋತೃಸ್ವರೂಪನಾದ, ವಜ್ರ ವೈಢೂರ್ಯ ಮುಂತಾದ ಐಶ್ವರ್ಯಗಳನ್ನು ಕೊಡುವವನಾದ ಅಗ್ನಿದೇವನನ್ನು ಆರಾಧಿಸುತ್ತೇನೆ ॥

ಯಜುರ್ವೇದಃ

ಓಂ ಇಷೇತ್ವೋರ್ಜೇ ತ್ವಾ ವಾಯವಸ್ಥೋಽಪಾಯವಸ್ಥ ದೇವೋವಸ್ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣ ಆಪ್ಯಾಯಧ್ವಮಘ್ನಿಯಾ

ದೇವಭಾಗಮೂರ್ಜಸ್ವತೀಃ ಪಯಸ್ವತೀಃ ಪ್ರಜಾವತೀರನಮೀವಾ
ಅಯಕ್ಷ್ಮಾವಸ್ತೇನ ಈಶತ ಮಾಘಶಗ್ಂ ಸೋ ರುದ್ರಸ್ಯ ಹೇತಿಃ
ಪರಿವೋ ವೃಣಕ್ತು ಧ್ರುವಾ ಅಸ್ಮಿನ್ ಗೋಪತೌಸ್ಯಾತ ಬಹ್ವೀರ್ಯಜಮಾನಸ್ಯ
ಪಶೂನ್ ಪಾಹಿ ॥(ಸಂಹಿತಾ, ೧ನೇಕಾಂಡದ ಪ್ರಾರಂಭ)

ಅನ್ನಕ್ಕಾಗಿ ಮತ್ತು ಬಲಕ್ಕಾಗಿ ಎಲ್ಲೆ ಪಶುವೇ ನಿನ್ನನ್ನು ಮೇಯಲು ಬಿಡುತ್ತಿದ್ದೇನೆ । ನೀವು ಸಂಚರಿಸಿ ಆಹಾರವನ್ನು ತಿಂದು, ಮತ್ತೆ ಹಿಂತಿರುಗಿ ಬರುವವರಾಗಿರಿ । ಶ್ರೇಷ್ಠನಾದ ಸವಿತೃದೇವನು ಉತ್ತಮವಾದ ದರ್ಶಪೂರ್ಣಮಾಸಾದಿ ಕರ್ಮಗಳಿಗೆ ನಿಮ್ಮನ್ನು ಉಪಕಾರರನ್ನಾಗಿ ಮಾಡಲಿ । ಎಲ್ಲ ಕಡೆಯಿಂದಲೂ ನಮಗೆ ಮಂಗಳವನ್ನುಂಟುಮಾಡುವವರಾಗಿರಿ । ಮತ್ತು ಎಲ್ಲ ಕಡೆಗಳಿಂದಲೂ ತೃಪ್ತರಾಗಿರಿ । ಯಾವುದರಿಂದಲೂ ಹಿಂಸಿಸಲ್ಪಡದವರಾಗಿ ದೇವತೆಗಳ ಭಾಗವನ್ನು ಸೇವಿಸುವವರಾಗಿರಿ । ಬಲಕ್ಕೆ ಕಾರಣವಾದ ರಸವುಳ್ಳವರಾಗಿದ್ದೀರಿ । ಹಾಲುಳ್ಳವರಾಗಿದ್ದೀರಿ । ಕರುವುಳ್ಳವರಾಗಿದ್ದೀರಿ । ರೋಗರುಜಿನ ಇಲ್ಲದವರಾಗಿದ್ದೀರಿ । ನಿಮ್ಮನ್ನು ಕಳ್ಳರು ಕರೆದೊಯ್ಯಲು ಸಮರ್ಥರಾಗದೇ ಇರಲಿ ಮತ್ತು ಕ್ರೂರಮೃಗಗಳು ನಿಮ್ಮನ್ನು ಹಿಂಸಿಸುವುದಕ್ಕೆ ಸಮರ್ಥವಾಗದೇ ಇರಲಿ । ರುದ್ರನ ಆಯುಧವು ನಿಮ್ಮನ್ನು ಸುತ್ತಲೂ ರಕ್ಷಿಸಲಿ ಹಾಗೂ ರುದ್ರನ ಆಯುಧದ ದೃಷ್ಟಿಯು ನಿಮ್ಮ ಮೇಲಾಗದಿರಲಿ । ಈ ಯಜಮಾನನಲ್ಲಿ ಶಾಶ್ವತವಾಗಿ ನೆಲೆಸಿರಿ । ನಿಮ್ಮ ಸಂತತಿ ವೃದ್ಧಿಸಲಿ, ಎಲ್ಲೆ ಅಗ್ನಿದೇವನೇ ಯಜಮಾನನ ಪಶುಗಳನ್ನು ಕಾಪಾಡು ॥

ಸಾಮವೇದಃ

ಓಂ ಅಗ್ನ ಆಯಾಹಿ ವೀತಯೇ ಗೃಣಾನೋ ಹವ್ಯದಾತಯೇ । ನಿ ಹೋತಾ
ಸತ್ಸಿ ಬರ್ಹಿಷಿ ॥ (ಸಾಮವೇದದ ಪ್ರಾರಂಭ)

ಎಲೈ ಅಗ್ನಿಯೇ ಹವಿಸ್ಸನ್ನು ಸೇವಿಸಲು ಇಷ್ಟವುಳ್ಳವನಾಗಿ ಈ ಯಜಮಾನನ ಬಳಿಗೆ ಬಾ । ಈ ಯಜ್ಞದಲ್ಲಿ ಋತ್ವಿಜರು ಅಥವಾ ಹೋತೃವು ನಿನಗೆ ಸಂಪೂರ್ಣವಾಗಿ ಹವಿಸ್ಸನ್ನು ಅರ್ಪಿಸುವವರಿದ್ದಾರೆ, ಮತ್ತು ಸ್ತುತಿ ಮಾಡುವವರಿದ್ದಾರೆ ॥

ಅಥರ್ವಣವೇದಃ

ಓಂ ಶನ್ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ ।
ಶಂಯೋರಭಿಸ್ರವಂತುನ: ॥(ಅಥರ್ವಣವೇದದ ಪ್ರಾರಂಭ)

ನಮಗೆ ಅಪ್(ನೀರಿನ)ದೇವತೆಗಳು ಸುಖವನ್ನು ಕೊಡುವವರಾಗಿದ್ದಾರೆ, ನಮ್ಮ ಇಷ್ಟಾರ್ಥ ಸಿದ್ಧಿಗೆ ಮತ್ತು ಕುಡಿಯುವುದಕ್ಕಾಗಿ ಈ ದೇವತೆಗಳು ಅನುಕೂಲಕರವಾಗಿರಲಿ । ನಮ್ಮಿಬ್ಬರಿಗೆ ಸುಖವು ಎಲ್ಲ ಕಡೆಯಿಂದಲೂ ಸುರಿಯಲಿ ॥

ಓಂ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮ: ಪೃಥಿವ್ಯೈ ನಮ ಓಷಧೀಭ್ಯ: । ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ । ಓಂ ಶಾಂತಿ: ಶಾಂತಿ: ಶಾಂತಿ: ॥

ಎಲೈ ಬ್ರಹ್ಮದೇವನೇ ನಿನಗೆ ನಮಸ್ಕಾರವು, ಅಗ್ನಿಗೆ ನಮಸ್ಕಾರವು, ಪೃಥಿವಿಗೆ ನಮಸ್ಕಾರವು, ಓಷಧಿಗಳಿಗೆ ನಮಸ್ಕಾರವು । ವಾಗ್ದೇವತೆಗೆ ನಮಸ್ಕಾರವು, ವಾಕ್ಪತಿಗೆ ನಮಸ್ಕಾರವು, ಅನಂತ ವ್ಯಾಪಕನಾದ ವಿಷ್ಣುವಿಗೆ ನಮಸ್ಕಾರವು ॥

~~~~~~~~~~
~~~~~~~~~~

6. ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು

ವಿವಾಹಿತ ಕನ್ಯೆಯು ಬೇರೆ ಪತಿಯನ್ನು ಯಾವಾಗ ಪಡೆಯಬಹುದು

೧ ಉದ್ವಾಹಿ ತಾಪಿ ಸಾಕನ್ಯಾನ ಚೇತ್ ಸಂ ಪ್ರಾಪ್ತ ಯೌವನಾ । ಪುನ: ಸಂಸ್ಕಾರಂ ಅರ್ಹೇತ ಯಥಾ ಕನ್ಯಾ ತಥೈವ ಸಾ ॥ ನಾರದ ಸ್ಮೃತಿ ॥

ವಿವಾಹಿತ ಕನ್ಯೆಯು, ಋತುಮತಿಯಾಗುವುದರೊಳಗೇ ಪತಿಯು ಸತ್ತು ಹೋದರೆ, ಬೇರೆ ಪುರುಷನನ್ನು ಮದುವೆಯಾಗಬಹುದು ॥

೨ ವರಯಿತ್ವಾತು ಯ: ಕಶ್ಚಿತ್ ಪ್ರಣಶ್ಯೇತ್ ಪುರುಷೋಯದಾ । ಋತ್ವಾಗಮಾನ್ ತ್ರೀನತೀತ್ಯ ಕನ್ಯಾನ್ಯಂ ವರಯೇದ್ವರಮ್ ॥ ಕಾತ್ಯಾಯನ ಸ್ಮೃತಿ ॥

ಕನ್ಯೆಯು ತನ್ನ ಗಂಡನು ಸತ್ತರೆ, ೩ ಋತುಗಳು ಅಂದರೆ ೬ ತಿಂಗಳುಗಳು ಬಿಟ್ಟು ಬೇರೆ ಮದುವೆ ಆಗಬಹುದು ॥

೩ ನಷ್ಟೇ ಮೃತೇ ಪ್ರವಜಿತೇ ಕ್ಲೀಬೇ ಚ ಪತಿತೇ ವರ: । ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥ ಪರಾಶರ ಸ್ಮೃತಿ ॥

ಗಂಡನು – ಸತ್ತರೆ, ದೇಶಾಂತರಕ್ಕೆ ಹೋದರೆ (೬ ತಿಂಗಳುಗಳಿಗಿಂತ ಹೆಚ್ಚಿಗೆ), ಸಂನ್ಯಾಸಿಯಾದರೆ, ಶಂಡನಾದರೆ (ನಪುಂಸಕ), ಅತ್ಯಾಚಾರಿ-ಕಳ್ಳ-ದ್ರೋಹಿ-ಕಪಟಿಯೇ(ಪತಿತ) ಮೊದಲಾದವನಾಗಿದ್ದರೆ, ಅಂತಹವನನ್ನು ಬಿಟ್ಟು ಸ್ತ್ರೀಯು ಬೇರೆ ಮದುವೆಯಾಗಬಹುದು ॥

೪ ಪ್ರತಿಗೃಹ್ಯತು ಯ: ಕನ್ಯಾಂ ವರೋ ದೇಶಾಂತರಂ ವ್ರಜೇತ್ । ತ್ರೀನ್ ಋತೂನ್ ಸಮತಿಕ್ರಮ್ಯ ಕನ್ಯಾನ್ಯಂ ವರಯೇದ್ವರಮ್ ॥ ನಾರದ ಸ್ಮೃತಿ ॥

ಗಂಡನು ಸತತವಾಗಿ ೬ ತಿಂಗಳುಗಳು ತನ್ನಿಂದ ದೂರವಾಗಿದ್ದರೆ, ಆಗ ಆ ಕನ್ಯೆಯು ಬೇರೆ ಮದುವೆ ಆಗಬಹುದು ॥

೫ ಕನ್ಯಾಂ ಯಚ್ಛತಿ ವೃದ್ಧಾಯ ನೀಚಾಯ ಧನಲಿಪ್ಸಯಾ । ಕುರೂಪಾಯ ಕುಶೀಲಾಯ ಸಪ್ರೇತೋ ಜಾಯತೇ ನರ: ॥ ವಸಿಷ್ಠ ಸ್ಮೃತಿ ॥

ಮುದುಕನೂ, ನೀಚನೂ, ಕುರೂಪಿಯೂ, ಕುಶೀಲನೂ, ಆದವನಿಗೆ ಹಣದ ಆಸೆಯಿಂದ ಹುಡುಗಿಯನ್ನು ಮದುವೆಮಾಡಿಕೊಟ್ಟರೆ, ಅಂತಹವನು ಪ್ರೇತತ್ವವನ್ನು ಹೊಂದಿ ನರಕಕ್ಕೆ ಹೋಗುತ್ತಾನೆ ॥

೬ ಪೌರೋಹಿತ್ಯಂ ಚಾರ್ಚಕತ್ವಂ ಮಾಠಾಪತ್ಯಂ ತಥೈವ ಚ । ಯ: ಕರೋತಿ ಸದೇವೋಪಿ ಶ್ವಾನಯೋನಿಂ ಸಮಶ್ನುತೇ ॥

ಪೌರೋಹಿತ್ಯ, ದ್ರವ್ಯ ತೆಗೆದುಕೊಂಡು ದೇವತಾ ಪೂಜೆ, ಮಠದ ಆಧಿಪತ್ಯ, ಈ ವೃತ್ತಿಗಳನ್ನು ಮಾಡುವವನು ದೇವತೆಯೇ ಆದರೂ ಮುಂದೆ ನಾಯಿಯಾಗಿ ಹುಟ್ಟುತ್ತಾನೆ ॥

ಯಾರು ಯಾರು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು

೭ ಪಿತಾಪುತ್ರೌ ಸಹಾಸೀತಾಂ ದ್ವೌ ವಿಪ್ರೌ ಕ್ಷತ್ರಿಯಾವಪಿ । ವೃದ್ಧೌ ವೈಶ್ಯೌ ಚ ಶೂದ್ರೌ ಚ ನ ತ್ವನ್ಯಾವಿತರೇತರಮ್ ॥

ತಂದೆ–ಮಗ, ಇಬ್ಬರು ಬ್ರಾಹ್ಮಣರು, ಇಬ್ಬರು ಕ್ಷತ್ರಿಯರು । ಇಬ್ಬರು ವೃದ್ಧರು, ಇಬ್ಬರು ವೈಶ್ಯರು, ಇಬ್ಬರು ಶೂದ್ರರು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು ॥

ಭಗವಂತನ ಆದೇಶ

೮. ಶ್ರುತಿ ಸ್ಮೃತೀಮಮೈವಾಜ್ಞೇ ಯಸ್ತದುಲ್ಲಂಘ್ಯ ವರ್ತತೇ ।
ಆಜ್ಞಾಚ್ಛೇದೀ ಮಮದ್ವೇಷೀ ಮದ್ಭಕ್ತೋಽಪಿ ನ ವೈಷ್ಣವ: ॥

ಶ್ರುತಿ ಅಂದರೆ ವೇದಗಳು ಮತ್ತು ಸ್ಮೃತಿ ಅಂದರೆ ಧರ್ಮಶಾಸ್ತ್ರ, ಪುರಾಣಾದಿಗಳು ಇವುಗಳಲ್ಲಿರುವುದು ನನ್ನ ಆಜ್ಞೆ । ಇವನ್ನು ಯಾರು ಉಲ್ಲಂಘಿಸುವರೋ ಅವರು ನನ್ನ ಭಕ್ತರಾದರೂ ವೈಷ್ಣವರಾಗುವುದಿಲ್ಲ(ಅವರನ್ನು ನಾನು ಕ್ಷಮಿಸುವುದಿಲ್ಲ) ॥

ಸ್ತ್ರೀಯರ ಸಾಮರ್ಥ್ಯ

೯ ಉಶನಾವೇದ ಯಚ್ಛಾಸ್ತ್ರಂ ಯಶ್ಚವೇದ ಬೃಹಸ್ಪತಿ: । ಸ್ವಭಾವೇನೈವ ತಚ್ಛಾಸ್ತ್ರಂ ಸ್ತ್ರೀ ಬುದ್ಧ್ಯಾ ಸುಪ್ರತಿಷ್ಠಿತಮ್ ॥

ಶುಕ್ರನು ಎಷ್ಟು ಶಾಸ್ತ್ರಗಳನ್ನು ತಿಳಿದಿರುವನೋ, ದೇವಗುರುವಾದ ಬೃಹಸ್ಪತಿಯು ಎಷ್ಟನ್ನು ತಿಳಿದಿರುವನೋ ಅಷ್ಟನ್ನೂ ಸಹ ಹೆಂಗಸರು ಸ್ವಾಭಾವಿಕವಾಗಿಯೇ ತಿಳಿದಿರುತ್ತಾರೆ ॥

ಗಾಯತ್ರೀ ಮಂತ್ರದ ಶಕ್ತಿ–ಮಹತ್ವ
(ಬ್ರಹ್ಮವೈವರ್ತ ಪುರಾಣ)

೧೦ ನೋಪತಿಷ್ಠತಿ ಯ: ಪೂರ್ವಾಂ ನೋಪಾಸ್ತೇ ಯಶ್ಚ ಪಶ್ಚಿಮಾಂ ।
ಸ ಶೂದ್ರವದ್ಬಹಿಷ್ಕಾರ್ಯ: ಸರ್ವಸ್ಮಾದ್ದ್ವಿಜ ಕರ್ಮಣಃ ॥

ಯಾರು ಬೆಳಗಿನ ಮತ್ತು ಸಂಜೆಯ ಸಂಧ್ಯಾಕರ್ಮಗಳನ್ನು ಮಾಡುವುದಿಲ್ಲವೋ ಅವನನ್ನು ಬ್ರಾಹ್ಮಣೋಚಿತವಾದ ಎಲ್ಲಾ ಕರ್ಮಗಳಿಂದಲೂ ಬಹಿಷ್ಕಾರ ಹಾಕಿ ಶೂದ್ರನಂತಿಡಬೇಕು ॥

೧೧ ಯಾವಜ್ಜೀವನ ಪರ್ಯಂತಂ ಯಸ್ತ್ರಿಸಂಧ್ಯಾಂ ಕರೋತಿ ಚ । ಸ ಚ ಸೂರ್ಯ ಸಮೋ ವಿಪ್ರಸ್ತೇಜಸಾ ತಪಸಾ ಸದಾ ॥

ಜೀವಿತಕಾಲ ಪೂರ್ತಿಯಾಗಿ ಯಾರು ತ್ರಿಸಂಧ್ಯಾ ಕರ್ಮಗಳನ್ನು ಆಚರಿಸುವರೋ ಆ ಬ್ರಾಹ್ಮಣರು ತೇಜಸ್ಸು, ತಪಸ್ಸಿನಲ್ಲಿ ಸೂರ್ಯನಿಗೆ ಸಮಾನರಾಗಿ ಸಕಲ ಪಾಪಗಳಿಂದ ಮುಕ್ತರಾಗುವರು ॥

೧೨ ನ ಗೃಹ್ಣಂತಿ ಸುರಾಃ ಪೂಜಾಂ ಪಿತರಃ ಪಿಂಡ ತರ್ಪಣಂ । ಸ್ವೇಚ್ಛಯಾ ಚ ದ್ವಿಜಾತೇಶ್ಚ ತ್ರಿಸಂಧ್ಯರಹಿತಸ್ಯ ಚ ॥

ತ್ರಿಸಂಧ್ಯೆಯನ್ನು ಆಚರಿಸದೇ ಸ್ವೇಚ್ಛೆಯಾಗಿರುವ ಮನುಷ್ಯರು ಅರ್ಪಿಸಿದ ಪೂಜೆಯನ್ನು ದೇವತೆಗಳು ಸ್ವೀಕರಿಸುವುದಿಲ್ಲ, ಅವರು ಕೊಟ್ಟ ಪಿಂಡ, ತರ್ಪಣಗಳನ್ನೂ ಪಿತೃಗಳೂ ಸ್ವೀಕರಿಸುವುದಿಲ್ಲ ॥

ಬ್ರಾಹ್ಮಣರು ಯಾವಾಗ ತಮ್ಮ ಶಕ್ತಿ–ತೇಜಸ್ಸನ್ನು ಕಳೆದುಕೊಳ್ಳುವುದು (ಬ್ರಹ್ಮವೈವರ್ತ ಪುರಾಣ)

೧೩ ವಿಷ್ಣುಮಂತ್ರ ವಿಹೀನಶ್ಚ ತ್ರಿಸಂಧ್ಯ ರಹಿತೋ ದ್ವಿಜಃ । ಏಕಾದಶೀ ವಿಹೀನಶ್ಚ ವಿಷಹೀನೋ ಯಥೋರಗಃ ॥

ವಿಷ್ಣುಮಂತ್ರವನ್ನು ಜಪಿಸದ, ತ್ರಿಸಂಧ್ಯೆಯನ್ನು ಆಚರಿಸದ, ಏಕಾದಶೀ ವ್ರತವನ್ನಾಚರಿಸದ ದ್ವಿಜನು ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

೧೪ ಶವದಾಹೀ ಚ ಶೂದ್ರಾಣಾಂ ಯೋ ವಿಪ್ರೋ ವೃಷಲೀಪತಿಃ । ಶೂದ್ರಾಣಾಂ ಸೂಪಕಾರಶ್ಚ ವಿಷಹೀನೋ ಯಥೋರಗಃ ॥

ಬ್ರಾಹ್ಮಣನಾಗಿ ಹುಟ್ಟಿ ಶೂದ್ರರ ಶವಸಂಸ್ಕಾರ ಮಾಡುವವನೂ, ಶೂದ್ರಸ್ತ್ರೀಯನ್ನು ಮದುವೆಯಾಗುವವನೂ, ಶೂದ್ರರ ಮನೆಯಲ್ಲಿ ಅಡುಗೆ ಮಾಡುವವನೂ, ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

೧೫ ಸೂರ್ಯೋದಯೇ ಚ ದ್ವಿರ್ಭೋಜೀ ಮತ್ಸ್ಯಭೋಜೀ ಚ ಯೋ ದ್ವಿಜಃ । ಶಿಲಾಪೂಜಾದಿ ರಹಿತೋ ವಿಷಹೀನೋ ಯತೋರಗಃ ॥

ಹಗಲು ೨ ಸಲ ಊಟಮಾಡುವವನೂ, ಮೀನನ್ನು ತಿನ್ನುವವನೂ, ಶಿವಲಿಂಗ–ಸಾಲಿಗ್ರಾಮಾದಿ ಶಿಲಾಪೂಜೆ ಮಾಡದಿರುವ ಬ್ರಾಹ್ಮಣನು ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

ಯಶಸ್ಸು–ಸುಖ ಲಭಿಸುವ ಬಗೆ (ಮನುಸ್ಮೃತಿ)

೧೬ ಶ್ರುತಿ ಸ್ಮೃತುದಿತಂ ಧರ್ಮಮನುತಿಷ್ಠನ್ ಹಿ ಮಾನವಃ । ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖ ॥

ಶ್ರುತಿ(ವೇದ) ಸ್ಮೃತಿ(ಶಾಸ್ತ್ರ)ಗಳಲ್ಲಿ ಹೇಳುವಂತೆ ವರ್ತಿಸಿದರೆ, ಇಹ–ಪರಗಳಲ್ಲಿ ಕೀರ್ತಿ–ಸುಖಗಳು ನಿಶ್ಚಯವಾಗಿ ಲಭಿಸುವವು ॥

ಊಟದಲ್ಲಿ ಪಂಕ್ತಿ ಬೇರೆ ಮಾಡುವ ರೀತಿ

೧೭ ಅಗ್ನಿನಾ ಭಸ್ಮನಾ ಚೈವ ಸ್ಥಂಭೇನ ಸಲಿಲೇನ ವಾ । ದ್ವಾರೇಣಚೈವ ಮಾರ್ಗೇಣ ಪಂಕ್ತಿ ಭೇದೋಬುಧೈಃ ಸ್ಮೃತಃ ॥

ಊಟದಲ್ಲಿ ಪಂಕ್ತಿ ವ್ಯತ್ಯಾಸವಾಗಬೇಕಾದರೆ, ನೀರಿನಿಂದ–ವಿಭೂತಿಯಿಂದ–ಕಂಭದಿಂದ–ದ್ವಾರದಿಂದ ಪಂಕ್ತಿಭೇದವನ್ನು ಹೇಳಿದೆ ॥

ಮಂಗಳಕರವಾದ ೮ ವಸ್ತುಗಳು

೧೮ ದರ್ಪಣಂ ಪೂರ್ಣಕಲಶಂ ಕನ್ಯಾ ಸುಮನಸೋಕ್ಷತಾಃ । ದೀಪಮಾಲಾ ಧ್ವಜಂ ಲಾಜಾಸ್ಸಂಪ್ರೋಕ್ತಂ ಚ ಅಷ್ಟಮಂಗಲಮ್ ॥

ಕನ್ನಡಿ, ಪೂರ್ಣಕಲಶ, ಕನ್ಯೆ, ಸುಮಂಗಲಿಯರು, ಅಕ್ಷತೆ ॥ ದೀಪಗಳು, ಧ್ವಜ, ಅರಳು ಇವು ಮಂಗಳಕರ ವಸ್ತುಗಳು ॥

ಜ್ಞಾನಿಗಳ ದೃಷ್ಟಿಯಲ್ಲಿ ಪ್ರಪಂಚ

೧೯ ಬುದ್ಧತತ್ವಸ್ಯ ಲೋಕೋಽಯಂ ಜಡೋನ್ಮತ್ತ ಪಿಶಾಚವತ್ ।
ಬುದ್ಧತತ್ವೋಽಪಿ ಲೋಕಸ್ಯ ಜಡೋನ್ಮತ್ತ ಪಿಶಾಚವತ್ ॥

ತತ್ವವನ್ನು ತಿಳಿದ ಜ್ಞಾನಿಗೆ, ಈ ಪ್ರಪಂಚವು ಜಡ–ಉನ್ಮತ್ತ–ಪಿಶಾಚದ ಹಾಗೆ ಕಾಣುತ್ತದೆ । ಪ್ರಪಂಚದಲ್ಲಿರುವ ಮನುಷ್ಯರಿಗೆ ಜ್ಞಾನಿಗಳನ್ನು ನೋಡಿದರೂ ಜಡ–ಉನ್ಮತ್ತ–ಪಿಶಾಚಿಗಳಂತೆಯೇ ತೋರುತ್ತಾರೆ ॥

ವೇದಗಳ ಹೆಚ್ಚುಗಾರಿಕೆ (ಜಾಬಾಲ ಸ್ಮೃತಿ)

೨೦ ಶ್ರುತಿ ಸ್ಮೃತಿ ವಿರೋಧೇತು ಶ್ರುತಿರೇವ ಗರೀಯಸಿ । ಅವಿರೋಧೇ ಸದಾ ಕಾರ್ಯಂ ಸ್ಮಾರ್ತಂ ವೈದಿಕ ವತ್ಸತಾ ॥

ವೇದ ಹಾಗೂ ಪುರಾಣಾದಿ ಇತರ ಗ್ರಂಥಗಳಲ್ಲಿ ಪರಸ್ಪರ ಸಾಕ್ಷಾತ್ ವಿರೋಧ ಕಂಡುಬಂದಾಗ, ವೇದವೇ ಮುಖ್ಯವಾಗುತ್ತದೆ । ವಿರೋಧವಿಲ್ಲದಾಗ ಸ್ಮಾರ್ತಕರ್ಮಗಳನ್ನೂ ವೈದಿಕ ಕರ್ಮಗಳಂತೆಯೇ ಮಾಡಬಹುದು ॥

ಸ್ಮೃತಿ(ಧರ್ಮಶಾಸ್ತ್ರ) ಕಾರರು (ಯಾಜ್ಞವಲ್ಕ್ಯ ಸ್ಮೃತಿ)

೨೧ ಮನ್ವತ್ರಿ ವಿಷ್ಣು ಹಾರೀತ ಯಾಜ್ಞವಲ್ಕ್ಯೋಶನಾಂಗಿರಾಃ ।
ಯಮಾಪಸ್ತಂಬ ಸಂವರ್ತಾಃ ಕಾತ್ಯಾಯನ ಬೃಹಸ್ಪತೀ । ಪರಾಶರ ವ್ಯಾಸ ಶಂಖಲಿಖಿತೌ ದಕ್ಷ ಗೌತಮೌ । ಶಾತಾತಪೋ ವಸಿಷ್ಠಶ್ಚ ಧರ್ಮಶಾಸ್ತ್ರ ಪ್ರಯೋಜಕಾಃ ॥

ಮನು – ಅತ್ರಿ – ವಿಷ್ಣು – ಹಾರೀತ – ಯಾಜ್ಞವಲ್ಕ್ಯ – ಉಶನಾ – ಆಂಗಿರಸ । ಯಮ – ಆಪಸ್ತಂಬ – ಸಂವರ್ತ – ಕಾತ್ಯಾಯನ –

ಬೃಹಸ್ಪತಿ । ಪರಾಶರ – ವ್ಯಾಸ – ಶಂಖ – ಲಿಖಿತ – ದಕ್ಷ – ಗೌತಮ । ಶಾತಾತಪ – ವಸಿಷ್ಠ ಇವರುಗಳು ಧರ್ಮಶಾಸ್ತ್ರಕಾರರು ॥

ಯಾವ ರೀತಿ ದಾನ ಮಾಡಬೇಕು (ಪರಾಶರ ಸ್ಮೃತಿ)

೨೨ ಅಧಮಂ ಯಾಚಮಾನಾಯ ಸೇವಾದಾನಂ ತು ನಿಷ್ಫಲಂ । ಜತೋಧರ್ಮೋಽಹ್ಯ ಧರ್ಮೇಣ ಸತ್ಯಂ ಚೈವಾನೃತೇನ ಚ ॥

ಕೊಡುವವರೇ ತೆಗೆದುಕೊಳ್ಳುವವರ ಬಳಿಹೋಗಿ ಕೊಡುವ ದಾನವು ಅತ್ಯಂತ ಶ್ರೇಷ್ಠ, ಕರೆದು ಕೊಟ್ಟರೆ ಮಧ್ಯಮ । ಬೇಡಿದಾಗ ಕೊಟ್ಟರೆ ಅಧಮವು, ಕೂಲಿಯಾಗಿ ಕೊಟ್ಟರೆ ಪುಣ್ಯವಿಲ್ಲ ॥

ಅತಿಥಿ ಯಾರು (ಪರಾಶರ ಸ್ಮೃತಿ)

೨೩ ದೂರಾಚ್ಚೋಪಗತಂ ಶ್ರಾಂತಂ ವೈಶ್ವದೇವ ಉಪಸ್ಥಿತಂ । ಅತಿಥಿಂ ತಂ ವಿಜಾನೀಯಾನ್ನಾತಿಥಿಃ ಪೂರ್ವಮಾಗತಃ ॥

ಬೇರೆಕಡೆಯಿಂದ ಬಂದು, ಬಳಲಿದವನಾಗಿ ಮಧ್ಯಾಹ್ನದ(ವೈಶ್ವದೇವದ ಹೊತ್ತಿಗೆ) ಸಮಯಕ್ಕೆ ಮನೆಗೆ ಬಂದರೆ । ಅಂತಹವನು ಮಾತ್ರ ಅತಿಥಿಯು, ಮೊದಲು ಬಂದು ಊಟಕ್ಕೆ ಕಾಯುತ್ತಿದ್ದರೆ ಅವನು ಅತಿಥಿಯಲ್ಲ ॥

ಸೂತಕದ ಆಚರಣೆ ಯಾವಾಗ ಇಲ್ಲ (ಪರಾಶರ ಸ್ಮೃತಿ)

೨೪ ಭೃಗ್ವಗ್ನಿಮರಣೇ ಚೈವ ದೇಶಾಂತರ ಮೃತೇ ತಥಾ । ಬಾಲೇ ಪ್ರೇತೇ ಚ ಸಂನ್ಯಸ್ತೇ ಸದ್ಯ: ಶೌಚಂ ವಿಧೀಯತೇ ॥

ಆತ್ಮಹತ್ಯೆ ಮಾಡಿಕೊಂಡವನ, ದೇಶಾಂತರದಲ್ಲಿ ಸತ್ತವನ, ಮಗುವಿನ, ಸಂನ್ಯಾಸಿಯ ಇವರುಗಳ ಸೂತಕಾಚರಣೆ ಬೇಡ ॥

೨೫ ದೇಶಾಂತರಮೃತಃ ಕಶ್ಚಿತ್ ಸಗೋತ್ರಃ ಶ್ರೂಯತೇ ಯದಿ । ನ ತ್ರಿರಾತ್ರಮಹೋರಾತ್ರಂ ಸದ್ಯಃ ಸ್ನಾತ್ವಾ ಶುಚಿರ್ಭವೇತ್ ॥

ದೂರ ಸ್ಥಳದಲ್ಲಿ ಸತ್ತ ಸುದ್ದಿ ಕೇಳಿದಾಗ ಬರೀ ಸ್ನಾನವೇ ಸಾಕು ॥

೨೬ ಬ್ರಹ್ಮಚಾರೀ ಗೃಹೇ ಯೇಷಾಂ ಹೂಯತೇ ಚ ಹುತಾಶನಃ । ಸಂಪರ್ಕಂ ಚೇನ್ನ ಕುರ್ವೀತ ನ ತೇಷಾಂ ಸೂತಕಂ ಭವೇತ್ ॥

ಅಗ್ನಿಕಾರ್ಯ ಮಾಡುತ್ತಾ ಮನೆಯಲ್ಲಿರುವ ಬ್ರಹ್ಮಚಾರಿಗೆ ಮಾತ್ರ ಸೂತಕವು ಇಲ್ಲ ॥

ಎಲ್ಲರಿಗಿಂತ ಮೊದಲೇ ಊಟ ಮಾಡಬಹುದಾದವರು (ಪರಾಶರ ಸ್ಮೃತಿ)

೨೭ ಸುವಾಸಿನೀಃ ಕುಮಾರೀಶ್ಚ ರೋಗಿಣೋ ಗರ್ಭಿಣೀಃ ಸ್ತ್ರಿಯಃ । ಅತಿಥಿಭ್ಯೋಗ್ರ ಏವೈನಾನ್ ಭೋಜಯೇದವಿಚಾರಯನ್ ॥

ಸುವಾಸಿನೀ, ಕುಮಾರೀ, ರೋಗಿಗಳು, ಗರ್ಭಿಣಿಯರು । ಇವರುಗಳು ಅತಿಥಿಗಳ ಅಥವಾ ಬ್ರಾಹ್ಮಣರ ಊಟಕ್ಕೂ ಮೊದಲೇ ಊಟ ಮಾಡಬಹುದು ॥

ಬ್ರಾಹ್ಮಣನು ಕೃಷಿಯನ್ನು ಮಾಡಬಹುದೇ ? (ಪರಾಶರ ಸ್ಮೃತಿ)

೨೮ ಅತ್ಯಾಪದಿ ಸ್ವಪಿತ್ರೋರ್ವೈ ಪಾಲನಾಯ ಸ್ವಯಂ ಯದಿ । ಯಃ ಕರೋತಿ ಕೃಷಿಂ ಸೋಪಿ ಹಲಾಗ್ರಂ ನ ಸ್ಪೃಶೇತ್ ದ್ವಿಜಃ ॥

ಬ್ರಾಹ್ಮಣನು, ಜೀವನಕ್ಕೇ ತೀರ ಕಷ್ಟವಾದಾಗ ಮಾತ್ರ ಕೃಷಿಯನ್ನು ಮಾಡಬಹುದು । ಆದರೆ ನೇಗಿಲನ್ನು ಹಿಡಿದು ಉಳಬಾರದು ॥

ಹೂ, ಗಂಧ, ತುಳಸಿಗಳನ್ನು ಎಲ್ಲಿ ಧರಿಸಬಾರದು ?

೨೯ ಕರ್ಣೇ ಪುಷ್ಪಂ ಗಳೇ ಗಂಧಂ ಶಿಖಾಯಾಂ ತುಳಸೀದಳಂ ।
ಮೋಹಾತ್ ಧಾರಯತೇ ವಿಪ್ರಃ ಸ ವೈ ಶೂದ್ರೋ ನ ಸಂಶಯಃ ॥

ಕಿವಿಯಲ್ಲಿ ಹೂವನ್ನು – ಕಂಠದಲ್ಲಿ ಗಂಧವನ್ನು – ಶಿಖೆ(ಜುಟ್ಟು)ಯಲ್ಲಿ ತುಳಸಿಯನ್ನು । ಯಾರು ಧರಿಸುತ್ತಾರೋ ಅವರು ನಿಸ್ಸಂಶಯವಾಗಿ ಶೂದ್ರಸಮಾನರಾಗುತ್ತಾರೆ(ಅಜ್ಞಾನಿಗಳಾಗುತ್ತಾರೆ) । (ಹೂವನ್ನು ತಲೆಯಲ್ಲಿ, ತುಳಸಿಯನ್ನು ಕಿವಿಯಲ್ಲಿ, ಗಂಧವನ್ನು ಹಣೆಯಲ್ಲಿ ಧರಿಸಬೇಕು) ॥

ಯಾವ ಯಾವ ವಸ್ತುಗಳನ್ನು ಭೂಮಿಯಲ್ಲಿ ಇಡಬಾರದು

೩೦ ದ್ವಿಜಪೃಷ್ಠಂ ಶಂಖಪೃಷ್ಠಂ ನಾರೀಸ್ತನಮಂಡಲಮ್ । ಪುಸ್ತಕಂ ಘಂಟಾ ಚ ರುದ್ರಾಕ್ಷಂ ನ ಸ್ಥಾತವ್ಯಂ ಕದಾ ಭುವಿ ॥

ಬ್ರಾಹ್ಮಣರು ಯಾವಾಗಲೂ ಆಸನವಿಲ್ಲದೇ ನೆಲದಲ್ಲಿ ಕೂರಬಾರದು – ಶಂಖವನ್ನು ನೆಲದಲ್ಲಿ(ಪೀಠವಿಲ್ಲದೇ) ಇಡಬಾರದು – ಹೆಂಗಸರು ನೇರವಾಗಿ ನೆಲಕ್ಕೆ ಸ್ತನಗಳನ್ನು ತಗುಲಿಸಬಾರದು । ಹಾಗೆಯೇ ಪುಸ್ತಕ – ಘಂಟೆ – ರುದ್ರಾಕ್ಷಿ ಇವುಗಳನ್ನೂ ಸಹ ಯಾವುದೇ ಸಂದರ್ಭಗಳಲ್ಲೂ ಕೂಡ ನೆಲದಲ್ಲಿ ಇಡಬಾರದು, ಇಟ್ಟರೆ ಇವೆಲ್ಲವೂ ಅವುಗಳ ಸ್ವಾಭಾವಿಕ ಶಕ್ತಿಯನ್ನು, ಸೌಂದರ್ಯವನ್ನು, ತೇಜಸ್ಸನ್ನು, ಮಹತ್ವವನ್ನು ಕಳೆದುಕೊಳ್ಳುತ್ತವೆ ॥

ಯಾವ ಯಾವ ಸಂದರ್ಭಗಳಲ್ಲಿ ಯಾವ ರೀತಿಯ ನಮಸ್ಕಾರ ಮಾಡಬೇಕು

೩೧ ದೇವಾನ್ ನದೀನ್ ಸಭಾಂ ವೃಕ್ಷಾನ್ ಅಗ್ನೀನಪಿ ತಥಾ ಯತೀನ್
ದಂಡವತ್ ಪ್ರಣಮೇತ್ ಭೂಮೌ ನಾಭಿವಾದನಮಾಚರೇತ್ ॥

ದೇವಾಲಯಗಳಲ್ಲಿ – ನದಿಗೆ – ಸಭೆಗೆ – ದೇವವೃಕ್ಷಗಳಿಗೆ – ಯಜ್ಞೇಶ್ವರನಿಗೆ (ಅಗ್ನಿ) – ಯತಿ(ಸಂನ್ಯಾಸಿ)ಗಳಿಗೆ। ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು, ಅಭಿವಾದನ ನಮಸ್ಕಾರ ಮಾಡಬಾರದು ॥

ಯಾವಾಗ ಗೊತ್ತಿದ್ದರೂ ಉತ್ತರಿಸಬಾರದು (ಮನುಸ್ಮೃತಿ)

೩೨ ನಾಪೃಷ್ಟಃ ಕಸ್ಯತಚಿದ್ಬ್ರೂಯಾತ್ ನ ಚಾನ್ಯಾಯೇನ ಪೃಚ್ಛತಃ ।
ಜಾನನ್ನಪಿ ಹಿ ಮೇಧಾವೀ ಜಡವಲ್ಲೋಕ ಆಚರೇತ್ ॥

ತನ್ನನ್ನು ಕೇಳದಿರುವಾಗ ನಾವಾಗಿಯೇ ಸಲಹೆ ಕೊಡಬಾರದು, ಅಹಂಕಾರದಿಂದ ಕೇಳುವವನಿಗೆ ಉತ್ತರಿಸಬಾರದು । ವಿಧ್ವಾಂಸನು (ಮೇಧಾವಿಯು/ಜ್ಞಾನಿಯು) ಅನೇಕ ವಿಷಯಗಳನ್ನು ಬಲ್ಲವನಾಗಿದ್ದರೂ ಪ್ರಪಂಚದಲ್ಲಿ ದಡ್ಡರಂತೆ ಮೌನವಾಗಿರಬೇಕು ॥

ಜನ್ಮಜನ್ಮಾಂತರಕ್ಕೂ ಬೇಡವಾದದ್ದು (ಶಂಕರಾಚಾರ್ಯ ಕೃತ ಅಪರಾಧ ಕ್ಷಮಾಪಣ ಸ್ತೋತ್ರ)

೩೩ ಪೌರೋಹಿತ್ಯಂ ರಜನಿಚರಿತಂ ಗ್ರಾಮಣಿತ್ವಂ ನಿಯೋಗೋ ।
ಮಾಠಾಪತ್ಯಂಹ್ಯನೃತವಚನಂ ಸಾಕ್ಷಿವಾದಃ ಪರಾನ್ನಮ್ ।
ಬ್ರಹ್ಮದ್ವೇಷಃ ಖಲಜನರತಿಃ ಪ್ರಾಣಿನಾಂ ನಿರ್ದಯತ್ವಂ । ಮಾ ಭೂದ್ದೇವಂ ಮಮ ಪಶುಪತೇ ಜನ್ಮಜನ್ಮಾಂತರೇsಪಿ ॥

ಹೇ ಪರಮೇಶ್ವರ – ಪೌರೋಹಿತ್ಯ, ರಾತ್ರಿ ಸಂಚಾರ, ಗ್ರಾಮಾಧಿಕಾರ, ದಾಸ್ಯ । ಮಠಾಧಿಪತಿಯ ಕೆಲಸ, ಸುಳ್ಳು ಹೇಳುವುದು, ಸಾಕ್ಷಿಯಾಗಿ ನುಡಿಯುವುದು, ಪರಾನ್ನ, ಬ್ರಾಹ್ಮಣದ್ವೇಷ, ದುಷ್ಟರ ಸ್ನೇಹ, ಪ್ರಾಣಿಗಳಲ್ಲಿ ನಿರ್ದಯೆ, ಇವುಗಳನ್ನು ನನಗೆ ಜನ್ಮಜನ್ಮಾಂತರಕ್ಕೂ ದೊರಕಿಸಬೇಡ (ಅಂತರಾರ್ಥ ಹೀಗಿದೆ – ಇವೆಲ್ಲವೂ ಕಾಲಾನಂತರದಲ್ಲಿ ದುರುಪಯೋಗವಾಗುತ್ತವೆ ಎಂಬುದು) ॥

ಪ್ರಾಣ ಹೋಗುವ ಕಡೇ ಕ್ಷಣದ ಅನುಭವ (ಗರುಡಪುರಾಣ)

೩೪ ತಸ್ಮಿನ್ನಂತಕ್ಷಣೇ ತಾರ್ಕ್ಷ್ಯ ದೈವೀದೃಷ್ಟಿಃ ಪ್ರಜಾಯತೇ । ಏಕೀಭೂತಂ ಜಗತ್ಸರ್ವಂ ನ ಕಿಂಚಿದ್ವಕ್ತುಮೀಯತೇ ॥

ಎಲೈ ಗರುಡನೇ, ಅಂತ್ಯ ಸಮಯದಲ್ಲಿ ಮನುಷ್ಯನಿಗೆ ದಿವ್ಯದೃಷ್ಟಿಯು ಉತ್ಪನ್ನವಾಗುತ್ತದೆ । ಇಹ–ಪರಲೋಕ, ಪ್ರಪಂಚ ಒಂದೇ ಎಂಬುವಹಾಗೆ ಅನಿಸುತ್ತದೆ । ಇವೆಲ್ಲವನ್ನೂ ಹೇಳಬೇಕೆನಿಸಿದರೂ ಸಹ ಮಾತನಾಡಲು ಆಗುವುದಿಲ್ಲ ॥

ಸತ್ತಮೇಲೆ, ಪಿಂಡ–ತರ್ಪಣಗಳನ್ನು ಕೊಡದಿದ್ದರೆ ಏನಾಗುತ್ತದೆ ?(ಗರುಡಪುರಾಣ)

೩೫ ಭವಂತಿ ಪ್ರೇತರೂಪಾಸ್ತೇ ಪಿಂಡದಾನ ವಿವರ್ಜಿತಾಃ । ಆಕಲ್ಪಂ ನಿರ್ಜನಾರಣ್ಯೇ ಭ್ರಮಂತಿ ಬಹುದುಃಖಿತಾಃ ॥

ಮರಣದ ನಂತರ, ಪುತ್ರಾದಿಗಳು ಪಿಂಡದಾನ ಕೊಡದಿದ್ದರೆ, ಪ್ರೇತರೂಪದಿಂದ ಸಾವಿರಾರು ವರ್ಷಗಳು ನಿರ್ಜನ ಕಾಡಿನಲ್ಲಿ ಬಹಳ ದುಃಖಿತನಾಗಿ ಮೃತ ವ್ಯಕ್ತಿಯು ಸುತ್ತುತ್ತಾನೆ ॥

೩೬ ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ । ಅಭುಕ್ತ್ವಾ ಯಾತನಾಂ ಜಂತುರ್ಮಾನುಷ್ಯಂ ಲಭತೇ ನ ಹೀ ॥

ಸಾವಿರಾರು ವರ್ಷಗಳು ಕಷ್ಟಗಳನ್ನು ಅನುಭವಿಸಿದರೂ ಸಹ, ಕಷ್ಟಗಳು ನಾಶವಾಗುವುದಿಲ್ಲ(ಪಿಂಡಾದಿಗಳನ್ನು ಕೊಡದಿದ್ದರೆ) । ಪಾಪಿಯು

ನರಕಯಾತನೆಗಳನ್ನು ಅನುಭವಿಸಿದರೂ ಮನುಷ್ಯ ಜನ್ಮವು ಎಂದೂ ಪ್ರಾಪ್ತವಾಗುವುದಿಲ್ಲ ॥

೩೭ ಅತೋ ದದ್ಯಾತ್ ಸುತಃ ಪಿಂಡಾನ್ ದಿನೇಷು ದಶಸು ದ್ವಿಜ । ಪ್ರತ್ಯಹಂ ತೇ ವಿಭಜ್ಯಂತೇ ಚತುರ್ಭಾಗೈಃ ಖಗೋತ್ತಮ ॥

ಈ ಕಾರಣದಿಂದಲೇ ಎಲೈ ಗರುಡನೇ, ವ್ಯಕ್ತಿಯ ಮರಣದ ನಂತರ ಮಕ್ಕಳು ೧೦ ದಿವಸ ಪಿಂಡದಾನ ಮಾಡಿದರೆ, ಅವು ಪ್ರತಿದಿನ ೪ ಭಾಗಗಳಾಗಿ ವಿಭಾಗಿಸಲ್ಪಡುತ್ತವೆ ॥

೩೮ ಅಹೋರಾತ್ರೈಶ್ಚ ನವಭಿಃ ಪ್ರೇತಃ ಪಿಂಡಮವಾಪ್ನುಯಾತ್ । ಜಂತುರ್ನಿಷ್ಪನ್ನ ದೇಹಶ್ಚ ದಶಮೇ ಬಲಮವಾಪ್ನುಯಾತ್ ॥

ಒಂಭತ್ತು ದಿನಗಳು ಪಿಂಡದಾನ ಕೊಡುವುದರಿಂದ ಪ್ರೇತಕ್ಕೆ 'ಪಿಂಡಜ' ಶರೀರವು ಸಿಗುತ್ತದೆ । ನಂತರ ೧೦ನೇ ದಿನದ ಪಿಂಡದಾನದಿಂದ ಆ 'ಪಿಂಡಜ' ಶರೀರಕ್ಕೆ ಚಲಿಸುವ ಶಕ್ತಿಯು ದೊರೆಯುತ್ತದೆ ॥

ವಿವಿಧ ರೀತಿಯ ಜನ್ಮಗಳಿಗೆ ಕಾರಣಗಳು

(ಬ್ರಹ್ಮವೈವರ್ತಪುರಾಣ)

೩೯ ಕರ್ಮಣಾ ಜಾಯತೇ ಜಂತುಃ ಕರ್ಮಣೈವ ಪ್ರಲೀಯತೇ । ಸುಖಂ ದುಃಖಂ ಭಯಂ ಶೋಕಂ ಕರ್ಮಣೈವ ಪ್ರಪದ್ಯತೇ ॥

ಪ್ರತಿಯೊಂದು ಪ್ರಾಣಿಯೂ ಜನ್ಮಾಂತರ ಕರ್ಮಗಳಿಗನುಗುಣವಾಗಿಯೇ ಜನ್ಮವೆತ್ತಿ ಸಾಯುವುದು । ಸುಖ, ದುಃಖ, ಭಯ, ಶೋಕಗಳೂ ಜೀವಿಯ ಹಿಂದಿನ ಕರ್ಮಕ್ಕನುಗುಣವಾಗಿಯೇ ಬರುವುವು ॥

೪೦ ಕರ್ಮಣಾ ಕೋಟಿ ಕಲ್ಪಾಯುಃ ಕ್ಷೀಣಾಯುಶ್ಚ ಸ್ವಕರ್ಮಣಾ । ಜೀವ ಸಂಚಾರಮಾತ್ರಾಯುರ್ಗರ್ಭೇ ಮೃತ್ಯುಃ ಸ್ವಕರ್ಮಣಾ ॥

ಕೋಟಿಕಲ್ಪಕಾಲ ಜೀವಿಸುವುದಾಗಲೀ, ಕ್ಷೀಣಾಯುವಾಗಲೀ, ಹುಟ್ಟಿದ ಕ್ಷಣದಲ್ಲೇ ಸಾಯುವುವಾಗಲೀ, ಗರ್ಭದಲ್ಲೇ ಸಾಯುವುದಾಗಲೀ ಪ್ರತಿಯೊಂದೂ ಸಹ ಸ್ವಕರ್ಮದ(ನಾವು ಮಾಡಿದ ಕೆಲಸದ) ಫಲವೇ ಆಗಿರುತ್ತದೆ ॥

ಅರಳೀ ಮರವನ್ನು ನೆಡಿಸುವುದು ಏಕೆ?

(ಬ್ರಹ್ಮವೈವರ್ತಪುರಾಣ)

೪೧ ಅಶ್ವತ್ಥವೃಕ್ಷಮಾರೋಪ್ಯ ಪ್ರತಿಷ್ಠಾಂ ಚ ಕರೋತಿ ಯಃ । ಸ ಯಾತಿ ತಪಸೋ ಲೋಕಂ ವರ್ಷಾಣಾಮಯುತಂ ಪರಮ್ ॥

ಅರಳಿಮರವನ್ನು ನೆಡಿಸಿ, ಅಲ್ಲಿ ನಾರಾಯಣನನ್ನು ಪ್ರತಿಷ್ಠೆ ಮಾಡಿಸುವ ಮನುಷ್ಯನು ತಪೋಲೋಕಕ್ಕೆ ಹೋಗಿ ಅಲ್ಲಿ ಹತ್ತುಸಾವಿರವರ್ಷಗಳು ಸುಖವಾಗಿ ವಾಸಿಸುತ್ತಾರೆ ॥

ಪುಣ್ಯದಿವಸಗಳಲ್ಲಿ ದಾನವನ್ನು ಏಕೆ ಮಾಡಬೇಕು?

(ಬ್ರಹ್ಮವೈವರ್ತಪುರಾಣ)

೪೨ ಗೃಪರೇಣು ಪ್ರಮಾಣಾಬ್ದಂ ದಾನಂ ಪುಣ್ಯದಿನೇ ಯದಿ । ವಿಪುಲಂ ವಾಸಂ ಕುರ್ವಂತಿ ಮಾನವಾಃ ಸತಿ ॥

ಮಾನವರು ಪುಣ್ಯದಿನಗಳಲ್ಲಿ ಹೆಚ್ಚಾಗಿ ದಾನಮಾಡಿದರೆ, ತನ್ನ ಮನೆಯ ಧೂಳಿನಕಣಗಳಿರುವಷ್ಟು ಸಂಖ್ಯೆಯ ವರ್ಷಗಳು ವಿಪುಲವಾದ ಸ್ವರ್ಗದಲ್ಲಿ ವಾಸಿಸುವರು ॥

ಕರ್ಮಫಲವನ್ನು ಅನುಭವಿಸುವಿಕೆಯ ರೀತಿ

(ಬ್ರಹ್ಮವೈವರ್ತಪುರಾಣ)

೪೩ ಸ್ವಧರ್ಮ ರಹಿತಾ ವಿಪ್ರಾ ನಾನಾಯೋನಿಂ ವ್ರಜಂತಿ ಚ । ಭುಕ್ತ್ವಾ ಚ ಕರ್ಮಭೋಗಂ ಚ ವಿಪ್ರಯೋನಿಂ ಲಭೇತ್ಪುನಃ ॥

ಸ್ವಧರ್ಮಾಚರಣೆಯನ್ನು ಬಿಟ್ಟ ಬ್ರಾಹ್ಮಣರು ಮುಂದೆ ಕೀಟಾದಿ ಜನ್ಮಗಳನ್ನು ಪಡೆದು । ತಮ್ಮ ಕರ್ಮಫಲವನ್ನು ಅನುಭವಿಸಿ, ಪುನಃ ಬ್ರಾಹ್ಮಣ ಜನ್ಮವನ್ನು ಪಡೆಯುವರು ॥

೪೪ ಮಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ । ಅವಶ್ಯಮೇವ ಭೋಕ್ತವ್ಯಂ ಕಲ್ಪಕೋಟಿ ಶತೈರಪಿ ॥

ತಾನು ಮಾಡಿದ ಕರ್ಮದ ಫಲವು, ಅನುಭವಿಸದ ಹೊರತು ಕೋಟಿವರ್ಷಗಳೇ ಆದರೂ ಸಹ ಅದು ಕಳೆಯುವುದಿಲ್ಲ । ಹಾಗಾಗಿ ಎಷ್ಟೇ ಜನ್ಮಗಳಾಗಲಿ ತನ್ನ ಕರ್ಮದ ಫಲವನ್ನು ತಾನೇ ಅನುಭವಿಸಿಯೇ ತೀರಿಸಬೇಕು ॥

೪೫ ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ । ದೇವತೀರ್ಥೇ ಸಹಾಯೇನ ಕಾಯವ್ಯೂಹೇನ ಶುದ್ಧ್ಯತಿ ॥

ತಾನು ಮಾಡಿದ ಶುಭ ಅಥವಾ ಅಶುಭ ಕರ್ಮಗಳ ಫಲವನ್ನು ತಾನೇ ಅವಶ್ಯವಾಗಿ ಅನುಭವಿಸಬೇಕು । ಆದರೆ ನಿರಂತರ ದೇವತಾತೀರ್ಥಗಳ ಅನುಗ್ರಹದಿಂದಲೂ ಮತ್ತು ದೇಹದಂಡನೆಯಿಂದಲೂ ಶುದ್ಧಿಹೊಂದಬಹುದು ॥

ಅನ್ನದಾನದ ವಿಚಾರ(ಯಮ–ಬ್ರಹ್ಮವೈವರ್ತಪುರಾಣ)

೪೬ ಅನ್ನದಾನಂ ಚ ವಿಪ್ರಾಯ ಯಃ ಕರೋತಿ ಚ ಭಾರತೇ । ಅನ್ನಪ್ರಮಾಣವರ್ಷಂ ಚ ಶಕ್ರಲೋಕೇ ಮಹೀಯತೇ ॥

ಭಾರತದೇಶದಲ್ಲಿ ಬ್ರಾಹ್ಮಣರಿಗೆ ಅನ್ನದಾನ ಮಾಡಿದವನು, ಆ ಅನ್ನದ ಅಗುಳಿರುವಷ್ಟು ಕಾಲ ಇಂದ್ರಲೋಕದಲ್ಲಿ ಸುಖವಾಗಿರುವನು ॥

೪೭ ಅನ್ನದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ । ನಾತ್ರ ಪಾತ್ರಪರೀಕ್ಷಾ ಸ್ಯಾನ್ನ ಕಾಲನಿಯಮಃ ಕ್ವಚಿತ್ ॥

ಅನ್ನದಾನಕ್ಕಿಂತ ಉತ್ತಮವಾದ ದಾನವು ಹಿಂದೆಯೂ ಇರಲಿಲ್ಲ, ಮುಂದೆಯೂ ಇರುವುದಿಲ್ಲ । ಅನ್ನದಾನ ಮಾಡಲು ಪಾತ್ರ (ವ್ಯಕ್ತಿ/ಅಂತಸ್ತು) ಪರೀಕ್ಷೆಯಾಗಲೀ – ಕಾಲದ ನಿಯಮವಾಗಲೀ ಇರುವುದಿಲ್ಲ ॥

ಮಾಘಮಾಸದಲ್ಲಿ ತೀರ್ಥಸ್ನಾನ ಮತ್ತು ಎಳ್ಳಿನ ವಿಶೇಷತೆ (ಭವಿಷ್ಯಪುರಾಣ)

೪೮ ಮಾಘಮಾಸೇ ರಂಟಂತ್ಯಾಪಃ ಕಿಂಚಿದಭ್ಯುದಿತೇ ರವೌ । ಬ್ರಹ್ಮಘ್ನಂ ವಾ ಸುರಾಪಂ ವಾ ಕಂಕಂತಂತು ಪುನೀಮಹೇ । ತಿಲಸ್ನಾಯೀ ತಿಲೋದ್ವರ್ತೀ ತಿಲಭೋಕ್ತಾ ತಿಲೋದಕೀ । ತಿಲಹೋತಾ ಚ ದಾತಾ ಚ ಷಟ್ ತಿಲೇನೈನಾವತರತಿ ॥

ಮಾಘಮಾಸದಲ್ಲಿ ತೀರ್ಥಸ್ನಾನ ಮಾಡಿದವನು ಬ್ರಹ್ಮಹತ್ಯೆಯನ್ನೇ ಮಾಡಿರಲಿ, ಕುಡುಕನೇ ಇರಲಿ, ಪಾತಕಿಯೇ ಇರಲಿ ಅವರೆಲ್ಲರನ್ನೂ ಪವಿತ್ರಗೊಳಿಸುತ್ತೇವೆ ಎಂದು ತೀರ್ಥಗಳು ಕರೆಯುತ್ತಿರುತ್ತವೆ । ಮಾಘಮಾಸದಲ್ಲಿ ಎಳ್ಳಿನ ದಾನ – ಎಳ್ಳಿನಸ್ನಾನ – ಎಳ್ಳಿನಊಟ – ಎಳ್ಳಿನ ಲೇಪನ – ಎಳ್ಳುಮಿಶ್ರಿತ ಜಲಪಾನ – ಎಳ್ಳಿನಹೋಮ ಹೀಗೆ ೬ ರೀತಿಯಿಂದ ಎಳ್ಳನ್ನು ಬಳಸುವವನು ಎಲ್ಲ ರೀತಿಯ ಪಾಪಗಳಿಂದಲೂ ಮುಕ್ತನಾಗುತ್ತಾನೆ ॥

ಮರ ಬೆಳೆಸುವುದರ ವಿಶೇಷತೆ (ಭವಿಷ್ಯಪುರಾಣ)

೪೯ ಅಶ್ವತ್ಥಮೇಕಂ ಪಿಚಮಂದಮೇಕಂ ನ್ಯಗ್ರೋಧಮೇಕಂ ದಶ ತಿಂತ್ರಿಣೀಕಾನ್ । ಕಪಿತ್ಥ ಬಿಲ್ವಾಮಲಕೀತ್ರಯಂ ಚ ಪಂಚಾಮ್ರರೋಪೀ ನರಕಂ ನ ಪಶ್ಯೇತ್ ॥

ಒಂದು ಅರಳೀಮರ – ಒಂದು ಬೇವಿನಮರ – ಒಂದು ಆಲದಮರ – ಹತ್ತು ಹುಣಿಸೇಮರ । ಬೇಲ – ಬಿಲ್ವ – ನೆಲ್ಲಿ ಗಿಡಗಳನ್ನು ೩-೩ ಅಥವಾ ಒಂದೊಂದಾದರೂ ನೆಟ್ಟು ಬೆಳಸಿದ ಮನುಷ್ಯನು ಎಂದೂ ನರಕವನ್ನು ನೋಡುವುದಿಲ್ಲ ॥

ಭಾನುವಾರದಂದು ಮಾಡಬಾರದ ಕೆಲಸಗಳು (ಸೌರಪುರಾಣ–ಸೂರ್ಯಾಷ್ಟಕ)

೫೦ ಆಮಿಷಂ ಮಧುಪಾನಂ ಚ ಯಃ ಕರೋತಿ ರವೇರ್ದಿನೇ । ಸಪ್ತ ಜನ್ಮ ಭವೇದ್ರೋಗೀ ಪ್ರತಿಜನ್ಮ ದರಿದ್ರತಾ ॥

ಯಾರು ಭಾನುವಾರದಂದು ಮತ್ತುಬರಿಸುವ (ಹೆಂಡ, ಗಾಂಜಾ, ಬೀಡಿ) ಆಹಾರಗಳ ಸೇವನೆಯನ್ನು ಮಾಡುತ್ತಾರೋ । ಅವರು ಮುಂದಿನ ೭ ಜನ್ಮಗಳಲ್ಲಿ ರೋಗಿಷ್ಠನಾಗಿದ್ದು, ದರಿದ್ರನೂ ಆಗುತ್ತಾನೆ ॥

೫೧ ಸ್ತ್ರೀ ತೈಲ ಮಧು ಮಾಂಸಾನಿ ಯಃ ತ್ಯಜೇತ್ತು ರವೇರ್ದಿನೇ । ನ ವ್ಯಾಧಿಃ ಶೋಕ ದಾರಿದ್ರ್ಯಂ ಸೂರ್ಯಲೋಕಂ ಚ ಗಚ್ಛತಿ ॥

ಸ್ತ್ರೀಸುಖ – ತೈಲದ (ಎಣ್ಣೆ) ಉಪಯೋಗ – ಮತ್ತುಬರಿಸುವ ಪದಾರ್ಥಗಳು – ಮಾಂಸ ಇವುಗಳನ್ನು ಯಾರು ಭಾನುವಾರದಂದು ಬಳಸುವುದಿಲ್ಲವೋ । ಅವರಿಗೆ ಖಾಯಿಲೆಗಳಾಗಲೀ, ದುಃಖವಾಗಲೀ, ದರಿದ್ರತೆಯಾಗಲೀ ಉಂಟಾಗುವುದಿಲ್ಲ ಹಾಗೂ ಅವರು ಸತ್ತಮೇಲೆ ಸೂರ್ಯಲೋಕವನ್ನು ಸೇರುತ್ತಾರೆ ॥

ಶಿಕ್ಷೆಯ ವಿಚಾರ (ಮನುಸ್ಮೃತಿ)

೫೨ ಪಿತಾऽಚಾರ್ಯಃ ಸುಹೃನ್ಮಾತಾ ಭಾರ್ಯ ಪುತ್ರಃ ಪುರೋಹಿತಃ । ನಾದಂಡ್ಯೋ ನಾಮ ರಾಜ್ಞೋऽಸ್ತಿ ಯಃ ಸ್ವಧರ್ಮೇ ನ ತಿಷ್ಠತಿ ॥

ತಂದೆ, ಆಚಾರ್ಯ, ಮಿತ್ರ, ತಾಯಿ, ಹೆಂಡತಿ, ಮಗ, ಪುರೋಹಿತ। ಧರ್ಮವನ್ನು ಮೀರಿದರೆ ಇವರುಗಳನ್ನೂ ಸಹ ಅವಶ್ಯವಾಗಿ ದಂಡಿಸಬೇಕು ॥

ದಾನದ ರೀತಿ (ಅತ್ರಿಸಂಹಿತಾ)

೫೩ ಅಹನ್ಯಹನಿ ದಾತವ್ಯಂ ಅದೀನೇನಾಂತರಾತ್ಮನಾ । ಸ್ತೋಕಾದಪಿ ಪ್ರಯತ್ನೇನ ದಾನಮಿತ್ಯಭಿಧೀಯತೇ ॥

ಪ್ರತಿದಿನವೂ ಮನಸ್ಸಿನಲ್ಲಿ ವ್ಯಥೆಪಡದೇ, ತನಗಿರುವ ಅಲ್ಪದಲ್ಲೇ ಪ್ರಯತ್ನದಿಂದ ಇತರರಿಗೆ ಕೊಡಬೇಕು । ಇದಕ್ಕೆ ದಾನ ಎಂದು ಹೆಸರು ॥

ಪಾಪವನ್ನು ಕಳೆದುಕೊಳ್ಳುವ ರೀತಿ (ಮನುಸ್ಮೃತಿ)

೫೪ ಖ್ಯಾಪನೇನಾನುತಾಪೇನ ತಪಸಾऽಧ್ಯಯನೇನಚ । ಪಾಪಕೃನ್ಮುಚ್ಯತೇ ಪಾಪಾತ್ತಥಾ ದಾನೇನ ಚಾಪದಿ ॥

ಪಾಪಮಾಡಿದವನು, ತನ್ನ ಪಾಪವನ್ನು ಹೇಳಿಕೊಳ್ಳುವುದರಿಂದಲೂ – ಪಶ್ಚಾತ್ತಾಪದಿಂದಲೂ – ತಪಸ್ಸಿನಿಂದಲೂ – ಅಧ್ಯಯನದಿಂದಲೂ – ದಾನದಿಂದಲೂ ಮಾಡಿದ ಪಾಪದಿಂದ ಶುದ್ಧನಾಗಬಹುದು ॥

ಯಾವ ಯಾವ ಸಮಯಗಳಲ್ಲಿ ಧರ್ಮವನ್ನು ಎರಡನೆಯ ಆದ್ಯತೆಯಾಗಿ ಪರಿಗಣಿಸಬಹುದು (ಪರಾಶರಸ್ಮೃತಿ)

೫೫ ದೇಶಭಂಗೇ ಪ್ರವಾಸೇ ವಾ ವ್ಯಾಧಿಷು ವ್ಯಸನೇಷ್ವಪಿ । ರಕ್ಷೇದೇವ ಸ್ವದೇಹಾದಿ ಪಶ್ಚಾದ್ಧರ್ಮಂ ಸಮಾಚರೇತ್ ॥

ದೇಶದಲ್ಲಿ ಯುದ್ಧ ಮೊದಲಾದ ಆಪತ್ತುಗಳಿದ್ದಾಗ – ಪ್ರಯಾಣದ ಸಮಯದಲ್ಲಿ – ರೋಗಿಯಾಗಿದ್ದಾಗ – ಸಂಕಷ್ಟಗಳು ಬಂದಾಗ। ಮೊದಲು

ತನ್ನ ಶರೀರವನ್ನು ಕಾಪಾಡಿಕೊಳ್ಳಬೇಕು, ಆಮೇಲೆ ಧರ್ಮಾಚರಣೆಯ ಕಡೆಗೆ ಗಮನಕೊಡಬಹುದು ॥

ಯಾರು ನಿಜವಾದ ಸತ್ಪಾತ್ರರು (ಯೋಗ್ಯರು)? (ಯಾಜ್ಞವಲ್ಕ್ಯ ಸ್ಮೃತಿ)

೫೬ ನ ವಿದ್ಯಯಾ ಕೇವಲಯಾ ತಪಸಾ ವಾಽಪಿ ಪಾತ್ರತಾ । ಯತ್ರ ವೃತ್ತಮಿಮೇ ಚೋಭೇ ತದ್ಧಿ ಪಾತ್ರಂ ಪ್ರಕೀರ್ತಿತಮ್ ॥

ಬರೀ ವಿದ್ಯೆಯಿಂದಾಗಲೀ – ತಪಸ್ಸಿನಿಂದಾಗಲೀ – ಯಾರೂ ಸತ್ಪಾತ್ರನೆನಿಸುವುದಿಲ್ಲ । ಯಾರಲ್ಲಿ ನಡತೆ, ವಿದ್ಯೆ, ತಪಸ್ಸು ಇರುತ್ತವೋ ಅವನೇ 'ಸತ್ಪಾತ್ರ' ॥

ಯಾವುವನ್ನು ಮಾಡಬಾರದು? (ಯಾಜ್ಞವಲ್ಕ್ಯ ಸ್ಮೃತಿ)

೫೭ ನ ಸಂಶಯಂ ಪ್ರಪದ್ಯೇತ ನಾಕಸ್ಮಾದಪ್ರಿಯಂ ವದೇತ್ । ನಾಹಿತಂ ನಾನೃತಂ ಚೈವ ನ ಸ್ತೇನಃ ಸ್ಯಾನ್ನ ವಾರ್ಧುಷೀ ॥

ಪ್ರಾಣಕ್ಕೇ ಕಂಟಕಬರುವಂತಹ ಕೆಲಸಗಳನ್ನು – ಕಾರಣವಿಲ್ಲದೇ ಉದ್ವೇಗವನ್ನುಂಟುಮಾಡುವ ಕೆಲಸಗಳನ್ನು – ಹಿತವಲ್ಲದ, ಸುಳ್ಳಾದ ಮಾತಾಡುವ ಕೆಲಸಗಳನ್ನು – ಕಳ್ಳತನವನ್ನು – ಬಡ್ಡಿವ್ಯವಹಾರದಿಂದ ಜೀವನವನ್ನು – ಇವುಗಳನ್ನು ಯಾವುದೇ ಕಾರಣಕ್ಕೂ ಮಾಡಬಾರದು ॥

ಉಪಾಕರ್ಮವನ್ನು ಯಾವಾಗ ಮಾಡಬೇಕು? (ಧರ್ಮಸಿಂಧುಸಾರ /ಕಪರ್ದಿಕಾರಿಕಾ)

೫೮ ತೈತ್ತಿರೀಯಾಣಾಂ ಷಣ್ಮುಹೂರ್ತ ನ್ಯೂನತ್ವೇಪಿ ಉತ್ತರೈವ ಗ್ರಾಹ್ಯಾ ॥

ಯಜುರ್ವೇದ ತೈತ್ತಿರೀಯ ಶಾಖೆಯವರಿಗೆ ಉದಯದಿಂದ ೬ ಮುಹೂರ್ತಗಳು ಹುಣ್ಣಿಮೆಯು ಇಲ್ಲದಿದ್ದರೂ ಸಹ, ಎರಡನೇ ದಿನವೇ ಗ್ರಾಹ್ಯ(ಅಂದರೆ – ಉದಯಕ್ಕಿರುವ ಹುಣ್ಣಿಮೆಯಂದು ದಿನವೇ ಉಪಾಕರ್ಮವನ್ನು ತೈತ್ತಿರೀಯಶಾಖೆಯವರು ಮಾಡಬೇಕು, ಅವರಿಗೆ ಮುಹೂರ್ತ–ಗಳಿಗೆಗಳ ನಿಯಮವು ಈ ವಿಷಯದಲ್ಲಿ ಇಲ್ಲ) ॥

೫೯ ಶ್ರವಣಂ (ಶ್ರಾವಣಂ) ಪೌರ್ಣಮಾಸೀ ಚ ಸಂಗವಸ್ಸ್ಪಶಮಾಚರೇತ್ । ತಥೈವೋದಯಿಕಂ ಗ್ರಾಹ್ಯಂ ನಾನ್ಯಥೋದಯಿಕಂ ಭವೇತ್ । ಪ್ರಾತಸ್ಸಂಗವನಂ ಪರ್ವಶ್ರಾವಣೇ ಪೂರ್ವಮುತ್ತಮಃ ॥

ಶ್ರಾವಣಮಾಸದ ಹುಣ್ಣಿಮೆಯು, ಸಂಗವಕಾಲದಲ್ಲಿ ಇದ್ದರೆ । ಹಾಗೆಯೇ, ಉದಯದಲ್ಲಿದ್ದರೆ ಗ್ರಾಹ್ಯವು ಎಂದರ್ಥ, ಉದಯಕ್ಕೆ ಬೇರೇ ತಿಥಿಯು ಬಂದರೆ ಉಪಾಕರ್ಮವನ್ನು ಅಂದು ಮಾಡಬಾರದು । ಒಂದುವೇಳೆ, ಮೊದಲದಿನ ಸಂಗವಕಾಲದಲ್ಲಿ ಹುಣ್ಣಿಮೆಯು ಇದ್ದು, ಮರುದಿನ ಉದಯಕ್ಕೆ ಹುಣ್ಣಿಮೆಯು ಇದ್ದರೆ ಆಗ ಹುಣ್ಣಿಮೆಯು ಉದಯಕ್ಕಿರುವ ದಿನವನ್ನೇ ಆದ್ಯತೆಯಾಗಿ ಗ್ರಹಿಸಬೇಕು ॥

೬೦ ಶ್ರವಣೇ (ಶ್ರಾವಣೇ) ನ ತು ಯತ್ಕರ್ಮ ಉತ್ತರಾಷಾಢ ಸಂಯುತೇ । ಸಂವತ್ಸರ ಕೃತೋಧ್ಯಾಯಃ ತತ್ ಕ್ಷಣಾದೇವ ನಶ್ಯತಿ ॥

ಶ್ರಾವಣ ಹುಣ್ಣಿಮೆಯಲ್ಲಿ ಮಾಡುವ ಉಪಾಕರ್ಮದ ದಿನದಲ್ಲಿ ಉತ್ತರಾಷಾಢ ನಕ್ಷತ್ರವಿದ್ದು, ಅಂದು ಉಪಾಕರ್ಮವನ್ನು ಮಾಡಿದರೆ ಆ ವರ್ಷ ಮಾಡಿದ ಪೂರ್ಣ ಅಧ್ಯಯನವನ್ನು ಅದು

ನಾಶಪಡಿಸುತ್ತದೆ(ಉತ್ತರಾಷಾಢ ನಕ್ಷತ್ರವಿದ್ದ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮ ಮಾಡಬಾರದು ॥

(ಜೀವನದಲ್ಲಿ ಬರುವ ಹಿಂಸೆ, ದು:ಖಗಳನ್ನು ಸಂಪೂರ್ಣವಾಗಿ ಪರಿಹರಿಸುವ ಅತ್ಯುತ್ತಮ ಮಾರ್ಗ !, ಪರಿಹಾರಕ್ಕಾಗಿ ಹಣವನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲವೇ ಇಲ್ಲ!!, ಕಷ್ಟ ರಹಿತ ಅತ್ಯುತ್ತಮ ಯಶಸ್ವೀ ಜೀವನವನ್ನು ನಡೆಸಲು ಈ ಕೆಳಕ್ಕೆ ಒಮ್ಮೆ ಭೇಟಿ ಕೊಡಿ!!!)

೬೧ ರಾತ್ರಿಯಲ್ಲಿ ಬೇಗ ಮಲಗುವುದು ಮತ್ತು ಬೆಳಿಗ್ಗೆ ಬೇಗ ಏಳುವುದು ಆರೋಗ್ಯ, ಬಲ, ಬುದ್ಧಿ, ಹಾಗೂ ಧನವನ್ನು ನೀಡುತ್ತದೆ ॥

೬೨ ಸುಮ್ಮನೆ ಕುಳಿತು ಕಾಲ ಕಳೆಯಬೇಡ, ದೇವರನ್ನು ಭಜಿಸು ಅಥವಾ ಕೆಲಸಮಾಡು ॥

೬೩ ಬೆಲೆ ಬಾಳುವುದರಲ್ಲಿ ಅತಿ ಬೆಲೆ ಬಾಳುವುದು ಯಾವುದು ? ರಾಮನಾಮ । ಸುಲಭದರಲ್ಲಿ ಅತಿ ಸುಲಭವಾದುದು ರಾಮನಾಮ ॥

೬೪ ನಿಜ ಹೇಳುವುದಕ್ಕೆ ಸಮನಾಗಿ ಬೇರೆ ಯಾವ ತಪಸ್ಸೂ ಇಲ್ಲಾ ॥

೬೫ ನಾಲಿಗೆಯನ್ನು ಯಾರು ವಶದಲ್ಲಿ ಇಟ್ಟುಕೊಳ್ಳುತ್ತಾರೋ ಅವನಿಗೆ ಸ್ವರ್ಗವು ಪ್ರಾಪ್ತವಾಗುತ್ತದೆ ॥

೬೬ ಎಲ್ಲಕ್ಕಿಂತಲೂ ದೊಡ್ಡ ಶಸ್ತ್ರ ಯಾವುದು ? ತಾಳ್ಮೆ ಮತ್ತು ದಯೆ ॥

೬೭ ಹೊಡೆಯುವುದಾದರೆ ಯಾರನ್ನು ಹೊಡೆಯಬೇಕು ? ಸಿಟ್ಟನ್ನು ಹೊಡೆಯಬೇಕು ॥

೬೮ ಯಾವನ ಹತ್ತಿರ ಕ್ರೋಧವಿದೆಯೋ ಅವನಿಗೆ ಬೇರೆ ಶತ್ರುವಿನ ಅವಶ್ಯಕತೆ ಏನಿದೆ ? ॥

೬೯ ಪ್ರಯತ್ನ ಮಾಡುವುದರಿಂದ ಬಡತನವಿಲ್ಲ, ಭಜನೆ ಮಾಡುವುದರಿಂದ ಪಾಪವಿಲ್ಲ ॥

೫೮ ತೈತ್ತಿರೀಯಾಣಾಂ ಷಣ್ಮುಹೂರ್ತ ನ್ಯೂನತ್ವೇಪಿ ಉತ್ತರೈವ ಗ್ರಾಹ್ಯಾ ॥

ಯಜುರ್ವೇದ ತೈತ್ತಿರೀಯ ಶಾಖೆಯವರಿಗೆ ಉದಯದಿಂದ ೬ ಮುಹೂರ್ತಗಳು ಹುಣ್ಣಿಮೆಯು ಇಲ್ಲದಿದ್ದರೂ ಸಹ, ಎರಡನೇ ದಿನವೇ ಗ್ರಾಹ್ಯ(ಅಂದರೆ – ಉದಯಕ್ಕಿರುವ ಹುಣ್ಣಿಮೆಯ ದಿನವೇ ಉಪಾಕರ್ಮವನ್ನು ತೈತ್ತಿರೀಯಶಾಖೆಯವರು ಮಾಡಬೇಕು, ಅವರಿಗೆ ಮುಹೂರ್ತ–ಗಳಿಗೆಗಳ ನಿಯಮವು ಈ ವಿಷಯದಲ್ಲಿ ಇಲ್ಲ) ॥

೫೯ ಶ್ರವಣಂ (ಶ್ರಾವಣಂ) ಪೌರ್ಣಮಾಸೀ ಚ ಸಂಗವಸ್ಸ್ಪೃಶಮಾಚರೇತ್ । ತಥ್ಯೈವೋದಯಿಕಂ ಗ್ರಾಹ್ಯಂ ನಾನ್ಯಥೋದಯಿಕಂ ಭವೇತ್ । ಪ್ರಾತಸ್ಸಂಗವನಂ ಪರ್ವಶ್ರಾವಣೇ ಪೂರ್ವಮುತ್ತಮಃ ॥

ಶ್ರಾವಣಮಾಸದ ಹುಣ್ಣಿಮೆಯು, ಸಂಗವಕಾಲದಲ್ಲಿ ಇದ್ದರೆ । ಹಾಗೆಯೇ, ಉದಯದಲ್ಲಿದ್ದರೆ ಗ್ರಾಹ್ಯವು ಎಂದರ್ಥ, ಉದಯಕ್ಕೆ ಬೇರೇ ತಿಥಿಯು ಬಂದರೆ ಉಪಾಕರ್ಮವನ್ನು ಅಂದು ಮಾಡಬಾರದು । ಒಂದುವೇಳೆ, ಮೊದಲದಿನ ಸಂಗವಕಾಲದಲ್ಲಿ ಹುಣ್ಣಿಮೆಯು ಇದ್ದು, ಮರುದಿನ ಉದಯಕ್ಕೆ ಹುಣ್ಣಿಮೆಯು ಇದ್ದರೆ ಆಗ ಹುಣ್ಣಿಮೆಯು ಉದಯಕ್ಕಿರುವ ದಿನವನ್ನೇ ಆದ್ಯತೆಯಾಗಿ ಗ್ರಹಿಸಬೇಕು ॥

೬೦ ಶ್ರವಣೇ (ಶ್ರಾವಣೇ) ನ ತು ಯತ್ಕರ್ಮ ಉತ್ತರಾಷಾಢ ಸಂಯುತೇ । ಸಂವತ್ಸರ ಕೃತೋಧ್ಯಾಯಃ ತತ್ ಕ್ಷಣಾದೇವ ನಶ್ಯತಿ ॥

ಶ್ರಾವಣ ಹುಣ್ಣಿಮೆಯಲ್ಲಿ ಮಾಡುವ ಉಪಾಕರ್ಮದ ದಿನದಲ್ಲಿ ಉತ್ತರಾಷಾಢ ನಕ್ಷತ್ರವಿದ್ದು, ಅಂದು ಉಪಾಕರ್ಮವನ್ನು ಮಾಡಿದರೆ ಆ ವರ್ಷ ಮಾಡಿದ ಪೂರ್ಣ ಅಧ್ಯಯನವನ್ನು ಅದು

ನಾಶಪಡಿಸುತ್ತದೆ(ಉತ್ತರಾಷಾಢ ನಕ್ಷತ್ರವಿದ್ದ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮ ಮಾಡಬಾರದು ॥

(ಜೀವನದಲ್ಲಿ ಬರುವ ಹಿಂಸೆ, ದು:ಖಿಗಳನ್ನು ಸಂಪೂರ್ಣವಾಗಿ ಪರಿಹರಿಸುವ ಅತ್ಯುತ್ತಮ ಮಾರ್ಗ !, ಪರಿಹಾರಕ್ಕಾಗಿ ಹಣವನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲವೇ ಇಲ್ಲ!!, ಕಷ್ಟ ರಹಿತ ಅತ್ಯುತ್ತಮ ಯಶಸ್ವೀ ಜೀವನವನ್ನು ನಡೆಸಲು ಈ ಕೆಳಕ್ಕೆ ಒಮ್ಮೆ ಭೇಟಿ ಕೊಡಿ!!!)

೬೧ ರಾತ್ರಿಯಲ್ಲಿ ಬೇಗ ಮಲಗುವುದು ಮತ್ತು ಬೆಳಿಗ್ಗೆ ಬೇಗ ಏಳುವುದು ಆರೋಗ್ಯ, ಬಲ, ಬುದ್ಧಿ, ಹಾಗೂ ಧನವನ್ನು ನೀಡುತ್ತದೆ ॥

೬೨ ಸುಮ್ಮನೆ ಕುಳಿತು ಕಾಲ ಕಳೆಯಬೇಡ, ದೇವರನ್ನು ಭಜಿಸು ಅಥವಾ ಕೆಲಸಮಾಡು ॥

೬೩ ಬೆಲೆ ಬಾಳುವುದರಲ್ಲಿ ಅತಿ ಬೆಲೆ ಬಾಳುವುದು ಯಾವುದು ? ರಾಮನಾಮ । ಸುಲಭದರಲ್ಲಿ ಅತಿ ಸುಲಭವಾದುದು ರಾಮನಾಮ ॥

೬೪ ನಿಜ ಹೇಳುವುದಕ್ಕೆ ಸಮನಾಗಿ ಬೇರೆ ಯಾವ ತಪಸ್ಸೂ ಇಲ್ಲಾ ॥

೬೫ ನಾಲಿಗೆಯನ್ನು ಯಾರು ವಶದಲ್ಲಿ ಇಟ್ಟುಕೊಳ್ಳುತ್ತಾರೋ ಅವನಿಗೆ ಸ್ವರ್ಗವು ಪ್ರಾಪ್ತವಾಗುತ್ತದೆ ॥

೬೬ ಎಲ್ಲಕ್ಕಿಂತಲೂ ದೊಡ್ಡ ಶಸ್ತ್ರ ಯಾವುದು ? ತಾಳ್ಮೆ ಮತ್ತು ದಯೆ ॥

೬೭ ಹೊಡೆಯುವುದಾದರೆ ಯಾರನ್ನು ಹೊಡೆಯಬೇಕು ? ಸಿಟ್ಟನ್ನು ಹೊಡೆಯಬೇಕು ॥

೬೮ ಯಾವನ ಹತ್ತಿರ ಕ್ರೋಧವಿದೆಯೋ ಅವನಿಗೆ ಬೇರೆ ಶತ್ರುವಿನ ಅವಶ್ಯಕತೆ ಏನಿದೆ ? ॥

೬೯ ಪ್ರಯತ್ನ ಮಾಡುವುದರಿಂದ ಬಡತನವಿಲ್ಲ, ಭಜನೆ ಮಾಡುವುದರಿಂದ ಪಾಪವಿಲ್ಲ ॥

೭೦ ಮನುಷ್ಯರ ಮನಸ್ಸು, ಆಪತ್ತಿನಲ್ಲಿ ಹರಕೆ – ಸಂಪತ್ತಿನಲ್ಲಿ ಗೊರಕೆ ! ॥

೭೧ ಈ ದೇಹದಲ್ಲಿ ಅಡಗಿರುವ ಶತ್ರು ಯಾರು ? ಸೋಮಾರಿತನ ॥

೭೨ ಯಾವನು ಭಗವದ್ಗೀತೆ, ಶ್ರೀಮದ್ಭಾಗವತ ಮತ್ತು ರಾಮಾಯಣವನ್ನು ಅನುಸರಿಸಿ ವ್ಯವಹಾರವನ್ನು ಮಾಡುವುದಿಲ್ಲವೋ ಅವನು ತುಂಬಾ ದು:ಖವನ್ನು ಅನುಭವಿಸಬೇಕಾಗುತ್ತದೆ ॥

೭೩ ಯಾವ ಮನುಷ್ಯನಲ್ಲಿ ವಿದ್ಯೆ, ತಪಸ್ಸು, ದಾನ, ಜ್ಞಾನ, ಶೀಲ ಗುಣಗಳು ಇರುವುದಿಲ್ಲವೋ ಅವನ ಇರುವಿಕೆಯು ಭೂಮಿಗೆ ಭಾರವಾಗುತ್ತದೆ ॥

೭೪ ಕೊಟ್ಟ ಮಾತಿನಂತೆ ನಡೆಯದೇ ಅದನ್ನು ಬದಲಾಯಿಸುವವನು ಜೀವಂತ ಶವ ॥

೭೫ ಸಂಸಾರ (ಪ್ರಾಪಂಚಿಕ) ಸಂಬಂಧವಾದ ಮಾತುಗಳನ್ನು ಬಹಳ ಕಡಿಮೆ ಮಾಡಬೇಕು ॥

೭೬ 'ರುಚಿ' ಕೆಟ್ಟರೆ ಪರವಾಗಿಲ್ಲ, ಆದರೆ 'ಅಭಿರುಚಿ' ಕೆಡಬಾರದು ॥

೭೭ ಕಾಡಿನಲ್ಲಿವೆ 'ಕಾಡು' ಪ್ರಾಣಿಗಳು, ಆದರೆ ನಾಡಿನಲ್ಲಿವೆ 'ಕಾಡುವ ಪ್ರಾಣಿಗಳು' ಜೋಕೆ ॥

~~~~~~~~
~~~~~~~~

2004ರಲ್ಲಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸೂಚನೆಯಂತೆ ಶ್ರೀಯುತ ಶರ್ಮರನ್ನು ಬೆಂಗಳೂರಿನ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆ ವತಿಯಿಂದ 'ವೇದಭೂಷಣ' ಬಿರುದಿನೊಂದಿಗೆ ಸನ್ಮಾನಿಸುತ್ತಿರುವುದು

ಶ್ರೀಯುತ ಶರ್ಮರನ್ನು 2012ರಲ್ಲಿ ಶಿವಮೊಗ್ಗದ ವೈದಿಕ ಪರಿಷತ್ ವತಿಯಿಂದ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಬಿ.ಎನ್. ವಿ. ಸುಬ್ರಹ್ಮಣ್ಯ, ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಗಳಾದ ಶ್ರೀ ಈಶ್ವರಪ್ಪನವರು ಸನ್ಮಾನಿಸುತ್ತಿರುವುದು

ಶ್ರೀಯುತ ಶರ್ಮರನ್ನು 2012ರಲ್ಲಿ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ದೆಹಲಿಯ 'ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆ'ಯ ವತಿಯಿಂದ ಸನ್ಮಾನಿಸುತ್ತಿರುವುದು

ಅನುವಾದಕ ಲೇಖಕರು ಮತ್ತು ಪ್ರಕಾಶಕರು :

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ಚೈತನ್ಯ ಗುರುನಾಥ ಪ್ರಕಾಶನ

C/o. ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು

448 'ಸಂಹಿತಾ', 4ನೇ ತಿರುವು, ರವೀಂದ್ರನಗರ

ಶಿವಮೊಗ್ಗ, ಕರ್ನಾಟಕ

ದೂ. : 9686407982